(SRI B. N. RAME GOWDA.)

Orders to facilitate the grant of date reserve lands on which there are less than 5 to 10 trees per acre or lands on which there are no trees at all for *bona fide* agricultural purposes and issue suitable modifications for the Standing Orders?

A.—Sri T. CHANNIAH (Minister for Public Health and Local Self-Government).—

(*a*) The Rules for the grant of date reserve lands for cultivation are printed on pages 154–156 of the Mysore Excise Manual, Volume I (1943 Edition).

(*b*) All date reserve lands which contain no trees or having sparse growth, *i.e.*, 5 to 10 trees per acre are being released for cultivation except in cases—

(i) where they are specifically reserved for growing date trees.

(ii) where they are contiguous to other numbers having large number of date trees.

There is no need to modify the standing orders.

BUDGET FOR 1954-55—DEMANDS FOR GRANTS.

DEMAND No. 25—CO-OPERATION.

42. CO-OPERATION.

Mr. SPEAKER.—Motion moved:

"That a sum not exceeding Rs. 7,80,000 be granted to the Government to defray the charges which will come in course of payment during the year ending 31st day of March 1955, in respect of 'Co-operation'."

As regards time, I have thought of this arrangement:

The present Demand on Co-operation will go on till 2-15. From 2-15 to 4, Demand No. 26. From 4 to 4-30 Demand No. 27. From 4-30 to 5, Demand No 41.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).— ಸ್ವಾಮಿ, ಈ ಸಹಕಾರ ಸಂಘಗಳು 1947ನೇ ಇಸವಿಯಲ್ಲಿ ಸುಮಾರು 2,500 ಇದ್ದದ್ದು 1954ರಲ್ಲಿ 5,000ಕ್ಕೆ ಮೇಲ್ಪಟ್ಟು ಎಂದರೆ ಸುಮಾರು 5269ರ ವರೆಗೂ ಇವೆ. Paid up shares 1·6 ಕೋಟಿ ರೂಪಾಯಿ ಮತ್ತು ವರ್ಕಿಂಗ್ ಕ್ಯಾಪಿಟಲ್ 7 ಕೋಟಿ ರೂಪಾಯಿ ಕೂಡ ಇದೆ. ಇವೊತ್ತಿನ ದಿವಸ ನಮ್ಮ ದೇಶದ ಆರ್ಥಿಕ ಕ್ಷೇತ್ರದಲ್ಲಿ ಏನು ತೊಂದರೆ ಇದೆಯೋ ಅದು ಸುಲಭವಾಗಿ ಪರಿಹಾರವಾಗಬೇಕಾದರೆ ಈ ಸಹಕಾರ ಸಂಘಗಳು ಬಹುಮಟ್ಟಿಗೆ ಅಭಿವೃದ್ಧಿಯಾಗಿ ಚೆನ್ನಾಗಿ ಕೆಲಸ ಮಾಡಬೇಕು. ಹಿಂದಿನ ಸರ್ಕಾರದವರು ಈ ಸಹಕಾರ ಸಂಘಗಳನ್ನು ಅಭಿವೃದ್ಧಿಪಡಿಸಿ ರೈತರಿಗೆ ಬಹಳವಾಗಿ ಅನುಕೂಲ ಮಾಡಿಕೊಡಬೇಕೆಂಬ ಸದುದ್ದೇಶದಿಂದ, ಅದರಲ್ಲೂ ಶ್ರೀಮಾನ್ ಮರಿಯಪ್ಪನವರ ಪ್ರೋತ್ಸಾಹದಿಂದ ಒಂದು ಯೋಜನೆ ತಯಾರಾಗಿ ಸಂಸ್ಥಾನದಲ್ಲೆಲ್ಲಾ ಈ ಮಲ್ಟಿ-ಪರ್‌ಪಸ್ ಕೋ-ಆಪರೇಟೀವ್ ಸೊಸೈಟಿಗಳು ಸ್ಥಾಪನೆ ಆದವು. ಒಟ್ಟು 5269 ಸೊಸೈಟಿಗಳ ಪೈಕಿ ಅನೇಕ ಮಲ್ಟಿ-ಪರ್‌ಪಸ್ ಕೋ-ಆಪರೇಟೀವ್ ಸೊಸೈಟಿಗಳು ಇವೆ. ಈ ಸೊಸೈಟಿಗಳು ಸ್ಥಾಪನೆಯಾದಾಗ ನಾನೂ ಕೂಡ ಜಿಲ್ಲಾ ಡೆವಲಪ್‌ಮೆಂಟ್ ಕಮಿಟಿಯ ಅಧ್ಯಕ್ಷನಾಗಿದ್ದೆ. ಆ ಕಾಲದಲ್ಲಿ ಬಹಳ ಉತ್ಸಾಹದಿಂದ ಸಂಸ್ಥಾನದ ಮೂಲೆ ಮೂಲೆಯಲ್ಲೂ ಈ ಸೊಸೈಟಿಗಳನ್ನು ಸ್ಥಾಪನೆ ಮಾಡಿದರು. ಮತ್ತು ಅವು ಬಹಳ ಚೆನ್ನಾಗಿ ಕೆಲಸಮಾಡಿದವು ಎಂದು ಹೇಳುತ್ತೇನೆ. ರೈತರಿಗೆ ಇರತಕ್ಕ ಅನೇಕ ಕಷ್ಟವಾದಂಥ ಸಮಸ್ಯೆಗಳು ಪರಿಹಾರವಾಗಬೇಕು, ಜನರಿಗೆ ಫಲದೊರೆಯಬೇಕೆಂಬ ಒಂದು ದೊಡ್ಡ ಆಸೆಯನ್ನಿಟ್ಟುಕೊಂಡು ಅನೇಕ ಮಂದಿ ಈ ಮಾನ್ಯ ಸಭೆಯ ಸದಸ್ಯರು ಮತ್ತು ಶ್ರೀಮಾನ್ ಮರಿಯಪ್ಪನವರೂ ಕೂಡ ಬಹಳ ಶ್ರಮ ಮತ್ತು ಆಸಕ್ತಿ ವಹಿಸಿ ಬಹಳ ಉತ್ಸಾಹದಿಂದ ಕೆಲಸ ಮಾಡಿದರು. ಒಂದೆರಡು ವರ್ಷಗಳು ಈ ಸೊಸೈಟಿಗಳಲ್ಲಿ ಬಹಳ ಚೆನ್ನಾಗಿ ಕೆಲಸಗಳು ನಡೆದವು. ಈಚೆಗೆ ಈ ಸೊಸೈಟಿಗಳ ಕೆಲಸ ಕಾರ್ಯಗಳು ಸ್ವಲ್ಪವೂ ಕೂಡ ಸಮರ್ಪಕವಾಗಿಲ್ಲ ಎಂದು ಹೇಳಿ ಬಹಳ ವಿಷಾದದಿಂದ ತಿಳಿಸಬೇಕಾಗಿದೆ. ಈಗ ನೋಡಿದ್ದರಲ್ಲಿ ನಮ್ಮ ಜಿಲ್ಲೆಯಲ್ಲಿ ಅನೇಕ ಸೊಸೈಟಿಗಳು ಮುಚ್ಚುವ ಸ್ಥಿತಿಗೆ ಬಂದಿವೆ. ಇನ್ನು ಕೆಲವು ಸೊಸೈಟಿಗಳು ಚೆನ್ನಾಗಿ ಕೆಲಸ ಮಾಡುತ್ತಿಲ್ಲ. ಕೆಲವು ಸೊಸೈಟಿಗಳು ಚೆನ್ನಾಗಿ ಕೆಲಸಮಾಡುತ್ತಿವೆ. ಇದನ್ನು ಮೊದಲಿನಿಂದಲೂ ಕೂಡ ನಾನು ಸರ್ಕಾರದವರ ಗಮನಕ್ಕೆ ಆಗಾಗ್ಗೆ ತರುತ್ತಲೇ ಇದ್ದೇನೆ.

ಈ ದಿವಸ ಕೋ-ಆಪರೇಷನ್ ಹೆಡ್‌ನಲ್ಲಿ ನಮ್ಮ ಮಾನ್ಯ ಮಿತ್ರರು ಕಳುಹಿಸಿರುವ ಖೋತಾ ಸೂಚನೆಗಳನ್ನು ನೋಡಿದರೂ ಕೂಡ ಅನೇಕರು ಮಲ್ಟಿ-ಪರ್ಪಸ್ ಸೊಸೈಟಿಗಳು ತೃಪ್ತಿಕರವಾಗಿ ಕೆಲಸಮಾಡುತ್ತಿಲ್ಲವೆಂಬ ವಿಷಯವನ್ನೇ ಪ್ರಸ್ತಾಪಿಸಬೇಕೆಂದಿದ್ದಾರೆ. ಆ ವಿಷಯವನ್ನೇ ಹೆಚ್ಚಾಗಿ ನಮೂದಿಸಲಾಗಿದೆ. ಈ ಸೊಸೈಟಿಗಳು ಚೆನ್ನಾಗಿ ಕೆಲಸಮಾಡದಿದ್ದರೆ ಮುಂದೆ ರೈತರಿಗೆ ಏನೇನು ಸೌಲಭ್ಯ ದೊರಕಬೇಕೋ ಅದು ದೊರಕುವುದಕ್ಕೆ ಬಹಳ ಕಾಲ ಹಿಡಿದು ಅವರಿಗಾಗುವ ತೊಂದರೆಗಳನ್ನು ಪರಿಹಾರಮಾಡಲು ಬಹಳ ಕಷ್ಟವಾಗುತ್ತದೆ. ಸರ್ಕಾರದವರು ಈಚೆಗೆ ಈ ಸೊಸೈಟಿಗಳು ಹೇಗೆ ಕೆಲಸ ಮಾಡುತ್ತಿವೆಯೆಂಬುದನ್ನು ನೋಡಿ ಅವನ್ನು ಅಭಿವೃದ್ಧಿಪಡಿಸಿ ದೇಶಕ್ಕೆ ಒಳ್ಳೆಯದಾಗುವಂತೆ ಮಾಡಲು ಸಾಕಷ್ಟು ಗಮನ ಕೊಡಲಿಲ್ಲವೆಂದು ಕಾಣುತ್ತದೆ. ಇವುಗಳು ಹೀನಸ್ಥಿತಿಗೆ ಬರುವುದಕ್ಕೆ ಮುಖ್ಯ ಕಾರಣವೇನೆಂದರೆ ಸಹಕಾರ ತತ್ವದ ಪ್ರಕಾರ ಜನರು ವಾಲಂಟರಿಯಾಗಿ ನಮಗೆ ನಾವೇ ಅನುಕೂಲವಾಗುವಂತೆ ಸೊಸೈಟಿಗಳನ್ನು ಮಾಡಿಕೊಳ್ಳಬೇಕೆಂದು ಈ ಒಂದು ಸದುದ್ದೇಶದಿಂದ ಮುಂದೆ ಬರುತ್ತಿಲ್ಲ. ಜನರಿಗೆ ತಕ್ಕಮಟ್ಟಿಗೆ ತಿಳುವಳಿಕೆಯಿರುವುದರಿಂದ ಅವರ ಅನುಕೂಲತೆ ಅವರೇ ಮಾಡಿಕೊಳ್ಳಲಿ, ನಾವು ಸೊಸೈಟಿ

ಸ್ಥಾಪನೆಮಾಡಿ ಮಾರ್ಗದರ್ಶಿಗಳಾಗಿ ಕೆಲವುಕಾಲ ಕೆಲಸಕಾರ್ಯಮಾಡಿ ಅದಕ್ಕೆ ಬೇಕಾದ ಅನುಕೂವನ್ನೊದಗಿಸಿದರೆ ಮುಂದೆ ಅವರು ಅಭಿವೃದ್ಧಿಮಾಡಿಕೊಳ್ಳಬಹುದು ಎಂಬ ಒಂದು ಒಳ್ಳೆಯ ಉದ್ದೇಶದಿಂದ ಸರ್ಕಾರದವರು ಈ ಸೊಸೈಟಿಗಳನ್ನು ಸ್ಥಾಪನೆಮಾಡಿದರು. ಇದೇ ರೀತಿಯಾಗಿ ಸರ್ಕಾರಿ ನೌಕರರು ಈ ಸೊಸೈಟಿಗಳಿಗೆ ಛೇರ್ಮನ್ ಮತ್ತು ಸೆಕ್ರೆಟರಿಗಳಾಗಿದ್ದರು. ಸರ್ಕಾರದವರು ಕೆಲವು ಕಾಲ ಇದಕ್ಕೆ ಹಣ ಸಹಾಯ ಕೂಡ ಮಾಡಿದರು. ಆದರೆ ಈ ಸೊಸೈಟಿಗಳಿಗೆ ಸರ್ಕಾರದವರು ಸಹಾಯ ಮಾಡುವುದನ್ನು ನಿಲ್ಲಿಸಿದ ತಕ್ಷಣ ಅವು ಇದ್ದಕ್ಕಿದ್ದ ಹಾಗೆ ಜನರಿಂದ ಸಾಕಾದಷ್ಟು ಪ್ರೋತ್ಸಾಹವಿಲ್ಲದೆ ಕೆಲಸಮಾಡುವುದು ತಪ್ಪಿಹೋಗುತ್ತಾ ಬಂತು. ಇದರ ಆವಶ್ಯಕತೆ ಕುರಿತು ಹೆಚ್ಚಾಗಿ ಹೇಳಬೇಕಾಗಿಲ್ಲ. ಈ ದಿವಸ ರಿಜರ್ವ್ ಬ್ಯಾಂಕು ಕೂಡ ಅಲ್ಪಾವಧಿ ಸಾಲವನ್ನು ರೈತರಿಗೆ ಕೊಡಲು ಅನುಕೂಲಮಾಡುತ್ತಿದೆ ಮತ್ತು ಮುಂದೆ ಬರುತ್ತಿದೆ. ಇದರ ಅಂಗವಾಗಿ ನಮ್ಮ ಸಂಸ್ಥಾನದಲ್ಲೂ ಕೂಡ ಮೂರು ಜಿಲ್ಲೆಗಳಲ್ಲಿ ಡಿಸ್ಟ್ರಿಕ್ಟ್ ಕೋ-ಆಪರೇಟಿವ್ ಬ್ಯಾಂಕುಗಳನ್ನು ಸ್ಥಾಪನೆಮಾಡಿದ್ದಾರೆ. ಈ ಬ್ಯಾಂಕುಗಳೂ ಕೂಡ ಸಾಲ ಕೊಡುವುದಕ್ಕೆ ಅನುಕೂಲತೆ ನೀಡಬೇಕಾಗಿದೆ. ನಾನೂ ಮೊನ್ನೆ ಬ್ಯಾಂಕು ಮೀಟಿಂಗಿಗೆ ಹೋಗಿದ್ದೆ. ಮಲ್ಟಿ ಪರ್ಪಸ್ ಸೊಸೈಟಿ ಅಥವಾ ಬೇರೆ ಸೊಸೈಟಿ ಬೇಕಾದರೂ ಆಗಬಹುದು. ಬೇರೆ ಸೊಸೈಟಿ ಸಾಮಾನ್ಯವಾಗಿರುವುದು ಹೋಬಳಿ ಹೆಡ್‌ಕ್ವಾರ್ಟರುಗಳಲ್ಲಿ ಮತ್ತು ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿ ಮಾತ್ರ. ಉಳಿದ ಕಡೆ ಇರುವ ಮಲ್ಟಿಪರ್ಪಸ್ ಸೊಸೈಟಿಗಳು ಕೆಲಸಮಾಡುತ್ತಿಲ್ಲ. ಆದ್ದರಿಂದ ಈ ಸೊಸೈಟಿಗಳು ಚೆನ್ನಾಗಿ ಕೆಲಸ ಮಾಡದಿದ್ದರೆ ಸಾಲ ಹಂಚಲು ಬೇಕಾಗಿರುವ ಏಜೆನ್ಸಿಯಿಲ್ಲ. ಆ ದೃಷ್ಟಿಯಿಂದಲೂ ಕೂಡ ಮಲ್ಟಿಪರ್ಪಸ್ ಸೊಸೈಟಿಗಳ ಹಿತ ರಕ್ಷಣೆ ಮಾಡಬೇಕು, ಒಂದು ನಿರಾಶಾ ಭಾವನೆಯಿಂದ ಇಲ್ಲಿಗೇ ಕೈಬಿಡದೆ ಅವುಗಳನ್ನು ಅಭಿವೃದ್ಧಿಮಾಡಲು ಸರ್ಕಾರ ಈಗಲಾದರೂ ಕೂಡ ಹೆಚ್ಚು ಆಸಕ್ತಿ ವಹಿಸಿ ಆ ಕಡೆ ಗಮನ ಕೊಡಬೇಕು ಎಂದು ಮನವಿಮಾಡಿಕೊಳ್ಳುತ್ತೇನೆ. ಹಿಂದೆ ಅವು ಸ್ಥಾಪನೆಯಾದಾಗ ಸರ್ಕಾರದ ಕಂಟ್ರೋಲ್ ಸಾಮಾನುಗಳನ್ನು ಅವು ಹಂಚಿದಾಗ ಕೆಲವುವೇಳೆ ಅವು ಲಾಭದಾಯಕವಾಗಿ ನಡೆದವು. ವ್ಯವಸಾಯದ ಮಂತ್ರಿಗಳೇ ಕೋ-ಆಪರೇಟಿವ್ ಇಲಾಖೆ ಮಂತ್ರಿಗಳೂ ಆಗಿದ್ದಾರೆ. ಮೊನ್ನೆ ತಾನೆ ವ್ಯವಸಾಯದ ಇಲಾಖೆಯ ವಿಷಯಗಳಲ್ಲಿ ಟೀಕೆಮಾಡುತ್ತಾ ಆ ಇಲಾಖೆಯ ಇನ್ಸ್ಪೆಕ್ಟರುಗಳಿಂದ ಮತ್ತು ಡಿಪೋಗಳಿಂದ ರೈತರಿಗೆ ಸಹಾಯವಾಗುತ್ತಿಲ್ಲ, ಅವರು ಸರಿಯಾಗಿ ಕೆಲಸ ಮಾಡದೆ ಸುಮ್ಮನೆ salesmen ಆಗಿ ವ್ಯಾಪಾರ ನಡೆಸುತ್ತಿದ್ದಾರೆ, ಡಿಪೋಗಳು ವ್ಯಾಪಾರ ಮಾಡುವ ಸ್ಥಳಗಳಾಗಿವೆ, ಇನ್ಸ್ಪೆಕ್ಟರು ಕೂಡ ವ್ಯಾಪಾರಸ್ಥರಂತೆ ಕೆಲಸಮಾಡುತ್ತಿದ್ದಾರೆ, ಹಾಗಿರುವಾಗ ಅಂಥವರನ್ನು ಮತ್ತೊಂದು ಕಡೆಗೆ ಏಕೆ ವರ್ಗ ಮಾಡಬಾರದು ಎಂದು ಹೇಳಿದರು. ವ್ಯವಸಾಯದ ಸಾಮಾನುಗಳನ್ನೂ ಕೋ-ಆಪರೇಟಿವ್ ಸೊಸೈಟಿಗೇ ಮಾರಾಟಮಾಡಲು ವಹಿಸಬಹುದು. ಅಲ್ಲದೆ ತಕಾವಿ ಸಾಲ, ಲ್ಯಾಂಡ್ ಇಂಪ್ರೂವ್‌ಮೆಂಟ್ ಸಾಲ ಮುಂತಾದುವನ್ನು ರೆವೆನ್ಯೂ ಇಲಾಖೆಯಿಂದ ಕೊಡುತ್ತಿರುವುದನ್ನು ಕೋ-ಆಪರೇಟಿವ್ ಸೊಸೈಟಿಗಳಿಗೆ ವಹಿಸಿ ಈ ಸೊಸೈಟಿಗಳನ್ನು ಅಭಿವೃದ್ಧಿಪಡಿಸಲು ಸರ್ಕಾರದವರು ಪ್ರಯತ್ನಮಾಡಬೇಕೆಂದು ಈ ಸಮಯದಲ್ಲಿ ಮನವಿಮಾಡುತ್ತೇನೆ. ಹಾಗೆ ಮಾಡಿದರೆ ಈ ಸೊಸೈಟಿಗಳೂ ಅಭಿವೃದ್ಧಿಯಾಗುವುವು. ರೈತರಿಗೆ ಈ ಸೊಸೈಟಿಗಳ ಮುಖಾಂತರ ಹಣ ಸಹಾಯ ಮುಂತಾದುವನ್ನುಮಾಡಲು ಪ್ರಯತ್ನ ಮಾಡಿದರೆ ಒಳ್ಳೆಯ ಪರಿಣಾಮವುಂಟಾಗುತ್ತದೆ. ಹಾಗಿಲ್ಲದೆ ಈ ಸೊಸೈಟಿಗಳು ಚೆನ್ನಾಗಿ ಕೆಲಸಮಾಡದಿದ್ದರೆ, ಅಲ್ಲಿ ಕೆಲಸ ಮಾಡುವವರಿಗೆ ಸರಿಯಾಗಿ ತರಪೇತುಮಾಡದಿದ್ದರೆ ಜನರಲ್ಲಿ ಒಂದು ವಿಧವಾದ ಭಾವನೆಯುಂಟಾಗಲು ಅವಕಾಶವಾಗುವುದೂ ಅಲ್ಲದೆ ನಮ್ಮ ಯೋಜನೆಗಳೂ ಸಫಲವಾಗುವುದಿಲ್ಲ. ಇದಕ್ಕೆ ಪ್ರಚಾರ ಕಾರ್ಯವನ್ನು ಸಹ ಕೈಕೊಂಡು ಸರ್ಕಾರ ತಕ್ಕ ಪ್ರಯತ್ನ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

Sri S. SRINIVASA IYENGAR (T.-Narsipur).—Sir, the object with which the Regulated Markets were established in Mysore have not been fully fulfilled. In Mysore we have Regulated Markets, the only result being a levy of six pies or nine pies, according to the tariff, and collect at the tolls, irrespective of the fact whether the goods are intended for sale or consumption. Sir, as I have already said, the object of the Government in establishing the Regulated Market was to ensure correct weight, proper value, correct measure, avoiding the middleman and quick disposal. Sir, on all these heads, I believe, the working of the Regulated Market in Mysore has failed. In the first instance, correct weight and measure is perhaps assured. Regarding the middleman, Sir, previously the producer was coming to the bazaar and paid a commission of four annas, sold his goods and used to return to his headquarters. Now he has to pay three pies in a rupee, that is Rs. 1-9-0 per cent. The producer who sold his goods by paying a commission of four annas has to pay now Rs. 1-9-0 per cent. Another thing is, in the Regulated Market, as and when goods come, they are heaped up and then the bidding takes place. By the time the last bidding is finished, it would be nearly 3 o'clock in the noon. Can you ever expect a producer who comes to Mysore at six o'clock in the morning to wait till three o'clock to sell his goods? Then, Sir, it is not the producer who gets the profit but the agent who goes to the village, collects from the producers, imports to Mysore and sells there. You assure the commission to the seller, *i.e.*, to the middleman. The benefit is not derived by the real producer. The broker will reserve his

(SRI S. SRINIVASA IYENGAR.)

own profit. Sir, these Regulated Markets are to be established in taluk headquarters rather than in cities and then regulate the sale. In the Regulated Market you have assured the commission of Rs. 1-9-0 per cent. For a business of Rs. 1,000, the Commission Agent gets Rs. 15-10-0. It is a drain on the producer. With what use? The producer cannot leave the market yard until the heap formed by him is reached and a producer with a small quantity will have to wait till the end. Big merchants come there and they will purchase large heaps rather than smaller heaps. So, the producer will be made to wait till three o'clock in the afternoon. My object in saying this, Sir, is to impress on Government the necessity of having arrangements to pay money to the smaller producers immediately. Supposing a man brings two or three pallas of grains; the arrangement should be such that that small quantity should be purchased and money paid and he must be sent away quickly. What is happening in the Regulated Market now is, because of the large volume of sales, the purchaser does not pay the cash on the spot. The commission agents bid in the auction and the money is paid to the producer slowly, either in the evening or the next morning. So, I would urge on Government to consider the necessity of financing these Regulated Markets so that immediately the produce is bought it may be paid for so that the producer may return to his headquarters early.

Then the next thing is about the Land Mortgage Bank. The affairs of the Central Land Mortgage Bank is far from satisfactory. One of the Directors is also an editor of a paper called 'Sahakara Patrike' and he has written like this in his editorial. With the permission of the Chair I will read it :

"ದರಖಾಸ್ತುಗಳ ಫೈಸಲಾತಿಯಲ್ಲಿ ಆಗುತ್ತಿರುವ ಕಾಲವಿಳಂಬ, ಸಂಘಗಳು ಕಾರ್ಯ ನಿರ್ವಹಿಸುತ್ತಿರುವ ರೀತಿ, ಕೇಂದ್ರ ಬ್ಯಾಂಕಿನಲ್ಲಿ ಹೊಂದಾಣಿಕೆಯಿಲ್ಲದೆ ಕೆಲಸ ನಡೆಸುತ್ತಿರುವುದು, ಶೋಚನೀಯವಾಗಿರುವುದಲ್ಲದೆ ಈ ಜಮೀನು ಅಡಮಾನದ ಶಿಸ್ತು ಗಮನಾರ್ಹ ರೀತಿಯಲ್ಲಿ ಮುಂದುವರಿಯುತ್ತಿಲ್ಲ."

Why I have placed this before the House is, with the present arrangements it is not possible for the indebted raiyat to obtain loan in the Land Mortgage Bank. It is the most influential men that get it. I have represented this more than once. If you examine the loans sanctioned by the Land Martgage Bank, you will see that it is only the debtor who is indebted to the extent of Rs. 10,000 or Rs. 15,000 that has been given loans by this Bank to get his debts discharged. Therefore, it is necessary that Government should take immediate steps to see that the rural indebtedness is tackled properly and help rushed to these various centres. The work of the Central Land Mortgage Bank has to be examined early.

Sir, Co-operative Development, no doubt, has been spread throughout the State but not on proper line. As was said by Sri G. A. Thimmappa Gowda, they were working with increased activity for the last four or five years. For the last three years they have stopped working. Many of these institutions are *defunct*. When the Government were working food control, these societies thought that they should be merely their selling agents. When Government wanted to distribute the chemical manure, these societies thought that it was their duty just to sell it. Sir, Government should have placed them on a better footing and instead of allowing these societies to become defunct, it is necessary to see that the benefit of co-operation is extended to the villager at his door.

1-30 P.M.

ಶ್ರೀ ಕೆ. ಸಿಂಗಾರಿಗೌಡ (ನಾಗಮಂಗಲ).—ಅಧ್ಯಕ್ಷರೇ, ಸಂಸ್ಥಾನದಲ್ಲಿರುವ ಸಮಗ್ರ ಗ್ರಾಮಗಳ ರೈತರಿಗೆ ನೆರವು ನೀಡುವ ಉದ್ದೇಶದಿಂದ ಸಹಕಾರ ಸಂಘಗಳನ್ನು ಸರ್ಕಾರದವರು ಸ್ಥಾಪನೆ ಮಾಡಿದರು. ಮೊದಮೊದಲು ಹೆಚ್ಚು ಸಂಖ್ಯೆಯಲ್ಲಿ ಈ ಸಂಘಗಳು ಸ್ಥಾಪನೆಯಾದರೂ ಕ್ರಮೇಣ ಅನೇಕ ಸಂಸ್ಥೆಗಳು ಅಳಿಸಿ ಹೋಗಿವೆ. ಇದಕ್ಕೆ ಕಾರಣವಾದರೂ ಇಷ್ಟು : ಸಹಕಾರ ಸಂಸ್ಥೆಗಳಲ್ಲಿ ಸಹಕಾರ ಮನೋಭಾವನೆಯೇ ಅಳಿಸಿ ಹೋಗಿ ವೈಷಮ್ಯ ಮನೋಭಾವ ಅಲ್ಲಲ್ಲಿ ಹುಟ್ಟಿದುದು, ಸಹಕಾರ ಸಂಘಗಳ ಕೆಲಸ ಕಾರ್ಯ ಸಮರ್ಪಕವಾಗಿ ನಡೆಯದೇ ಇದ್ದುದು ಮತ್ತು ಜನತೆ ನಿರೀಕ್ಷಿಸಿದಷ್ಟು ಪ್ರತಿಪಲ ಈ ಸಂಸ್ಥೆಗಳಿಂದ ದೊರಕದೆ ಹೋದುದು. ಸರ್ಕಾರದವರೇನೋ ತಮ್ಮ ಗುರಿಯನ್ನು ಸಾಧಿಸುವ ಉದ್ದೇಶದಿಂದ ಸಮಗ್ರ ಗ್ರಾಮಗಳ ಅಭಿವೃದ್ಧಿಗೆ ಸಹಕಾರ ಸಂಘ

ಗಳು ನೆರವು ನೀಡಲಿ ಎಂದು ಏರ್ಪಡಿಸಿದರು. ಆದರೆ ಇವು ಆ ಕಾರ್ಯ ಸಾಧನೆಗೆ ಒಂದು ನಿರ್ದಿಷ್ಟ ನೀತಿಯನ್ನು ಹಾಕಿಕೊಳ್ಳಲಿಲ್ಲ. ಅಲ್ಲದೆ, ಈ ಸಹಕಾರ ಸಂಘಗಳು ಈಗಿರುವ ರೀತಿಯಲ್ಲಿ ಎಂದಿಗೂ ತಮ್ಮ ಕಾರ್ಯಸಾಧನೆಯನ್ನು ಯಶಸ್ವಿಯಾಗಿ ಮಾಡಲು ಸಾಧ್ಯವಾಗುವುದಿಲ್ಲವೆಂದು ನನ್ನ ಅಭಿಪ್ರಾಯ. ಆದುದರಿಂದ ಸರ್ಕಲ್ ಸೊಸೈಟಿಗಳು ತಾಲ್ಲೂಕು ಸಮಗ್ರ ಗ್ರಾಮ ಸಂಘಗಳೊಡನೆ ನೇರವಾದ ಸಂಪರ್ಕವನ್ನು ಇಟ್ಟುಕೊಂಡರೆ ಈ ಬಗ್ಗೆ ಕೆಲಸ ಕಾರ್ಯವನ್ನು ಸುಗಮವಾಗಿ ನಡೆಸಿಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆಂದು ನನ್ನ ಸಲಹೆ.

ಇನ್ನೊಂದು ವಿಚಾರ. ಈ ಸಹಕಾರ ಸಂಘಗಳು ರೈತರ ಜೀವನಾಡಿ ಎಂಬುದನ್ನು ಗಮನದಲ್ಲಿಟ್ಟುಕೊಂಡು ಅವರಿಗೆ ನೆರವು ನೀಡುವುದರಲ್ಲಿ ಆದರ್ಶಪ್ರಾಯವಾಗಿ ವರ್ತಿಸಬೇಕಾದುದು ಅತ್ಯಗತ್ಯ. ಸರ್ಕಾರದವರು ಸಹ ತಮ್ಮ ಹತೋಟಿಯಲ್ಲಿರುವ ಕೈಗಾರಿಕಾ ಕೇಂದ್ರಗಳಲ್ಲಿ ಉತ್ಪತ್ತಿಯಾಗುವ ಸಾಮಾನುಗಳೆಲ್ಲ ಏಜೆನ್ಸಿ ಮೂಲಕ ಮಾರಾಟವಾಗುವುದನ್ನು ತಪ್ಪಿಸಿ, ಈ ಸಹಕಾರ ಸಂಘಗಳ ಮೂಲಕವೇ ಬಿಕರಿಯಾಗಬೇಕೆಂದು ಮಾಡಿದರೆ ಈ ಸಂಘಗಳ ಆರ್ಥಿಕ ಅಭಿವೃದ್ಧಿಗೂ ಸಹಾಯವಾಗುವುದಲ್ಲದೆ, ನಮ್ಮ ದೇಶದಲ್ಲಿ ತಯಾರಾದ ಸಾಮಾನುಗಳಿಗೂ ಸರಿಯಾದ ಗಿರಾಕಿಯನ್ನು ಹೊಂದಿಸಲು ಅನುಕೂಲವಾಗುತ್ತದೆಂದು ಸಲಹಮಾಡುತ್ತೇನೆ.

ಶ್ರೀ ಶಿವನಂಜೇಗೌಡ (ಮೈಸೂರು ತಾಲ್ಲೂಕು).—ಸ್ವಾಮಿ, ಸಂಸ್ಥಾನಾದ್ಯಂತ ಈ ಮಲ್ಟಿ ಪರ್ಪಸ್ ಸೊಸೈಟಿಗಳನ್ನು ಏರ್ಪಡಿಸುವುದೇನೋ ಒಳ್ಳೆಯದೇ. ಆದರೆ ಇವುಗಳಿಂದ ಜನರಿಗೆ ಅನಾನುಕೂಲವಾಗಿರುವ ಸಂದರ್ಭಗಳೂ ಇವೆ. ಏನೋ ದಕ್ಷರಾದ ನಮ್ಮ ತಿಮ್ಮಪ್ಪಗೌಡರಿರುವ ಕಡೆ ಇಂಥ ಸೊಸೈಟಿಗಳಿಂದ ಉಪಕಾರವಾಗಿದೆಯೆಂದು ಕೇಳಿದ್ದೇನೆ. ಅದೇ ಮೈಸೂರು ಕಡೆ ನೋಡಿದರೆ ಹಲವಾರು ಕಡೆ ಈ ಸೊಸೈಟಿಗಳು ಹಾಳುಬಿದ್ದು, ಹರಿದು ಹಂಚಿ ಹೋಗಿವೆ. ಕೆಲವು ಕಡೆಗಳಲ್ಲಂತೂ ಒಂದು ಸಾವಿರ, ಒಂದೂವರೆ ಸಾವಿರ, ಎರಡು ಸಾವಿರ, ನಾಲ್ಕು ಸಾವಿರ ರೂಪಾಯಿಗಳಷ್ಟು ಈ ಸಹಕಾರ ಸಂಘಗಳಲ್ಲಿ ಮಾಯವಾಗಿರುವ ಪ್ರಸಂಗ ಕೇಳಿದ್ದೇನೆ. ಇಂಥ ಕಡೆಗಳಲ್ಲಿ ಅವರು ಆಡಿದ್ದೇ ಆಟ, ಹೇಳುವವರು ಕೇಳುವವರೇ ಇಲ್ಲ!

ಡಾ|| ಆರ್. ನಾಗನಗೌಡ (ವ್ಯವಸಾಯದ ಇಲಾಖೆಯ ಮಂತ್ರಿಗಳು).—ಸಹಕಾರ ಸಂಘಗಳ ಕೆಲಸ ಹೆಚ್ಚಾಗಿ ಖಾಸಗೀ ಮಹನೀಯರಿಂದಲೇ ನಡೆಯುತ್ತಿದೆ. ಇದಕ್ಕೆ ಏನಿದ್ದರೂ ಸರ್ಕಾರದವರು ನೆರವು ನೀಡುತ್ತಿದ್ದಾರೆ ಎಂಬುದನ್ನು ತಾವು ತಿಳಿಯಬೇಕು.

ಶ್ರೀ ಶಿವನಂಜೇಗೌಡ.—ಆದರೂ ಸಹ ಈ ಸಹಕಾರ ಸಂಸ್ಥೆಗಳಿಂದ ಜನತೆಗೆ ಪೂರ್ಣ ಉಪಯೋಗವಾಗಬೇಕಾದರೆ ಈ ಖಾಸಗೀ ಮಹನೀಯರ ಆಡಳಿತ ವೈಖರಿಯಮೇಲೆ ಸರ್ಕಾರದವರು ಪೂರ್ಣ ಹತೋಟಿ ಇಟ್ಟುಕೊಳ್ಳಬೇಕು. ಇದು ಇಡೀ ದೇಶದ ಹಿತದೃಷ್ಟಿಯಿಂದ ಅಗತ್ಯವೆಂದು ಹೇಳುತ್ತೇನೆ. ಅನೇಕ ಸೊಸೈಟಿಗಳ ಆಡಳಿತ ನಿರ್ವಹಣೆ, ಆಡಳಿತ ಮೇಲ್ವಿಚಾರಣೆ, ಆಡಿಟ್ ವ್ಯವಸ್ಥೆ, ಅವುಗಳಿಂದ ಜನತೆಗೆ ಸಹಾಯ ಇವು ಯಾವುವೂ ಸಮರ್ಪಕವಾದ ರೀತಿಯಲ್ಲಿ ನಡೆಯುತ್ತಿಲ್ಲ. ನಿಜವಾಗಿಯೂ ಸರ್ಕಾರದವರ ಮನೋಭಾವ ಈ ಸಹಕಾರ ಸಂಸ್ಥೆಗಳಿಂದ ದೇಶದ ಜನತೆಗೆ ಸಹಾಯವಾಗಬೇಕು, ತನ್ಮೂಲಕ ಜನತೆ ಮತ್ತು ಆ ಸಂಸ್ಥೆ ಎರಡೂ ಉದ್ಧಾರವಾಗಬೇಕೆಂದಿದ್ದರೆ ಈ ವಿಚಾರವಲ್ಲಿ ಸುವ್ಯವಸ್ಥಿತ ಮಾರ್ಗವನ್ನು ಅವರೇ ಏರ್ಪಡಿಸಬೇಕಾದುದು ಅವಶ್ಯಕವೆಂದು ಒತ್ತಿಹೇಳುತ್ತೇನೆ.

ಶ್ರೀ ಜಿ. ಬಸಪ್ಪ (ಹೊಸದುರ್ಗ).—ಸ್ವಾಮಿ, Planning Commission ನವರು ನಮ್ಮ ದೇಶದ ಮುಂದೆ ಇಟ್ಟಿರತಕ್ಕಂಥ ಸಲಹೆಗಳಲ್ಲಿ ಹಿಂದುಸ್ಥಾನವನ್ನು ಆರ್ಥಿಕಸ್ಥಿತಿಯಲ್ಲಿ ಅಭಿವೃದ್ಧಿಗೊಳಿಸಬೇಕಾದರೆ ಸಹಕಾರ ಸಂಘಗಳು ಬಹಳಮಟ್ಟಿಗೆ ಸಹಕಾರಿ ಎಂದು ತಿಳಿಸಿದ್ದಾರೆ ಎಂದು ಕೇಳಿದ್ದೇನೆ. ಈ ತತ್ವದಲ್ಲಿ ಹೆಚ್ಚಿಗೆ ನಂಬಿಕೆ ಇರುವವರಲ್ಲಿ ನಾನೂ ಒಬ್ಬ ಎಂದು ಹೇಳುತ್ತೇನೆ. ಏಕೆಂದರೆ, ಸರ್ಕಾರದವರು ನಮ್ಮ ಸಂಸ್ಥಾನದ ಆರ್ಥಿಕಾಭಿವೃದ್ಧಿಗೆ ಸಹಾಯಕವಾಗಲಿ ಎಂಬ ಘನೋದ್ದೇಶದಿಂದ ಸಮಗ್ರ ಗ್ರಾಮ ಸೇವಾ ಸಹಕಾರ ಸಂಘಗಳನ್ನು ಸ್ಥಾಪಿಸಿದರು. ಸಂಸ್ಥಾನದಲ್ಲಿ ಈ ಆಹಾರ ಕೊರತೆ ಇತರ ಕಂಟ್ರೋಲ್ ಸಾಮಾನುಗಳ ಕೊರತೆ ಇರತಕ್ಕ ಕಡೆ ಈ ಸಂಘಗಳಿಂದ ರೈತರಿಗೆ ಬಹುಮಟ್ಟಿಗೆ ಉಪಕಾರವಾಗುತ್ತದೆಂಬ ಮೂಢನಂಬಿಕೆಯಿಂದ ಅನೇಕರು ಈ ಸಂಘಗಳ ಸದಸ್ಯರಾದರು. ಸರ್ಕಾರದ ಸಹಾಯವಿದ್ದುದರಿಂದ ಕೆಲವು ಕಾಲ ಹಾಗೂ ಹೀಗೂ ಈ ಸಂಘಗಳು ತಮ್ಮ ಕೆಲಸಕಾರ್ಯಗಳನ್ನು ನಿರ್ವಹಿಸಿಕೊಂಡು ಬಂದುವು. ಆದರೆ ಸ್ವಲ್ಪ ಕಾಲವಾದಮೇಲೆ ಅನೇಕ ಸೊಸೈಟಿಗಳು ಮುಚ್ಚಿರುವ ಸಂಗತಿಯನ್ನು ಈಗಾಗಲೇ ಈ ಸಭೆಯ ಮಾನ್ಯ ಸದಸ್ಯರು ಕೆಲವರು ತಿಳಿಸಿರುತ್ತಾರೆ. ಹೀಗಿದ್ದರೂ ಸಹ ದಕ್ಷರಾದ ಮತ್ತು ಪ್ರಾಮಾಣಿಕರಾದ ಅಧಿಕಾರಿವರ್ಗವಿರತಕ್ಕ ಕಡೆ ಈಗಲೂ ಸಹ ಇವು ತೃಪ್ತಿಕರವಾಗಿ ನಡೆಯುತ್ತಿವೆ. ಈ ಸಹಕಾರ ಸಂಘಗಳು ಕುಂಠಿತಗೊಳ್ಳುವುದಕ್ಕೆ ಮೂಲ ಕಾರಣ ಇವುಗಳ ಕೆಲಸ ಕಾರ್ಯಗಳನ್ನು ನಿರ್ವಹಿಸತಕ್ಕವರು ದಕ್ಷರಾಗಿಲ್ಲದಿರುವುದು. ಅಲ್ಲದೆ ಕೆಲವು ಸಹಕಾರ ಸಂಘಗಳಲ್ಲಿ ಸಹಕಾರ ಮನೋಭಾವವೇ ಪೂರ್ಣವಾಗಿ ಅಳಿದುಹೋಗಿ, ಎರಡು-ಮೂರು ವರ್ಷಗಳ ಲೆಕ್ಕ ಆಡಿಟ್ ಆಗಿಲ್ಲದೆ, ಅವುಗಳ ಕೆಲಸ ಅತೃಪ್ತಿಕರವಾಗಿದೆ. ಈ ಬಗ್ಗೆ ಸರಿಯಾದ ವ್ಯವಸ್ಥೆ ಇದ್ದರೇ ಇವುಗಳು ಊರ್ಜಿತ ಸ್ಥಿತಿಯಲ್ಲಿರಲು ಸಾಧ್ಯ. ಮೂರು ತಿಂಗಳಿಗೊಂದು ಬಾರಿಯಾದರೂ periodical audit ನಡೆದರೆ ಆಗ ಇಲ್ಲಿನ ಲೋಪದೋಷಗಳು ಕಡಿಮೆಯಾಗಿ, misappropriation ಮುಂತಾದುವಕ್ಕೆ ಅವಕಾಶವಿಲ್ಲದಂತಾಗುತ್ತದೆ. ಹೀಗೆ ಮಾಡಬೇಕಾದುದು ಅತ್ಯಗತ್ಯ. ಅಲ್ಲದೆ ಈಗಿರತಕ್ಕಂಥ ಆಡಿಟ್ ಸಿಬ್ಬಂದಿ ಬಹಳ ಕಡಿಮೆ. ಅದನ್ನು ಹೆಚ್ಚಿಸಲು ಸರ್ಕಾರ ಗಮನಕೊಡಬೇಕು.

ಈ ಸೊಸೈಟಿಗಳ ಮೂಲಕ ರೈತರಿಗೆ ಬಹಳಮಟ್ಟಿಗೆ ಸಹಾಯವಾಗುವಂತೆ Rural credit system ವ್ಯವಸ್ಥೆಯನ್ನು ವ್ಯವಸ್ಥಿತ ರೀತಿಯಲ್ಲಿ ಏರ್ಪಡಿಸಬೇಕು. ಆಗ ರೈತರಿಗೆ ಆರ್ಥಿಕ ಸಹಾಯ ಈ ಸೊಸೈಟಿಗಳ ಮೂಲಕ ಸುಲಭವಾಗಿ ದೊರೆಯಲು ಅನುಕೂಲವಾಗುತ್ತದೆ. ಇದರಿಂದ ಈ ಸೊಸೈಟಿಗಳಿಗೂ ಒಂದು ನವಚೈತನ್ಯ ಬಂದು ಇವುಗಳೂ ಸಹ ಅಭಿವೃದ್ಧಿ ಸ್ಥಿತಿಗೆ ಬರಲು ಸಹಾಯಕವಾಗುತ್ತದೆ. ಆದುದರಿಂದ ಸರ್ಕಾರದವರು ಆದಷ್ಟು ಜಾಗ್ರತೆಯಾಗಿ ಇದನ್ನು ಕಾರ್ಯರೂಪಕ್ಕೆ ತರುವುದನ್ನು ಯೋಚಿಸಬೇಕೆಂದು ತಿಳಿಸುತ್ತೇನೆ. ಕೊನೆಯದಾಗಿ, ಸಹಕಾರ ತತ್ವದಲ್ಲಿ ನಮ್ಮ ಜನರಲ್ಲಿ ನಂಬಿಕೆ ಹೆಚ್ಚಾಗುವಂತೆ ಮಾಡಬೇಕಾದುದು ಅತ್ಯಗತ್ಯ. ಶಿಕ್ಷಣ ಸುಧಾರಣೆಯಲ್ಲಿ ಸಹ ಈ ಸಹಕಾರ ತತ್ವಕ್ಕೆ ಮನ್ನಣೆ ದೊರೆತಿಲ್ಲವೆಂದು ತಿಳಿಸಲು ವಿಷಾದವಾಗುತ್ತದೆ. ಸಹಕಾರ ತತ್ವದ ವಿಚಾರದಲ್ಲಿ ಶಿಕ್ಷಣ ಅತ್ಯವಶ್ಯಕ

(ಶ್ರೀ ಜಿ. ಬಸಪ್ಪ.)

ವೆಂದು ತೋರುತ್ತದೆ. ಈ ಬಗ್ಗೆ ಸ್ಕೂಲು ಮತ್ತು ಕಾಲೇಜುಗಳಲ್ಲಿ ಸಹಕಾರ ವಿಷಯವನ್ನು ಬೋಧಕ ವಿಷಯವನ್ನಾಗಿ ಪರಿಗಣಿಸಿದಲ್ಲಿ ಅಲ್ಲಿ ಶಿಕ್ಷಿತರಾದವರು ಮುಂದೆ ಸಹಕಾರ ಸಂಘಗಳಲ್ಲಿ ತಮ್ಮ ಕಾರ್ಯ ಭಾರವನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗಲು ಸಹಾಯಕವಾಗುವಂತೆ ತಕ್ಕ ಏರ್ಪಾಡು ಮಾಡಬೇಕೆಂದು ಸರ್ಕಾರದವರಲ್ಲಿ ಮನವಿಮಾಡಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ

ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು—ಮೂಡಿಗೆರೆ).—ಈ ಸಹಕಾರ ಸಂಘಗಳು ನಮ್ಮ ದೇಶದ ವ್ಯವಸಾಯಾಭಿವೃದ್ಧಿಗೆ ಬಹುಮಟ್ಟಿಗೆ ನೆರವನ್ನು ನೀಡಲು ಸಹಾಯಕವಾಗುವಂತೆ ಮಾಡಬೇಕಾದುದು ಅತ್ಯಗತ್ಯವೆಂದು ನಾನು ಒತ್ತಿ ಹೇಳುತ್ತೇನೆ. ನಮ್ಮ ದೇಶದ ಏಳಿಗೆಗೆ ಮೂಲವೆಂದರೆ ಈ ವ್ಯವಸಾಯಾಭಿವೃದ್ಧಿ. ಇದರ ಅಭಿವೃದ್ಧಿ ಎಷ್ಟರಮಟ್ಟಿಗಾದರೆ ಅಷ್ಟೂ ದೇಶಾಭಿವೃದ್ಧಿಯಾಗುತ್ತದೆ. ನಮ್ಮ ಸಂಸ್ಥಾನದಲ್ಲಿ, ಅದರಲ್ಲಿಯೂ ಮಲೆನಾಡು ಪ್ರದೇಶದಲ್ಲಿ ಹತ್ತಾರು ಸಾವಿರ ಎಕರೆಯಷ್ಟು ಭೂಮಿ ಸಾಗುವಳಿಯಾಗದೇ ಉಳಿದಿದೆ. ಈ ಸಹಕಾರ ಸಂಘಗಳು ಇವುಗಳ ಸಾಗುವಳಿ ಬಗ್ಗೆ ಹೆಚ್ಚಿನ ಗಮನ ಕೊಟ್ಟು, ರೈತರಿಗೆ ಈ ಜಮೀನು ಆಧಾರದಮೇಲೆ ಆರ್ಥಿಕ ಸಹಾಯ, ಒಳ್ಳೆಯ ಗೊಬ್ಬರ, ಬೀಜ, ವ್ಯವಸಾಯಕ್ಕೆ ಬೇಕಾದ ಸಾಮುಗ್ರಿಗಳು—ಇವುಗಳನ್ನೆಲ್ಲಾ ಒದಗಿಸಿ ಸಹಕಾರ ಮನೋಭಾವನೆಯಮೇಲೆ ಈ ಕೆಲಸವನ್ನು ನಡೆಸಿಕೊಂಡು ಹೋಗುವುದು ಸೂಕ್ತವಾದುದು. ಇದರಿಂದ ದೇಶದ ಆಹಾರ ಸಮಸ್ಯೆಯನ್ನು ಸಹ ಬಹುಮಟ್ಟಿಗೆ ಪರಿಹರಿಸಿಕೊಳ್ಳಬಹುದು. ನಿರುದ್ಯೋಗವನ್ನು ಸಹ ಸ್ವಲ್ಪಮಟ್ಟಿಗೆ ಹೋಗಲಾಡಿಸಿಕೊಳ್ಳಬಹುದು.

ದೇಶದಲ್ಲಿ ಒಂದು ಕಡೆ ನಿರುದ್ಯೋಗ; ಉದ್ಯೋಗ ಕೊಡಿ. ಒಂದು ಕಡೆ ಜಮೀನಿಲ್ಲ; ಜಮೀನು ಕೊಡಿ. ಇನ್ನೊಂದು ಕಡೆ ಜಮೀನಿದೆ, ಸಾಗುವಳಿಮಾಡುವವರಿಲ್ಲ. ಹೀಗಾಗಿದೆ. ಚಿಕ್ಕಮಗಳೂರು ತಾಲ್ಲೂಕು, ಜಾಗರ ಹೋಬಳಿಯಲ್ಲಿ ಸುಮಾರು 30 ಸಾವಿರ ಎಕರೆ ಫಲವತ್ತಾದ ಸಮತಟ್ಟಾದ ಜಮೀನಿದೆ. ಇಲ್ಲಿ ಪೂರ್ವಕಾಲದಲ್ಲಿ ಬಹು ದೊಡ್ಡ ಪಟ್ಟಣವಿತ್ತು. ಅಲ್ಲಿ ಸುಮಾರು 48 ಕೆರೆಗಳು ಇವೆ. ಇದಲ್ಲದೆ ಅಡ್ಡಗಾನು ಹೊಳೆಗೆ ಕುಳುವಾಡಿಖಾನ್ ಹತ್ತಿರ ಅಡ್ಡಕಟ್ಟೆ ಹಾಕಿದರೆ ಈ ಜಮೀನಿಗೆಲ್ಲಾ ನೀರಾಗುತ್ತದೆ. ಇಂತಹ ಫಲವತ್ತಾದ ಜಮೀನನ್ನು ಸಹಕಾರ ತತ್ವದ ಮೇಲೆ ವ್ಯವಸಾಯ ಮಾಡಿದರೆ ಬೇಕಾದಷ್ಟು ಆಹಾರವಾಗುತ್ತದೆ, ನಿರುದ್ಯೋಗ ನಿವಾರಣೆಗೂ ಸಹಕಾರಿಯಾಗುತ್ತದೆ. ಈ ಜಾಗರ ವ್ಯಾಲಿ, ಲಕ್ಕವಳ್ಳಿ ಅಣೆಕಟ್ಟಿಗೆ ಕೇವಲ 15 ಮೈಲಿ ದೂರದಲ್ಲಿದೆ ಈ ಕಟ್ಟೆಯಿಂದ ಮುಳುಗಡೆಯಾದ ಜಮೀನಿನವರಿಗೆ ಈ ಜಾಗದಲ್ಲಿಯಾದರೂ ಜಮೀನು ಕೊಡಬಹುದು. ಆದುದರಿಂದ ಈ ಜಾಗರ ವ್ಯಾಲಿಯಲ್ಲಿ ಸಹಕಾರ ಪದ್ಧತಿಯ ವ್ಯವಸಾಯವನ್ನು ಜಾರಿಗೆ ತರಬೇಕೆಂದು ಸೂಚಿಸುತ್ತೇನೆ.

*ಶ್ರೀ ಟಿ. ಮರಿಯಪ್ಪ (ಮೈಸೂರು ಸಿಟಿ—ಉತ್ತರ).—ಸ್ವಾಮಿ, ಈ ಸಹಕಾರ ಇಲಾಖೆಯ ಬೇಡಿಕೆಯ ಮೇಲೆ ನಾನು ಮಾತನಾಡಬೇಕಾದ ಪ್ರಮೇಯವಿರಲಿಲ್ಲವಾದರೂ ಮಾನ್ಯ ಸ್ನೇಹಿತರಾದ ಶ್ರೀಮಾನ್ ತಿಮ್ಮಪ್ಪಗೌಡರು ನನ್ನ ವಿಷಯದಲ್ಲಿ ಒಂದೆರಡು ಮಾತುಗಳನ್ನಾಡಿದ್ದರಿಂದ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಬೇಕಾಗಿದೆ. ಈ ಸಹಕಾರ ತತ್ವದ ವಿಷಯದಲ್ಲಿ ಈ ಸಭೆಯ ಮಾನ್ಯ ಸದಸ್ಯರಿಗೆ ಬಹಳವಾಗಿ ಅಭಿರುಚಿ ಇದೆ. ಈ ತತ್ವವನ್ನವಲಂಬಿಸಿ ನಮ್ಮ ಜನ ಜೀವನವನ್ನು ಉತ್ತಮಪಡಿಸಲು ಅನೇಕರು ಶ್ರಮಿಸಿದ್ದಾರೆ. ಉದಾಹರಣೆಗೆ ಈ ಸಭೆಯ ಸದಸ್ಯರಾದ ಶ್ರೀಮಾನ್ ಸಿಂಗಾರಿಗೌಡರು ಈ ಸಹಕಾರ ಸಂಸ್ಥೆಗಳ ವಿಷಯದಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸಿ ಕೆಲಸ ಮಾಡಿದ್ದಾರೆ. ಅದೇ ರೀತಿ ಶ್ರೀಮಾನ್ ಶಿವನಂಜೇಗೌಡರಿಗೂ ಸಹ ಇದರ ಅನುಭವ ಬಹಳವಾಗಿ ಇದೆ. ಆದರೆ ಎಲ್ಲಿ ಖಾಸಗಿ ಸದಸ್ಯರು ಕುತೂಹಲದಿಂದ ಆಸಕ್ತಿ ವಹಿಸಿ ಕೆಲಸಕಾರ್ಯಗಳನ್ನು ನಿರ್ವಹಿಸಲಿಲ್ಲವೋ ಅಂಥ ಕಡೆಗಳಲ್ಲಿ ಈ ಸಹಕಾರ ತತ್ವದ ಮೇಲೆ ಸ್ಥಾಪಿತವಾದ ಸಂಘಗಳ ಕೆಲಸ ಎಲ್ಲೂ ಚೆನ್ನಾಗಿ ನಡೆದಿಲ್ಲ ಎಂಬುದನ್ನು ಹೇಳಬೇಕಾಗಿಲ್ಲ. ಒಂದು ಸಾಧನವನ್ನು ಒಳ್ಳೆಯವರ ಕೈಗೆ ಕೊಟ್ಟರೆ ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳುತ್ತಾರೆ. ಅದೇ ಸಾಧನವನ್ನು ಕೆಲಸ ಮಾಡುವುದಕ್ಕೆ ಮನಸ್ಸಿಲ್ಲದವರ ಕೈಗೆ ಕೊಟ್ಟರೆ ಉಪಯೋಗಿಸುವುದಿಲ್ಲ. ನಮ್ಮ ದೇಶದ ಜನಜೀವನವನ್ನು ಪುನರ್ ನಿರ್ಮಾಣ ಮಾಡಿ, ಅವರ ಜೀವನದಲ್ಲಿ ಚೈತನ್ಯವನ್ನು ತುಂಬಿ, ಪ್ರಜಾಸತ್ತಾತ್ಮಕವಾದ ಅಭಿಪ್ರಾಯಗಳನ್ನು ರೂಢಿಸಿಕೊಳ್ಳಲು ಅರ್ಹರನ್ನಾಗಿ ಮಾಡಲಿಕ್ಕೆ ಅವರಿಗೆ ಒಂದು ಸಾಧನವನ್ನು ಕೊಡಲೇ ಬೇಕು. ಸಾಧನವನ್ನು ಕೊಡದೇ ಜನರನ್ನು ತಯಾರಾಗಿ, ತಯಾರಾಗಿ ಎಂದರೆ ಖಂಡಿತವಾಗಿಯೂ ಆಗುವುದಿಲ್ಲ. ಶ್ರೀಮಾನ್ ಶಿವನಂಜೇಗೌಡರಿಗೂ ಕೂಡ ಈ ಸಭೆಯ ಸದಸ್ಯರಾಗಿ ಬರದೆ ಇದ್ದಿದ್ದರೆ ಇಷ್ಟರಮಟ್ಟಿಗೆ ನಿಂತುಕೊಂಡು ಮಾತನಾಡುವುದಕ್ಕೆ ಅವಕಾಶವಾಗುತ್ತಲೇ ಇರಲಿಲ್ಲ. ನಮ್ಮ ದೇಶದಲ್ಲಿ ನಾವು ಈಗ ಒಂದು ಪರ್ವಕಾಲದಲ್ಲಿ ಇದ್ದೇವೆ. ನಮ್ಮ ಗುರಿ ಸಾಧ್ಯವಾದಮಟ್ಟಿಗೂ ಸಹಕಾರ ತತ್ವದ ಮೇಲೆ ಜನಜೀವನವನ್ನು ಪುನರ್ ನಿರ್ಮಾಣ ಮಾಡಬೇಕು ಎಂಬುದಾಗಿದೆ. ಪ್ಲಾನಿಂಗ್ ಕಮಿಷನ್ನಿನವರೂ ಕೂಡ ಇದನ್ನೇ ಅನುಸರಿಸಿದ್ದಾರೆ. ಈ ತತ್ವವನ್ನು ಹೆಚ್ಚಾಗಿ ಪಾಶ್ಚಿಮಾತ್ಯ ದೇಶಗಳಲ್ಲಿ ಜಾರಿಗೆ ತಂದಿದ್ದಾರೆ ಮತ್ತು ಅವರು ಇದನ್ನು ಸಾಧಿಸಿದ್ದಾರೆ. ಅದೇ ರೀತಿ ಮೈಸೂರು ದೇಶದಲ್ಲೂ ಕೂಡ ಪಾಶ್ಚಿಮಾತ್ಯ ದೇಶಗಳಲ್ಲಿ ಸಾಧಿಸಿರತಕ್ಕಂಥ ಆ ತತ್ವವನ್ನೇ ಅನುಸರಿಸಿಕೊಂಡು ಅನೇಕ ಸಂಸ್ಥೆಗಳನ್ನು ಪ್ರಾರಂಭಿಸಿ, ಅವು ಚೆನ್ನಾಗಿ ಬೆಳೆಯುವಹಾಗೆ ಮಾಡಬೇಕು. ಆ ಸಂಸ್ಥೆಗಳಲ್ಲಿ ಜನ ಕೆಲಸ ಮಾಡತಕ್ಕ ಒಂದು ಅವಕಾಶ ಅವರಿಗೆ ಒದಗಿಸಬೇಕು. ಕೆಲಸ ಮಾಡಿ ಅವರು ಪರಿಣತರಾಗಿ ಆಮೇಲೆ ಆ ಸಂಸ್ಥೆಗಳು ಚೆನ್ನಾಗಿ ಕೆಲಸ ಮಾಡುವಹಾಗೆ ಆಗಬೇಕು. ಉದಾಹರಣೆಗೆ ಮುನಿಸಿಪಾಲಿಟಿಗಳನ್ನು ಸರ್ಕಾರದವರೇ ಅನೇಕ ವರ್ಷಗಳವರೆಗೆ ನಡೆಸಿಕೊಂಡು ಬಂದು ಆಮೇಲೆ ಅದರ ಅಧಿಕಾರವನ್ನು ಖಾಸಗಿ ಮನುಷ್ಯರಿಗೆ ವಹಿಸಿಕೊಟ್ಟರು. ಹೀಗೆಯೇ ಪ್ರಜಾಪ್ರತಿನಿಧಿ ಸಭೆ, ನ್ಯಾಯವಿಧಾಯಕ ಸಭೆಗಳು ಕೂಡ ಪ್ರಾರಂಭವಾಗಿ ಅವು ಜನರನ್ನು ತಯಾರು ಮಾಡತಕ್ಕ ಒಂದು ಸಾಧನಗಳಾದವು. ಬಹುಶಃ ಅವು ಸ್ಥಾಪನೆಯಾಗದೇ ಇದ್ದಿದ್ದರೆ ಜನ ತಯಾರಾಗುವುದಕ್ಕೆ ಕಷ್ಟವಾಗುತ್ತಿತ್ತು. ನಾವು ಈಗ ಬೇರೆ ಒಂದು ಮಾರ್ಗದಲ್ಲಿ ಸ್ವಲ್ಪ ಬದಲಾವಣೆ ಮಾಡಿ, ಗ್ರಾಮಾಂತರ ಪ್ರದೇಶಗಳನ್ನು ಪುನರ್ ನಿರ್ಮಾಣ ಮಾಡಿ ಈ ಸಹಕಾರ ಸಂಘಗಳನ್ನು ಸ್ಥಾಪನೆಮಾಡಬೇಕು. ಒಂದು ಒಳ್ಳೆಯ ವಾತಾವರಣ ಉಂಟಾಗಿ ಜನಗಳಲ್ಲಿ ಈ ಸಹಕಾರ ತತ್ವದ ಪದ್ಧತಿಯನ್ನನುಸರಿಸಿ ಕೆಲಸ ಮಾಡಲು ಹೆಚ್ಚು ಅಭ್ಯಾಸ ಆಗುವವರೆಗೂ ಏನೇನು ಸಹಾಯ

* Asterisk indicates that the speech has not been revised by the Member concerned.

ಸೌಲಭ್ಯಗಳು ಬೇಕೋ ಅವುಗಳನ್ನೆಲ್ಲಾ ಒದಗಿಸಿ ಕೊಟ್ಟು ಉತ್ತೇಜನ ಮಾಡಬೇಕು. ಅಲ್ಲಿ ಇಲ್ಲಿ ತೀರ ಕೆಟ್ಟುಹೋದರೆ ಅದನ್ನು ಸರಿಪಾಡತಕ್ಕ ಜವಾಬ್ದಾರಿ ಸರ್ಕಾರ ಮತ್ತು ಇಲಾಖೆಯ ಅಧಿಕಾರಿ ಗಳಿಗೆ ಇದ್ದೇ ಇರಬೇಕು. ಆದ್ದರಿಂದ ಜನಗಳಿಗೆ ಒಂದು ಅವಕಾಶ ಕೊಡದೆ ಇಂಥಾ ಕಾರ್ಯಗಳನ್ನು ಮಾಡಲು ತಯಾರಾಗಿ ಎಂದರೆ ಅದು ಸಾಧ್ಯವಾಗುವುದಿಲ್ಲ. ಆ ರೀತಿ ಅವಕಾಶ ಕೊಡತಕ್ಕ ಒಂದು ಸನ್ನಿವೇಶ ಇದೆ ಯಲ್ಲಾ ಅದು ಬಹಳ ಉಚಿತ. ಅದನ್ನು ಪ್ರಜೆಗಳು ಸರಿಯಾಗಿ ಉಪಯೋಗಿಸಿಕೊಂಡು ಸಹಕಾರ ಸಂಘ ಗಳನ್ನು ಕಟ್ಟಬೇಕು. ಈಗ ನಶಿಸಿ ಹೋಗುತ್ತಾ ಇರ ತಕ್ಕ ಸಹಕಾರ ಸಂಘಗಳನ್ನು ಪುನರುಜ್ಜೀವನಗೊಳಿಸ ಬೇಕು. ಇಂಥ ಒಂದು ಸಂದರ್ಭ, ಸದವಕಾಶ ಈ ಸಭೆಯ ಮಾನ್ಯ ಸದಸ್ಯರನೇಕರಿಗೆ ಇತ್ತು. ಒಂದು ಉದಾಹರಣೆ ಹೇಳುತ್ತೇನೆ. ಈ ಸಭೆಯ ಸದಸ್ಯರಾ ಗಿದ್ದ ಶ್ರೀಮಾನ್ ಶಂಕರೇಗೌಡರು ತಮ್ಮ ಸ್ಥಳದಲ್ಲಿದ್ದ ಮಲ್ಟಿಪರ್‌ಪಸ್ ಸೊಸೈಟಿಯ ಕಾರ್ಯ ಕಲಾಪಗಳಲ್ಲಿ ಭಾಗವಹಿಸಿ, ಆಸಕ್ತಿಯಿಂದ ಕೆಲಸಮಾಡಿ ಅದನ್ನು ಒಳ್ಳೆಯ ಸೊಗಸಾದ ಸ್ಥಿತಿಗೆ ತಂದರು. ಆ ಸೊಸೈಟಿ ಬಹಳ ಚೆನ್ನಾಗಿ ಕೆಲಸ ಮಾಡುತ್ತಾ ಇದೆ. ಕಂಟ್ರೋಲ್ ಹೋದರೂಕೂಡ, ಕಂಟ್ರೋಲ್‌ಗೆ ಸಂಬಂಧ ಪಟ್ಟಿಲ್ಲದೇ ಇರತಕ್ಕ ಅನೇಕ ಸಾಮಾನು ಗಳನ್ನು ಇಟ್ಟುಕೊಂಡು ಇತರರೊಡನೆ ಪ್ರೈಪೋಟಿಗೆ ನಿಂತು ಒಳ್ಳೆಯ ವ್ಯಾಪಾರ ಮಾಡತಕ್ಕ ಚೈತನ್ಯ ಪಡೆಯಬೇಕಾದರೆ ಅಲ್ಲಿನ ವ್ಯಕ್ತಿಗಳ ಸಹಾನುಭೂತಿ, ಸಹಕಾರ ಅತ್ಯಗತ್ಯ ಎಂಬುದು ವೇದ್ಯವಾಗುತ್ತದೆ. ಯಾವ ಸಂಸ್ಥೆಯೇ ಆಗಲೀ ದೇಶಾಭಿಮಾನದಿಂದ ಕೆಲಸಮಾಡತಕ್ಕ ವ್ಯಕ್ತಿಗಳಿದ್ದರೆ ಆ ಸಂಸ್ಥೆಗೆ ಶಕ್ತಿ ಬರುತ್ತದೆ. ಆದ್ದರಿಂದ ಯಾವುದಾದರೂ ಸಂಸ್ಥೆಗಳು ಸರಿಯಾಗಿ ಕೆಲಸಮಾಡಿಲ್ಲವೇ ಇದಕ್ಕೆ ಇನ್ನು ನಾಲ್ಕು ಸಾರಿ ಹೇಳೋಣ, ರಚನಾತ್ಮಕವಾದ ಸಲಹೆಗಳನ್ನು ಕೊಡೋಣ. ಆ ರೀತಿ ಕೊಟ್ಟರೆ ಬಹಳ ಅನುಕೂಲ. Destructive criticism ಆದರೆ ಅದರಿಂದ ಪ್ರಯೋಜನವಾಗುವುದಿಲ್ಲ.

1905ನೇ ಇಸವಿಯಿಂದ 1946-47ರವರೆಗೂ 2,500 ಸೊಸೈಟಿಗಳು ಮಾತ್ರ ಇದ್ದವು. ಅಲ್ಲಿಂದೀ ಚೆಗೆ 5,000 ಚಿಲ್ಲರೆ ಸೊಸೈಟಿಗಳವರೆಗೂ ಹೆಚ್ಚಿವೆ. ಎಂದರೆ 2,500 ಸೊಸೈಟಿಗಳು ಹೆಚ್ಚಾಗಿ ಆಗಿವೆ. ಈ 5-5½ ವರ್ಷಗಳಲ್ಲಿ 5,000 ಸೊಸೈಟಿಗಳು ಇಷ್ಟು ಸಮರ್ಪಕವಾಗಿ ಕೆಲಸಮಾಡಿಕೊಂಡು ಬರಬೇ ಕಾದರೆ ಅದು ಆಯಾ ಸಂಸ್ಥೆಗಳಲ್ಲಿ ಅಹೋರಾತ್ರಿ ದುಡಿದು ಕೆಲಸ ಮಾಡುತ್ತಾ ಇರತಕ್ಕ ವ್ಯಕ್ತಿಗಳ ಶ್ರಮ ಮತ್ತು ದೇಶಭಕ್ತಿಯ ಫಲ. ಸೊಸೈಟಿಗಳನ್ನು ಸರಿ ಯಾಗಿ ನಡೆಸಿ ಎಂದರೆ ಸಾಧ್ಯವಾಗುವುದಿಲ್ಲ. ಸರಿಯಾಗಿ ನಡೆಸಿದರೆ ಮಾತ್ರ ಕೆಲಸ ಚೆನ್ನಾಗಿ ಆಗುವುದು. ಅಲ್ಲಿ ಆಡಳಿತ ನಡೆಸತಕ್ಕ ಜನ ಸರಿಯಾಗಿ ಕೆಲಸಮಾಡದೇ ಇದ್ದರೆ ಕೆಟ್ಟುಹೋಗುತ್ತದೆ.

ಎರಡನೆಯದಾಗಿ, ನಮ್ಮ ಸಹಕಾರ ಚಳವಳಿ ಹೇಗಿತ್ತು ಎಂಬುದನ್ನು ಹೇಳಬೇಕಾಗಿದೆ. ನಮ್ಮಲ್ಲಿ ನಿರ್ದಿಷ್ಟವಾದ ನೀತಿಯನ್ನು ಅನುಸರಿಸಿ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಿದ್ದೇವೆ.

They are intended to lend money on short-term credit to agriculturists.

ಪ್ರಥಮ ಬಾರಿಗೆ ಕೋಆಪರೇಟೀವ್ ಸೆಮಿನಾರನ್ನು ಏರ್ಪಡಿಸಿ ವಿಷಯ ಸಂಗ್ರಹಣೆಮಾಡಿ, ಈ ಸಹಕಾರ ಸಂಘಗಳ ಧ್ಯೇಯೋದ್ದೇಶಗಳನ್ನು ಪರಿಶೀಲನೆ ಮಾಡ ಲಾಯಿತು. Regional financial position ಸರಿ ಯಾಗಿಲ್ಲದೆ ಗ್ರಾಮಾಂತರ ಪ್ರದೇಶಗಳಲ್ಲಿ ಜನಗಳಿಗೆ ಈ ಸಹಕಾರ ಸಂಘಗಳ ಅವಶ್ಯಕತೆ ಬಹಳವಾಗಿತ್ತು. ಆದ್ದರಿಂದ ಒಂದು planned basis ಮೇಲೆ ಗ್ರಾಮಾಂ ತರ ಪ್ರದೇಶಗಳಲ್ಲಿ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಿ, ಹಣಕಾಸಿನ ವ್ಯವಸ್ಥೆ ಮತ್ತು ವ್ಯಾಪಾರೋ ದ್ಯಮಗಳ ವ್ಯವಸ್ಥೆಮಾಡಲಾಯಿತು. ಈ ರೀತಿ ಒಂದು planned basis ಮೇಲೆ ಮಾಡಿರತಕ್ಕ ವ್ಯವಸ್ಥೆಯಲ್ಲಿ ಕೆಲಸ ಕಾರ್ಯಗಳನ್ನು ಮಾಡುವಾಗ ಲೋಪದೋಷ ಗಳು ಬಂದರೆ ಅವನ್ನು ತಿದ್ದಿಕೊಂಡು ಇನ್ನೂ ಹೆಚ್ಚಿನ ಉತ್ತೇಜನ ಕೊಡಬೇಕು. ಈ ಒಂದು ಕ್ರಮ ಬೇರೂರಿ ಚೆನ್ನಾಗಿ ಕೆಲಸ ಮಾಡಬೇಕಾದರೆ ಅದನ್ನು 10 ಅಲ್ಲ 15 ವರ್ಷ ಅನುಸರಿಸಿಕೊಂಡು ಬರಬೇಕಾಗಿದೆ. ಸೊಸೈಟಿಗಳ ರಿಜಿಸ್ಟ್ರಾರ್ಸ್ ನೋಡಿಕೊಂಡು ಅದರ ಪ್ರಕಾರ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ಭಾವಿ ಸುವುದಲ್ಲ. ಸೊಸೈಟಿಯನ್ನು ಸ್ಥಾಪನೆ ಮಾಡಿದಾಗ ಯಾವ ಉದ್ದೇಶವನ್ನಿಟ್ಟು ಸ್ಥಾಪನೆ ಮಾಡಲಾಯಿತೋ ಅದು ಸಫಲವಾಗುವುದಕ್ಕೆ ಉತ್ತೇಜನ ಕೊಡಬೇಕು. ಸರಿಯಾಗಿ ಕೆಲಸ ಮಾಡದೆ ಇದ್ದರೆ ಅದಕ್ಕೆ ತಕ್ಕ, ಸರಿ ಯಾಗಿ ಕೆಲಸಮಾಡಲು ತಿಳಿದಿರತಕ್ಕವರನ್ನು ನಿಯಮಿಸ ಬೇಕು. ಅಷ್ಟೇ ಅಲ್ಲದೆ, ಪದೇ ಪದೇ ಆಡಿಟ್ ಮಾಡ ಬೇಕು. ಇದು ಬಹಳ ಮುಖ್ಯವಾಗಿ ನಮ್ಮ ದೇಶದಲ್ಲಿ ಆಗಬೇಕಾದದ್ದು. ಮುನಿಸಿಪಾಲಿಟಿ ಮತ್ತು ವಿಲೇಜ್ ಪಂಚಾಯಿತಿಗಳಲ್ಲಿ ಆಡಿಟ್ ಇಲ್ಲದೆ discrepancy ಬಂದಾಗ ಅನೇಕ ಲೋಪದೋಷಗಳು ಕಂಡುಬಂದಿವೆ. ಮನುಷ್ಯ ಮಾತ್ರದವರು ಎಲ್ಲಿ ಇರುತ್ತಾರೋ ಅಲ್ಲೆಲ್ಲಾ ಈ ಲೋಪದೋಷಗಳು ಇದ್ದೇ ಇರುತ್ತವೆ. ಆದರೆ ಅವನ್ನು ತಿದ್ದಿ ಸರಿಪಡಿಸಬೇಕು. ಸರಿಪಡಿಸುವುದಕ್ಕೆ ಆಗದೇಇದ್ದರೆ ಅಂತಹವರನ್ನು ತೆಗೆದುಹಾಕಿ ಬೇರೆಯವ ರನ್ನು ಹಾಕಬೇಕು. Eternal vigilance ಇರ ಬೇಕು. ದುಡ್ಡು ಇದ್ದ ಕಡೆಯಲ್ಲೆಲ್ಲಾ ಬಲ ಇದ್ದೇ ಇರುತ್ತದೆ. ಫುಡ್ ಇಲಾಖೆಯ ಪೋರ್ಟ್ ಪೋಲಿಯೋನಲ್ಲಿದ್ದ ಶ್ರೀಮಾನ್ ಸಿದ್ದವೀರಪ್ಪನವರಿಗೆ ಚೆನ್ನಾಗಿ ಗೊತ್ತಿದೆ. ಎಲ್ಲಿಯವರೆಗೆ ಪ್ರತಿಭಾಶಾಲಿ ಗಳಾಗಿರತಕ್ಕ ವ್ಯಕ್ತಿಗಳು ಸತ್ಯವಂತರಾಗಿರುತ್ತಾರೋ ಅಲ್ಲಿಯವರೆಗೂ ಈ ಸೊಸೈಟಿಗಳ ಕೆಲಸ ಕಾರ್ಯ ಗಳು ಯಶಸ್ವಿಯಾಗಿ ನಡೆಯುವುದರಲ್ಲಿ ಯಾವ ಸಂಶ ಯವೂ ಇಲ್ಲ. ಹಾಗಿಲ್ಲದೆ ಇದ್ದರೆ ಅಂಥ ಸೊಸೈಟಿಗ ಳನ್ನು ಮುಚ್ಚಬೇಕಾದ ಸನ್ನಿವೇಶ ಬಂದೇ ಬರುತ್ತದೆ. ಅಂಥ anti-social elements ಇದ್ದರೆ ಅವರನ್ನು ತೆಗೆದು ಹಾಕಿ ಬೇರೆಯವರನ್ನು ನೇಮಕಮಾಡಿಕೊಳ್ಳ ತಕ್ಕದ್ದು ಜಾಣತನ. ಅದು ಒಳ್ಳೆಯ ಮಾರ್ಗ. ಈ ದೃಷ್ಟಿ ಯಿಂದ ಸಹಕಾರ ಇಲಾಖೆಯನ್ನು ನಾವು ಅಭಿವೃದ್ಧಿ ಪಡಿಸಬೇಕು ಮತ್ತು ಅದಕ್ಕೆ ಹೆಚ್ಚು ಬಲಕೊಡಬೇಕು, ಉತ್ತೇಜನ ಕೊಡಬೇಕು. ನಮ್ಮ ದೇಶದಲ್ಲಿ ಈ ಇಲಾ ಖೆಗೆ ಬಹಳ ಕಮ್ಮಿ ಖರ್ಚುಮಾಡುತ್ತಾ ಇದ್ದೇವೆ. ಮದರಾಸು, ಬೊಂಬಾಯಿ ಪ್ರಾಂತ್ಯಗಳಿಗೆ ಹೋಲಿಸಿ ನೋಡಿದರೆ ನಾವು ಖರ್ಚುಮಾಡುತ್ತಿರುವುದು ಬಹಳ ಕಮ್ಮಿ. ಐದು ಲಕ್ಷ ರೂಪಾಯಿ ಬಹಳ ದೊಡ್ಡದಲ್ಲ. ನಮ್ಮ ಗುರಿ ಏನಿದೆ? ಕೋ-ಆಪರೇಟಿವ್ ಕಾಮನ್ ವೆಲ್ತ್ ಸ್ಥಾಪನೆಮಾಡಬೇಕು. ಎಲ್ಲಾ ಕ್ಷೇತ್ರಗಳಲ್ಲೂ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಬೇಕು. ಈ ಒಂದು ಗುರಿ ಇಟ್ಟುಕೊಂಡು ಸಹಕಾರ ಸಂಘಗಳು ಪ್ರಾರಂಭವಾಗದೇ ಹೋದರೆ middlemen ತೆಗೆಯು ವುದಕ್ಕೆ ಆಗುವುದಿಲ್ಲ. ಪ್ರೈಪೋಟಿ ಎಷ್ಟೋ ಸಾರಿ ಬರುತ್ತದೆ. ಸರ್ಕಾರದವರ ನೀತಿ, ಇಲಾಖೆಯವರು ಅನುಸರಿಸತಕ್ಕ ನೀತಿ ಹೇಗಿರಬೇಕೆಂದರೆ ಕ್ರಮ ಕ್ರಮವಾಗಿ ಜನಗಳಿಗೆ ಮಧ್ಯವರ್ತಿ ಜನರಿಂದ ಆಗ

(ಶ್ರೀ ಟಿ. ಮರಿಯಪ್ಪ.)

ತಕ್ಕ ಕಷ್ಟ ಏನಿದೆಯೋ ಅದು ಸಂಪೂರ್ಣವಾಗಿ ತಪ್ಪ ಬೇಕು, ಸಹಕಾರ ಸಂಘಗಳು ಬಲವಾಗುವುದಕ್ಕೆ ಅವಕಾಶವಾಗತಕ್ಕ ವಾತಾವರಣ ಕಲ್ಪನೆಯಾಗಬೇಕು. ಇದಕ್ಕೆ ಮಾನ್ಯ ಸಭೆಯವರು ಮತ್ತು ಸಾರ್ವಜನಿಕರು ಸಂಪೂರ್ಣ ಸಹಕಾರ ಕೊಟ್ಟು, ಸಹಾನುಭೂತಿಯಿಂದ ವರ್ತಿಸಬೇಕಾಗಿದೆ. ಆ ರೀತಿ ಮಾಡದೇ ಚೆನ್ನಾಗಿ ಕೆಲಸ ಆಗುತ್ತಿಲ್ಲ ಎಂದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ.

ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರ್ಯರು ರೆಗ್ಯುಲೇಟೆಡ್ ಮಾರ್ಕೆಟ್ ವಿಷಯ ಹೇಳಿದರು. ನಮ್ಮ ದೇಶದಲ್ಲಿ ಇತ್ತೀಚೆಗೆ ಅನೇಕ ರೆಗ್ಯುಲೇಟೆಡ್ ಮಾರ್ಕೆಟ್‌ಗಳು ಆಗಿವೆ. ತಿಪಟೂರು, ಮೈಸೂರು, ಬೆಂಗಳೂರು, ದಾವಣಗೆರೆ, ಶಿವಮೊಗ್ಗ ಇಲ್ಲೆಲ್ಲಾ ಪ್ರಾರಂಭವಾಗಿವೆ. ಯಾವನು ಬೆಳೆ ಬೆಳೆಯುತ್ತಾನೋ ಅವನಿಗೆ ಆ ಬೆಳೆಗೆ ತಕ್ಕ, ಸರಿಯಾದ ಬೆಲೆ ಬಹಿರಂಗವಾಗಿ ದೊರೆಯಬೇಕು. ಆ ರೀತಿ ಆಗದೇ ಆತ ಮಧ್ಯವರ್ತಿಗಳ ಕೈಗೆ ಸಿಕ್ಕಿದ ಪಕ್ಷದಲ್ಲಿ ಈ ನೋವು ತಪ್ಪಿದ್ದಲ್ಲ. ಮನುಷ್ಯನಿಗೆ ನೋವು, ವ್ಯಥೆ ಇವೆರಡೂ ಇಲ್ಲದೆ ತನ್ನ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವುದಾದರೆ ಬೇರೆ ಇನ್ನೇನೂ ಆತ ಅಪೇಕ್ಷಿಸುವುದಿಲ್ಲ. ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ಇರಬಹುದಾದ ನ್ಯೂನತೆ, ಲೋಪದೋಷಗಳು ಏನಿದ್ದರೂ ಅವನ್ನು ಸರಿಪಡಿಸಿಕೊಂಡು ಕೆಲಸ ಮಾಡಿದರೆ ನಿಜವಾಗಿಯೂ ಅವುಗಳಿಂದ ಸಂಪೂರ್ಣವಾದ ಪ್ರಯೋಜನ ಜನಗಳಿಗೆ ಸಿಕ್ಕಿಯೇಸಿಕ್ಕುತ್ತದೆ. ಮಧ್ಯವರ್ತಿ ಜನಗಳ ಕೈವಾಡ ಇರಕೂಡದು ಎಂಬ ದೃಷ್ಟಿಯಿಂದಲೇ ಅದನ್ನು ಮಾಡಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಕೋ-ಆಪರೇಟಿವ್ ಸೊಸೈಟಿಗಳು ಬೇಕಾದಷ್ಟು ಇವೆ. ಅವು ವೇರ್‌ಹೌಸ್‌ಗಳನ್ನು ಸ್ಥಾಪನೆಮಾಡಬೇಕು. ಏಕೆಂದರೆ ದೇಶಾದ್ಯಂತ ರೈತನಿಗೆ ತನ್ನ ಪದಾರ್ಥವನ್ನು ಕೂಡಲೇ ಮಾರಾಟ ಮಾಡಿ ಬಿಡಬೇಕೆಂಬ ಅಪೇಕ್ಷೆ ಉಂಟಾಗಬಾರದು. ಅವನು ಸ್ವಲ್ಪ ಕಾಲ ತಡೆದು ತನ್ನ ಪದಾರ್ಥಗಳನ್ನು ಮಾರಾಟ ಮಾಡಿಕೊಳ್ಳಲು ಸೌಲಭ್ಯವಿರುವಂತೆ ಒಂದು ವ್ಯವಸ್ಥೆ ಮಾಡಬೇಕು. ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್‌ಗಳಲ್ಲಿ ಇವನ್ನು ಆದಷ್ಟು ಜಾಗ್ರತೆ ಪ್ರಾರಂಭಮಾಡಬೇಕು. ವೇರ್ ಹೌಸ್‌ಗಳನ್ನು ಸ್ಥಾಪನೆಮಾಡಬೇಕೆಂಬ ವಿಚಾರ ಬಂದು ಈಗಾಗಲೇ 3 ವರ್ಷಗಳಾಗುತ್ತಾ ಬಂತು. ರೈತರನ್ನು ಪದಾರ್ಥಗಳನ್ನು ವೇರ್ ಹೌಸ್‌ಗಳಲ್ಲಿ ಇಟ್ಟು ತನ್ಮೂಲಕ ಸಾಲ ಪಡೆದು, ಒಳ್ಳೆಯ ಧಾರಣೆ ಬಂದಾಗ ಮಾರಾಟಮಾಡಿಕೊಳ್ಳಲು ಸೌಲಭ್ಯವುಂಟಾಗಬೇಕು. ಇದಕ್ಕೆ ಸಹಕಾರ ಸಂಘಗಳು ಮತ್ತು ರೆಗ್ಯುಲೇಟೆಡ್ ಮಾರ್ಕೆಟ್‌ಗಳಲ್ಲಿ ವೇರ್‌ಹೌಸ್‌ಗಳನ್ನು ಸ್ಥಾಪನೆಮಾಡಬೇಕು. ಇದರ ಜೊತೆಗೆ, ಒಬ್ಬ ಮಹನೀಯರು ಪ್ರಸ್ತಾಪಮಾಡಿದರು, ಷಾರ್ಟ್ ಟರ್ಮ್ ಕ್ರೆಡಿಟ್ ಕೊಡಬೇಕೆಂದು ಹೇಳಿದರು. ನಿಜ, ಸಾಲ ಕೊಡತಕ್ಕವರು ಒಬ್ಬರು ಇದ್ದರೆ ಸಾಲ ತೆಗೆದುಕೊಳ್ಳುವವರು ಬಹಳ ಜನ ಇರುತ್ತಾರೆ. ರೈತನಿಗೆ ಅಗತ್ಯವಾಗಿ ಸಾಲ ಬೇಕು. ಆದರೆ ಸಾಲಕೊಡುವುದಕ್ಕೆ ವ್ಯವಸ್ಥೆ ಸರಿಯಾಗಿರಬೇಕು ಅದಕ್ಕೆ ಶ್ರೀಮಾನ್ ತಿಮ್ಮಪ್ಪಗೌಡರು ಹೇಳಿದ ಹಾಗೆ ಡಿಸ್ಟ್ರಿಕ್ಟ್ ಬ್ಯಾಂಕುಗಳು ಇವೆ. ಅದರ ಜೊತೆಗೆ ಸರ್ಕಲ್ ಸೊಸೈಟಿಗಳನ್ನು strengthen ಮಾಡಬೇಕು. ಇದಕ್ಕಾಗಿಯೇ ಬೇರೆ ಒಂದು ಸೊಸೈಟಿ ಪ್ರಾರಂಭಮಾಡಿ ಕೆಲಸಮಾಡಬೇಕೆಂದರೆ ಬಹಳ ಕಾಲಬೇಕು. ಆದ್ದರಿಂದ ಯಾವ ಊರಿನಲ್ಲಿ ಬಹಳ ಹೆಚ್ಚಾಗಿ ಸಾಲದ ಅರ್ಜಿಗಳು ಬರುತ್ತದೆಯೋ ಅಲ್ಲಿ ಸರ್ಕಲ್ ಸೊಸೈಟಿಗಳಲ್ಲೇ ಒಂದು ಬ್ರಾಂಚ್ ಇಟ್ಟು ಅವಶ್ಯಕವಾದ ಶಿಬ್ಬಂದಿ ಕೊಟ್ಟರೆ ಆಗ ಸಾಲ ಜಾಗ್ರತೆಯಾಗಿ ದೊರೆಯುತ್ತದೆ.

2 P.M.

ಆದ್ದರಿಂದ ಹೀಗೆ ಇರುವ ಸಂಬಂಧಕ್ಕೆ ಧಕ್ಕೆ ಬರಬಾರದು ಮತ್ತು confusion ಇರಬಾರದು. ಈ confusion remove ಮಾಡುವುದಕ್ಕೆ ಅವಕಾಶ ಕಲ್ಪಿಸಿ ಒಂದು ಕಡೆ ಕೆಲಸ ಮಾಡುವಂತೆಯೂ, ಒಂದಕ್ಕೊಂದಕ್ಕೆ ಲಿಂಕ್ ಇರುವಂತೆಯೂ ಮಾಡಬೇಕು. ಇದಕ್ಕಾಗಿ ಎಪೆಕ್ಸ್ ಬ್ಯಾಂಕಿನ ಕಾನ್‌ಸ್ಟಿಟ್ಯೂಷನ್ ಕೂಡ ಬದಲಾಯಿಸಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿನ ಪ್ರಾಜೆಕ್ಟ್ ಆಗಬೇಕೆಂದು ಆಲೋಚನೆ ಮಾಡಿದೆ. ಅದು ಪ್ರಾಮುಖ್ಯವಾದುದೆಂಬ ಒಂದು ದೃಷ್ಟಿಯಿಂದ ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚಿನ ವ್ಯವಸ್ಥೆ ಮಾಡಿದೆ. ಹೀಗೆ ಒಂದಕ್ಕೊಂದಕ್ಕೆ ಸಂಬಂಧ ಕಲ್ಪಿಸಬೇಕೆಂಬ ಏನೊಂದು ಉದ್ದೇಶವಿದೆಯೋ ಅದಕ್ಕೆ ತಕ್ಕಂತೆ ನಮ್ಮ ದೇಶದಲ್ಲಿ ಸಹಕಾರ ಸಂಘಗಳು ಹೆಚ್ಚಿನ ಪಾತ್ರವಹಿಸಬೇಕು, ಜನರಿಗೆ ಅದರಿಂದ ಎಷ್ಟೋ ಸಹಾಯವಾಗಬೇಕು. ರೈತರಿಗೆ ಅವಶ್ಯಕವಾದ ಪದಾರ್ಥಗಳು ಸಹಕಾರ ಸಂಘಗಳಲ್ಲಿ ಮಾರಾಟವಾಗಬೇಕು, ರೈತರಿಗೆ ಬೇಕಾದ ಕಾಳನ್ನು ಒದಗಿಸಲು ವೇರ್ ಹೌಸಸ್ ಅನುಕೂಲತೆ ಒದಗಬೇಕು ಎಂದು ಹೀಗೆ ಎಲ್ಲಾ ದೃಷ್ಟಿಯಿಂದ, ಸಮಗ್ರ ದೃಷ್ಟಿಯಿಂದ ಸಮಗ್ರ ಗ್ರಾಮ ಸೇವೆ ಮಾಡಬೇಕು ಎಂದು ಚಳವಳಿ ನಡೆದಿರುವುದಕ್ಕೆ ಈ ಸಭೆಯಲ್ಲಿ ಹೆಚ್ಚಿನ ಸಹಕಾರ ಕೊಡಬೇಕು. ಇದಕ್ಕೆ ತಕ್ಕ ಸಹಕಾರ ಕೊಟ್ಟರೆ ಸೌಲಭ್ಯ ದೊರೆಯುತ್ತದೆ. ಸರಿಯಾದ ಕಾರ್ಯಕರ್ತರನ್ನು ತಯಾರು ಮಾಡಿ ಪಟ್ಟಣಗಳಲ್ಲಿ ಮಾತ್ರವಲ್ಲದೆ ಗ್ರಾಮಾಂತರ ಪ್ರದೇಶಗಳಲ್ಲೂ ಕೋ-ಆಪರೇಟಿವ್ ಕಾನ್ಫರೆನ್ಸ್ ಏರ್ಪಡಿಸಿ ಎಲ್ಲಾ ಸೊಸೈಟಿಗಳೂ ಚೆನ್ನಾಗಿ ಕೆಲಸ ಮಾಡುವಂತೆ ಏರ್ಪಾಡು ಮಾಡಬೇಕು. ಪ್ಲಾನಿಂಗ್ ಕಮಿಷನ್ ಸಹ ಸರ್ಕಾರಕ್ಕೆ ಸಾಕಾದಷ್ಟು ಸಹಕಾರ ಕೊಡಬೇಕೆಂದು ಸೂಚಿಸಿದೆ.

ಮಾನ್ಯ ಸದಸ್ಯರು ಕೆಲವರು ವರ್ತಕರ ಜೊತೆಯಲ್ಲಿ ಪೈಪೋಟಿ ಮಾಡುವುದು ಬಹಳ ಕಷ್ಟವೆಂದು ಹೇಳಿದರು. ನಮ್ಮ ಕೆಲಸ ನಾವೇ ಮಾಡಿಕೊಳ್ಳಬೇಕು, ಅದೇ ಜಾಣತನ. ಬೇರೆಯವರು ಬಂದು ಕೆಲಸ ಮಾಡಿ ಕೊಡುವ ಕಾಲ ಹೋಯಿತು. ಇದು ಪ್ರಜಾಪ್ರಭುತ್ವದ ಕಾಲ. ನಾಲ್ಕಾರು ಸೊಸೈಟಿಗಳನ್ನು ಮ್ಯಾನೇಜ್ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರೆ ರಾಜ್ಯಾಡಳಿತವನ್ನೂ ಮಾಡುವುದಕ್ಕಾಗುವುದಿಲ್ಲ, ಶ್ರದ್ಧೆವಹಿಸಿ ಕೆಲಸ ಮಾಡಬೇಕು ಸುಮ್ಮನೆ ಕುಳಿತುಕೊಳ್ಳಬಾರದು. ತಪ್ಪು ಮಾಡುವುದು ಮನುಷ್ಯ ಸ್ವಭಾವ. ಅದನು ಗಮನಿಸಿ ಇರುವ ಲೋಪದೋಷಗಳನ್ನೂ ನ್ಯೂನತೆಗಳನ್ನೂ ಸರಿಪಡಿಸಬೇಕು. ಎಷ್ಟೋ ಮಂದಿ ಐ. ಸಿ. ಎಸ್. ಆಫೀಸರುಗಳೂ ಕೂಡ ಸಿಕ್ಕಿಹಾಕಿಕೊಂಡಿರುವ ನಿದರ್ಶನಗಳಿಲ್ಲವೆ ! ಸೊಸೈಟಿ ಮ್ಯಾನೇಜ್‌ಮೆಂಟನ್ನು ಸರಿಯಾಗಿ ಕೆಲಸ ಮಾಡತಕ್ಕವರಿಗೆ ವಹಿಸಬೇಕು. ಈ ದಿವಸ ದಕ್ಷರಾದವರು ಬೇಕಾದಷ್ಟು ಮಂದಿ ನಮ್ಮಲ್ಲಿದ್ದಾರೆ, ಖಾಸಗೀ ಮಹನೀಯರೂ, ಒಳ್ಳೆಯ ಸೇವೆ ಸಲ್ಲಿಸಿರುವವರೂ ನಮ್ಮ ದೇಶದಲ್ಲಿ ಅನೇಕರಿದ್ದಾರೆ. ಹಾಗಿರುವಾಗ ತಪ್ಪು ಮಾಡಿರುವವರಿಗೆ ಶಿಕ್ಷೆಮಾಡಿ ಬೇರೆ ಯೋಗ್ಯರಾದವರನ್ನು ಆ ಸ್ಥಾನಗಳಿಗೆ ತಂದಿಡಿ. ಒಬ್ಬೊಬ್ಬರು ಯಾರೋ ತಪ್ಪು ಮಾಡುತ್ತಾರೆಂದು ಸೊಸೈಟಿಯನ್ನೇ ಮುಚ್ಚುವುದು ಬುದ್ಧಿವಂತಿಕೆಯಲ್ಲ. ಕೆಲವು ಕಾಲ ಸೊಸೈಟಿಗಳಲ್ಲಿ

ಸರಿಯಾಗಿ ಬಿಸಿನೆಸ್ ಆಗುತ್ತಿತ್ತು. ಕಂಟ್ರೋಲ್ಡ್ ಗುಡ್ಸ್ ಸಹ ಅವುಗಳಿಗೆ ಕೊಡುತ್ತಿತ್ತು. ಸರ್ಕಾರಕ್ಕೆ ಸೂಕ್ತ ಸಲಹೆ ಕೊಟ್ಟು ಈಗಲೂ ಸೊಸೈಟಿಗಳಿಗೆ ಸುವ್ಯವಸ್ಥೆ ಮಾಡಬೇಕು. ಮಂಡ್ಯ ಸೊಸೈಟಿ ಈ ದಿವಸ thrive ಆಗುತ್ತಿದೆ; ನಾಗಮಂಗಲ, ಮುಳಬಾಗಲು ಸೊಸೈಟಿಗಳೂ thrive ಆಗುತ್ತಿವೆ. ಈ ದಿವಸ ಬರೀ ಟೆಕ್ನಿಕಲ್ ಆಕ್ಟಿವಿಟೀಸ್ ಇರಬೇಕೆಂದು ಮಾಡಿದ ಮೇಲೆ ಪುನಃ ಡಿಪೋ ಪ್ರಾರಂಭ ಮಾಡುವುದನ್ನು ಮನ್ನಾ ಮಾಡಬೇಕು. ಅದು ಸೊಸೈಟಿಯ ಲೆಜಿಟಿಮೇಟ್ ಫಂಕ್ಷನ್ ಅಲ್ಲ. ಲೋಪದೋಷಗಳಿರಬಹುದು. ಮನುಷ್ಯರು ಕೆಲಸ ಮಾಡುವ ಸಂಸ್ಥೆಗಳಲ್ಲಿ ಲೋಪದೋಷ ಬರುವುದು ಸ್ವಾಭಾವಿಕ. ಇದನ್ನು ತಿದ್ದಿಕೊಂಡು ಹೋಗುವುದು ಜಾಣತನ. ಶ್ರೀಮಾನ್ ಭೀಮಪ್ಪನಾಯಕರು ಅನೇಕ ಸೊಸೈಟಿಗಳಿಗೆ ಕಾರ್ಯದರ್ಶಿಯಾಗಿದ್ದರು. ಆದರೆ ಅವುಗಳಲ್ಲಿ ಲೋಪದೋಷಗಳಿವೆಯೆಂದು ತಮ್ಮ ಕೆಲಸ ಬಿಟ್ಟು ಬಿಟ್ಟರೆ? ಆದರೆ ಒಂದಂಶ ಮನಸ್ಸಿನಲ್ಲಿಡಬೇಕು. ಲೋಪದೋಷಗಳಿದ್ದರೆ ಅವನ್ನು ತಿದ್ದುವುದು ಬುದ್ಧಿವಂತಿಕೆ. ತಪ್ಪಿಗೆ ಶಿಕ್ಷೆ ವಿಧಿಸಬೇಕು. ಆಡಿಟ್ ವ್ಯವಸ್ಥೆ ಮಾಡಿ ಹೆಚ್ಚಾಗಿ ಆಡಿಟ್ ಮಾಡಿದರೆ ಅನುಕೂಲ. ಈಗಿರುವ ವ್ಯವಸ್ಥೆ ಸಾಲದು. ಬೇರೆ ಮೊಬೈಲ್ ವ್ಯವಸ್ಥೆ ಮಾಡಿ 40-50 ಸೊಸೈಟಿಗಳಲ್ಲಿ ಪೀರಿಯಾಡಿಕಲ್ ಟೆಸ್ಟ್ ಮಾಡಿ ಈ ಬಗ್ಗೆ ವೆಚ್ಚ ಕಡಮೆಯಾಗುತ್ತದೆಂದು ಹೇಳಿದರು. ಒಂದು ವೇಳೆ ನಾನು ಒಂದು ಕಡೆ ಪತ್ತೆ ಮಾಡಬಹುದು. ಇತರ ಕಡೆ ಪತ್ತೆಯಾಗದಿರಬಹುದು. ಒಂದು ಕಡೆ ಸಾಯಂಕಾಲ ಮಂಡಿ ಬಾಗಿಲು ಹಾಕಿ ಒಳಗೆ ಒಬ್ಬನನ್ನು ಬಿಟ್ಟು ಹೋಗಿದ್ದರು. ಅವನು ಮೂಟೆಗೆ ಒಂದೊಂದು ಸೇರಿನಂತೆ ತೆಗೆದು ಬಿಟ್ಟಿರುವುದು ಆಮೇಲೆ ಪತ್ತೆಯಾಯಿತು. ಆದ್ದರಿಂದ ದಿನಸಿ ಮಂಡಿ ಅಥವಾ ಸೊಸೈಟಿಯಾದರೂ ಹೀಗಾಗುವುದುಂಟು. ಇದಕ್ಕೆ ಹೆದರಬಾರದು. ಅಂಥ ವೇಳೆಯಲ್ಲಿ ತಪ್ಪು ಮಾಡಿದ ಮನುಷ್ಯನನ್ನು ತೆಗೆದು ಬೇರೆಯವರನ್ನು ಗೊತ್ತುಮಾಡಿ ಕೆಲಸ ನಡೆಸುವುದು ಜಾಣತನ. ಆದುದರಿಂದ ಇದೆಲ್ಲವನ್ನೂ ಪರಿಶೀಲಿಸುವುದಲ್ಲದೆ ಈ ಸಂಸ್ಥೆಗಳನ್ನು ಬಲಪಡಿಸುವುದು ಅಗತ್ಯ. ಹಾಗೆಯೇ ವೇರ್‌ಹೌಸಸ್ ಏರ್ಪಡಿಸುವುದು, ಷಾರ್ಟ್ ಟರ್ಮ್ ಲೋನ್ಸ್ ರಿಸರ್ವ್ ಬ್ಯಾಂಕಿನಿಂದ ಕೊಡುವುದು ಮುಂತಾದ ಅನುಕೂಲ ರೈತರಿಗೆ ಒದಗಿಸುವುದು ಅಗತ್ಯ ಎಂದು ಹೇಳಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

Sri M. MADIAH (Nanjangud—Scheduled Castes).—On a point of order. The Member has exceeded seven minutes, the time fixed for each member by the Chair.

Mr. SPEAKER.—Why did you not raise that point when he was still on his legs? I thought the speech was very instructive and the House was prepared to listen to him. He has concluded his speech.

ಡಾ|| ಆರ್. ನಾಗನಗೌಡ.—ಸ್ವಾಮಿ, ಸಹಕಾರ ಸಂಘಗಳ ವಿಷಯವಾಗಿ ಇಷ್ಟು ಮಂದಿ ಈ ಸಭೆಯ ಸದಸ್ಯರು ಬಹಳ ಶ್ರದ್ಧೆಯಿಂದ ಭಾಷಣ ಮಾಡಿರುವುದನ್ನು ನೋಡಿದರೆ ಈ ಸಹಕಾರ ಸಂಘಗಳ ಉದ್ಯಮ ಚೆನ್ನಾಗಿ ಬೆಳೆಯಬೇಕೆಂದು ಅವರೆಲ್ಲರಿಗೂ ಇಷ್ಟವಿದೆಯೆಂದು ಹೇಳತಕ್ಕ ಆವಶ್ಯಕತೆಯಿಲ್ಲ. ಈಗ ಸಹಕಾರ ಸಂಘಗಳು ನಮ್ಮ ದೇಶದಲ್ಲಿ ಬಹಳವಾಗಿವೆ ಎಂದು ಇಲ್ಲಿ ಎಲ್ಲರೂ ಒಪ್ಪಿಕೊಂಡಿದ್ದಾರೆ. ಈಗ ನಮ್ಮ ಸಂಸ್ಥಾನದಲ್ಲಿ 5,000 ಕ್ಕೆ ಮೇಲ್ಪಟ್ಟು ಸಹಕಾರ ಸಂಘಗಳಿವೆ. ಇವುಗಳಲ್ಲಿ ಬಹಳ ಮಟ್ಟಿಗೆ ಬಹುಸಂಖ್ಯೆಯ ಸೊಸೈಟಿಗಳು ಚೆನ್ನಾಗಿ ಕೆಲಸ ಮಾಡುತ್ತಿವೆ. ಕೆಲವು ಚೆನ್ನಾಗಿ ಮಾಡುತ್ತಿಲ್ಲವೆಂಬುದು ಎಲ್ಲರಿಗೂ ತಿಳಿದೇ ಇದೆ. ಈಗ ಚೆನ್ನಾಗಿ ಕೆಲಸ ಮಾಡದಿರುವ ಸಹಕಾರ ಸಂಘಗಳಿಗೆ ಸರಿಯಾಗಿ ಕೆಲಸ ಮಾಡುವ ಹಾಗೆ ಮಾಡಲು ಏನು ಏರ್ಪಾಡು ಮಾಡಬೇಕು, ಚೆನ್ನಾಗಿ ಕೆಲಸಮಾಡುವ ಸಂಘಗಳಿಗೆ ಇನ್ನೂ ಸ್ವಲ್ಪ ಹೆಚ್ಚಾಗಿ ಕೆಲಸಮಾಡುವಂತೆ ಮಾಡಲು ಏನು ಸಹಾಯ ನೀಡಬೇಕು ಎಂಬುದು ನಮ್ಮ ದೃಷ್ಟಿಯಲ್ಲಿದೆ.

ಒಬ್ಬ ಮಹನೀಯರು sudden stoppage of help ಈ ಸಂಘಗಳು ಕೆಲಸಮಾಡಲು ಹಿಂದೆ ಬಿದ್ದಿರುವುದಕ್ಕೆ ಕಾರಣ ಎಂದು ಹೇಳಿದರು. ಈಗ ಮಲ್ಟಿಪರ್ಪಸ್ ಸೊಸೈಟಿಗಳು 3-4 ವರ್ಷ ಕೆಲಸಮಾಡಿವೆ. ಕಂಟ್ರೋಲ್ ಮುಂತಾದುವು ಇದ್ದಾಗ ಅವುಗಳಿಗೆ ಬಹಳ ಅವಕಾಶವಿತ್ತು. ಅವು ಆ ಸಮಯದಲ್ಲಿ ತಮ್ಮ ಸ್ಥಳವನ್ನು ಭದ್ರಪಡಿಸಿಕೊಳ್ಳುವುದಕ್ಕೆ ಅವಕಾಶವಿತ್ತು, ಬಲಪಡಿಸಿಕೊಳ್ಳಲು ಅನುಕೂಲವಿತ್ತು. ರಿಸರ್ವ್ ಫಂಡ್ ಮುಂತಾದವನ್ನು ಏರ್ಪಾಡು ಮಾಡಬೇಕಾದುದು ಆವಶ್ಯಕವಾಗಿತ್ತು. ನಾನು ನೋಡಿದ ಹಾಗೆ ಬಳ್ಳಾರಿಯ ಸೆಂಟ್ರಲ್ ಸ್ಟೋರ್ಸ್‌ನವರು 10 ಲಕ್ಷ ರಿಸರ್ವ್ ಫಂಡನ್ನು ಮಾಡಿಕೊಂಡು ಒಂದು ಕಟ್ಟಡ ಸಹ ನಿರ್ಮಿಸಿದ್ದಾರೆ. ಅದರಂತೆ ಕಂಟ್ರೋಲ್ ಕಾಲದಲ್ಲಿ ಸಹಕಾರ ಸಂಘಗಳು ಅಲ್ಲಿ ಬಹಳ ಚೆನ್ನಾಗಿ ಮುಂದುವರಿದಿವೆ. ಇಲ್ಲಿ ಮಲ್ಟಿಪರ್ಪಸ್ ಸೊಸೈಟಿಗಳು ಕೆಲವು ಸರಿಯಾಗಿ ಕೆಲಸಮಾಡಿಲ್ಲ, ಕೆಲವು ಸೊಸೈಟಿಗಳಲ್ಲಿ ಹಣವನ್ನು ಚೆನ್ನಾಗಿ ಉಪಯೋಗಮಾಡಿಲ್ಲ ಎಂದು ಹೇಳಿದರು. ಅದನ್ನು ಚೆಕ್ ಮಾಡುತ್ತಿದ್ದೇವೆ. ಅದಕ್ಕೆ ಯಾರು ಜವಾಬ್ದಾರಿಯೋ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಮಲ್ಟಿಪರ್ಪಸ್ ಸೊಸೈಟಿಗಳು ಈಗ ನಮ್ಮ ಸಂಸ್ಥಾನದಲ್ಲಿ 800 ಇವೆ; ತಾಲ್ಲೂಕು ಮತ್ತು ಹೋಬಳಿ ಸೊಸೈಟಿಗಳಿವೆ. ಅಮೋನಿಯಂ ಸಲ್ಫೇಟ್ ಮತ್ತು ಫರ್ಟಿಲೈಸರ್ಸ್ ಮುಂತಾದುವನ್ನು ಮಾರಾಟ ಮಾಡುವುದಕ್ಕೆ ಇವನ್ನಿಟ್ಟು ಬಲಪಡಿಸಬೇಕೆಂದಿದೆ. ಈಗಾಗಲೆ ಈ ಸಂಘಗಳಲ್ಲಿ ಈ ಕೆಲಸ ಜಾರಿಯಲ್ಲಿದೆ.

ಇನ್ನೊಂದು; ಸಹಕಾರ ಸಂಘಗಳಲ್ಲಿ ಆಡಿಟ್ ಚೆನ್ನಾಗಿ ಆಗಿಲ್ಲವೆಂದು ಹೇಳಿದರು. ಆಡಿಟ್ ಸಹಕಾರ ಸಂಘಗಳಲ್ಲಿ ಬಹಳ ಆವಶ್ಯಕ, ದಕ್ಷತೆಯುಳ್ಳ ಜನರು, ಆನೆಸ್ಟಾದ ಆಫೀಸ್ ಬೇರರ್ಸ್ ಮತ್ತು ಪಂಚಾಯ್ತಿದಾರರು ಮುಂತಾದವರಿದ್ದರೆ ಕೆಲಸ ಚೆನ್ನಾಗಿ ನಡೆಯುತ್ತದೆಂದು ಹೇಳಿದರು. ಅದು ನಿಜ. ಆದರೂ ಯಾವ ಮನುಷ್ಯನಿಗಾದರೂ ಟೆಂಪ್ಟೇಷನ್ ಬರುವ ಹಾಗೆ ಮಾಡಬಾರದು. ಸರಿಯಾಗಿ ತನಿಖೆಮಾಡಲು ಈಗ 50 ಸೊಸೈಟಿಗಳಿಗೆ ಒಬ್ಬ ಆಡಿಟರನ್ನು ಮಾಡಲು ಏರ್ಪಾಡಿದೆ. ಅದೂ ಅಲ್ಲದೆ ಡಿಸ್ಟ್ರಿಕ್ಟಿಗೊಬ್ಬ ಆಡಿಟರಿರಬೇಕೆಂದು ಸಹ ಪ್ರಪೋಸಲ್ ಇದೆ ಮತ್ತು ಹೆಡ್‌ಕ್ವಾರ್ಟರಿನಲ್ಲಿ ಸಹ ಚೀಫ್ ಆಡಿಟರಿರಬೇಕೆಂದು ಏರ್ಪಾಡು ಮಾಡಿದೆ. ಈ ಪ್ರಪೋಸಲ್ ಎಲ್ಲಾ ಇವೆ. ಆಡಿಟರ ಕೆಲಸ ಬಹಳ ಮುಖ್ಯವಾದುದೆಂಬುದು ಎಲ್ಲರಿಗೂ ಗೊತ್ತೇ ಇದೆ.

(ಡಾ|| ಆರ್. ನಾಗನಗೌಡ)

ಆ ತರುವಾಯ short-term credit ವಿಷಯ. ರಿಸರ್ವ್ ಬ್ಯಾಂಕಿನವರು ಈಗ ಹಣ ಸಹಾಯ ಮಾಡುವುದಕ್ಕೆ ಸಿದ್ಧವಾಗಿದ್ದಾರೆ. ಇದಕ್ಕೆ ನಾವು ಈಗ 3 ಜಿಲ್ಲೆಗಳಲ್ಲಿ short-term credit ಇದೇ ವರ್ಷ ಕೊಡಲು ಏರ್ಪಾಡು ಮಾಡಿದ್ದೇವೆ. ಹಾಸನ, ಮಂಡ್ಯ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಆ ಏರ್ಪಾಡಾಗಿದೆ. ಇದಕ್ಕೆ ಸೆಂಟ್ರಲ್ ಬ್ಯಾಂಕ್ ಏರ್ಪಾಡುಮಾಡಿದೆ ಮತ್ತು ಮಾನ್ಯ ಮಿತ್ರರು ಹೇಳಿದಹಾಗೆ short-term credit ಗಳನ್ನು ಎಲ್ಲಾ ಹೋಬಳಿ ಸೊಸೈಟಿ, ಸರ್ಕಲ್ ಸೊಸೈಟಿಗಳ ದ್ವಾರಾಕೊಡಲು ಏರ್ಪಾಡು ಮಾಡುತ್ತಿದ್ದೇವೆ.

ರೆಗ್ಯುಲೇಟೆಡ್ ಮಾರ್ಕೆಟ್ ವಿಷಯ ಶ್ರೀ ಶ್ರೀನಿವಾಸಯ್ಯಂಗಾರ್‌ರವರು ಹೇಳಿದರು. ಈಗ 100 ರೂಪಾಯಿಗಳಿಗೆ ನಾಲ್ಕಾಣೆ ಕಮಿಷನ್ ತೆಗೆದುಕೊಂಡು ಕೆಲಸಮಾಡುತ್ತಿದ್ದಾರೆ, ವ್ಯಾಪಾರಸ್ಥರಿಗೆ ಬರಬೇಕಾಗಿರುವುದಷ್ಟು ಎಂದು ಹೇಳಿದರು. ಆದರೆ ಅವರು ಬರೀ ನಾಲ್ಕಾಣೆ ಆಧಾರದ ಮೇಲೆ ಇದ್ದಾರೆಯೆ ಎಂಬುದು ಅನುಮಾನಾಸ್ಪದವಾಗಿದೆ. ಮಾಮೂಲಾಗಿ ನಾಲ್ಕಾಣೆ ತೆಗೆದುಕೊಂಡರೆ ಅದರ ಜೊತೆಗೆ ಹಮಾಲಿ ಮುಂತಾದುವು ಇರುತ್ತವೆಯೋ ಏನೋ ಎಂದೂ ಭಯವಾಗಿದೆ. ಈಗ ಇಂಥ ಮಾಮೂಲು ಒಂದೂ ಇಲ್ಲದಹಾಗೆ ರೆಗ್ಯುಲೇಟೆಡ್ ಮಾರ್ಕೆಟ್ ಮಾಡಿದರೆ ರೈತರು ಆಕ್ಷನ್ ಆಗುವಾಗ ಬಹಳ ಹೊತ್ತು ಬೆಳಗಿನಿಂದ ಸಾಯಂಕಾಲದವರಿಗೆ ಕಾಯಬೇಕು, ಅದು ಕಷ್ಟವಾದ ವಿಚಾರ ಎಂದು ಹೇಳಿದರು. ನನಗೆ ತಿಳಿದ ಹಾಗೆ ಈಗ ಆಕ್ಷನ್ ಪದ್ಧತಿ ಬಹಳ ಕಡೆ ಇದೆ. ಹೊಗೇಸೊಪ್ಪು, ಕಡಲೇಕಾಯಿ, ಹತ್ತಿ ಇವುಗಳಿಗೆಲ್ಲಾ ರೆಗ್ಯುಲೇಟೆಡ್ ಮಾರ್ಕೆಟ್ ಇದೆ, ಅಲ್ಲಿ ಕೆಲಸ ಚೆನ್ನಾಗಿ ನಡೆಯುತ್ತಿದೆಯೆಂಬ ಅಭಿಪ್ರಾಯವಿದೆ. ಈಗ ಕಾಲವಾಯಿತು, ಕೆಲವು ವಿಷಯಗಳಿಗೆ ಮಾತ್ರ ಜವಾಬು ಹೇಳಿದ್ದೇನೆ. ವೇರ್ ಹೌಸ್ ವಿಷಯದಲ್ಲಿ ಹೇಳುವುದಾದರೆ, ಎಲ್ಲೆಲ್ಲಿ ಮಾರ್ಕೆಟಿಂಗ್ ಸೊಸೈಟಿ ಮುಂದೆ ಒಂದು ವೇರ್‌ಹೌಸ್ ಮಾಡುತ್ತದೆಯೋ ಅಲ್ಲಿ ಅದಕ್ಕೆ ಸಹಾಯಮಾಡಲು ಪ್ರಯತ್ನ ಮಾಡುತ್ತೇವೆ. ಈ ಭರವಸೆಯ ಮೇಲೆ ಈ ಡಿಮ್ಯಾಂಡನ್ನು ಮಂಜೂರು ಮಾಡುತ್ತೀರೆಂದು ನಂಬುತ್ತೇನೆ.

Mr. SPEAKER.—The question is:

"That a sum not exceeding Rs. 7,80,000 be granted to the Government to defray the charges which will come in course of payment during the year ending 31st day of March 1955, in respect of 'Co-operation'."

The motion was adopted.

DEMAND No. 26.—INDUSTRIES AND SUPPLIES.

43. INDUSTRIES AND SUPPLIES (EXCEPT SERICULTURE).

Mr. SPEAKER.—Motion moved:

"That a sum not exceeding Rs. 6,48,20,100 be granted to the Government to defray the charges which will come in course of payment during the year ending 31st day of March 1955, in respect of 'Industries and Supplies (Except Sericulture)'."

Sri R. ANANTARAMAN (Chamarajpet).—Sir, I have a cut motion under this head to raise a debate that Industrial loans granted last year were inadequate. Last year the amount granted was about Rs. 40,000. This year it has been raised to Rs. 8,48,900. But I am afraid this sum is very inadequate. As we know, during the previous years lakhs of rupees were given to big industries as loans. They are still unrecoverable. But petty merchants and petty industrialists could not get any help from the Government. From my own constituency some representations were made to the Hon'ble Minister in charge during last year and also this year that industrial loans are not at all granted to petty merchants and industrialists like weavers. But there is no response from the Government. People from my own constituency have approached the Department, approached many members of the Committee and in fact I sent a representation to the members of the Committee also. But still they were of no use. I am afraid that at this rate these industrial loans will not be beneficial to the small people. People say and even now they are talking about that the Government is helping only bigger people and not petty merchants. So I make a request to the Government that at least hereafter some amount must be earmarked just for the benefit of small people whether they live in villages or in cities, so that they can start some small industries. For example, this year loans to rural and cottage industries amount to Rs. 15,700. This is a very small sum. We are having a budget of 22 crores. Only Rs. 15,000 have been provided towards loans to these cottage industries. Loans for purchase of machinery come to about Rs. 2,50,000; loans to the educated unemployed for starting industries come to Rs. 12,000.

[Sri R. K. PRASAD in the Chair.]

In fact we are having another set of unemployed persons now, who are graduates and they want to start their own industries, but not enough provision is made. Then there is the colonisation scheme. In fact Government on the floor of this House and elsewhere have stated that they intend starting some schemes. The sum of Rs. 12,000 provided is pitiable. I wish they provided some more under this head.

Then there is the provision for loans to Mysore Silk Filatures, of Rs. 1,00,000. Today to an interpellation the Government have replied that they have provided loan to silk filatures and the Hon'ble Minister stated that in order to see that industries should thrive, this year loan has been provided for. But thinking that it may be recoverable or non-recoverable, the amount provided is a small one.

For the Mysore Tobacco Company a sum of Rs. 40,000 and for the Mysore Electric and Manufacturing Company 4 lakhs are provided. What I intend saying is that hereafter Government must make up their minds to give loans to small people, especially weavers—silk weavers, cotton weavers, who are in a very pitiable condition. In Cubbonpet from which the Hon'ble Member Sri B. M. Seenappa is elected, there are many weavers most of whom are unemployed. They have approached the Government for small industrial loans. They are prepared to give sufficient security. Most of them own small houses. They are ready to give their houses as security. But Government are not coming forward to give them loans. So I request the Government to liberally give loans to these small merchants and industrialists and weavers so that they can earn their livelihood.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಮೈಸೂರು ಸಂಸ್ಥಾನದಲ್ಲಿ ನಮ್ಮ ಸರ್ಕಾರ ಮೊದಲಿನಿಂದಲೂ ಕೈಗಾರಿಕೆಯನ್ನು ರಾಷ್ಟ್ರೀಕರಣ ಮಾಡಬೇಕೆಂದು ಹೇಳುತ್ತಲೇ ಇದ್ದಾರೆ. ಇತರ ಪ್ರಾಂತ್ಯಗಳಲ್ಲಿ ಇದು ಖಾಸಗೀ ಜನರ ಕೈಲಿದೆ. ಆದರೆ ಪ್ರಜಾಸೋಷಿಯಲಿಸ್ಟ್ ಪಾರ್ಟಿಯವರು ಈಗಾಗಲೇ ಹಲವಾರು ಪ್ರದೇಶಗಳಲ್ಲಿ ಕೈಗಾರಿಕೆಯನ್ನು ರಾಷ್ಟ್ರೀಕರಣ ಮಾಡಬೇಕೆಂದು ಒತ್ತಾಯಮಾಡುತ್ತಿದ್ದಾರೆ. ಈ ಕೈಗಾರಿಕೆಗಳು ಈಗ ಮುಂದುವರಿಯುತ್ತಿರುವ ರೀತಿ ನೀತಿಗಳನ್ನು ನೋಡಿದರೆ ಖಾಸಗೀ ಜನರ ಹತೋಟಿಯಲ್ಲಿರುವ ಕೈಗಾರಿಕೆಗಳೇ ಉತ್ತಮವಾಗಿ ನಡೆದುಕೊಂಡು ಹೋಗುತ್ತಿವೆಯೆಂದು ಕಂಡುಬರುತ್ತದೆ. ಈ ಕೈಗಾರಿಕೋದ್ಯಮದಲ್ಲಿ ಸರ್ಕಾರದವರೇ ಪೂರ್ಣವಾಗಿ ಬಂಡವಾಳ ಹಾಕಿ ನಡೆಯುತ್ತಿರುವ ಕೈಗಾರಿಕೆ, ಸರ್ಕಾರದ ಮತ್ತು ಖಾಸಗೀ ಜನರ ಬಂಡವಾಳದಿಂದ ನಡೆಯುತ್ತಿರುವ ಕೈಗಾರಿಕೆ, ಖಾಸಗೀ ಬಂಡವಾಳ ಒಂದರಿಂದಲೇ ನಡೆಯುತ್ತಿರುವ ಕೈಗಾರಿಕೆ, ಪರಕೀಯರು ಭಾರತದಲ್ಲಿ ನಡೆಸುತ್ತಿರುವ ಕೈಗಾರಿಕೆ ಈ ರೀತಿ ಬೇರ್ಪಡಿಸಿ ಒಂದಕ್ಕೊಂದಕ್ಕೆ ಹೋಲಿಸಿ ನೋಡಿದರೆ, ಸರ್ಕಾರದವರು ನಡೆಸುತ್ತಿರುವ ಕೈಗಾರಿಕೆಗಳಲ್ಲಿ ಅನೇಕ ಲೋಪದೋಷವಿರುವುದು ಕಂಡುಬರುತ್ತದೆ. ಸರ್ಕಾರದ ಕೈವಾಡವೇ ಪ್ರಾಮುಖ್ಯವಾಗಿರುವ ಕೈಗಾರಿಕಾಸಂಸ್ಥೆಗಳಲ್ಲಿ ಅನುಭವಸ್ಥರಾದವರು ಈ ಕೈಗಾರಿಕೆಗಳಲ್ಲಿ ಇಲ್ಲದೆ ಇರುವ ಲೋಪದೋಷಗಳು ಅನೇಕವಾಗಿವೆ. ನಮ್ಮ ದೇಶದಲ್ಲಿ ಸರ್ಕಾರದ ಹತೋಟಿಗೆ ಒಳಪಟ್ಟ ಹಾಗೆ ಸ್ಯಾಂಡಲ್ ಆಯಿಲ್ ಫ್ಯಾಕ್ಟರಿ ಇದೆ. ಈಗ ಇದರಲ್ಲಿ ತಯಾರಾಗುವ ಸರಕಿಗೆ ಸರಿಯಾದ ಗಿರಾಕಿಯನ್ನು ಹೊಂದಿಸಿಕೊಳ್ಳುವುದು, ಹೆಚ್ಚಿನ ಲಾಭ ಸಂಪಾದನೆಗೆ ಯಾವ ರೀತಿಯ ವ್ಯವಸ್ಥೆ ಮಾಡಿಕೊಳ್ಳಬೇಕೋ ಅದನ್ನು ಮಾಡಿಕೊಳ್ಳುವುದು, ಪರದೇಶಗಳಿಗೆ ಗಿರಾಕಿ ಹೆಚ್ಚಾಗಿ ದೊರಕುವ ಕಡೆಗೆ ರವಾನೆ ಮಾಡುವುದು ಇವೇ ಮುಂತಾದ ಕಾರ್ಯಗಳನ್ನು ಇದಕ್ಕಾಗಿಯೇ ಪ್ರತ್ಯೇಕವಾಗಿರುವ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಇಲಾಖೆಯವರು ಬಹಳ ವಿಚಕ್ಷಣೆಯಿಂದ ನಿರ್ವಹಿಸಬೇಕಾದುದು ಅತ್ಯಗತ್ಯ. ಶಿವಮೊಗ್ಗದಲ್ಲಿರುವ ಗಂಧದ ಕಾರ್ಖಾನೆಯನ್ನು ಸ್ವತಂತ್ರ ಸಂಸ್ಥೆಯನ್ನಾಗಿ ಪರಿವರ್ತಿಸಲು ಅವಕಾಶ ಕೊಟ್ಟರೆ ಈಗ ಬರುತ್ತಿರುವ ಲಾಭಕ್ಕಿಂತಲೂ ಇನ್ನೂ ಹೆಚ್ಚಿನ ಲಾಭ ಬರಬಹುದೆಂದು ತೋರುತ್ತದೆ. ಶಿವಮೊಗ್ಗದಲ್ಲಿ ಮ್ಯಾಚ್ ಫ್ಯಾಕ್ಟರಿಯೊಂದನ್ನು ಸ್ಥಾಪಿಸಿರುತ್ತಾರೆ. ಮೈಸೂರು ಸಂಸ್ಥಾನಕ್ಕೆಲ್ಲಾ ಒಂದೇ ಮ್ಯಾಚ್ ಫ್ಯಾಕ್ಟರಿ ಇದೆ. ವಿಮ್ಕೋ ಮ್ಯಾಚ್ ಫ್ಯಾಕ್ಟರಿ ಹಿಂದೂಸ್ಥಾನಕ್ಕೆ ಬೇಕಾದ ಶೇಕಡ 80 ರಷ್ಟು ಭಾಗವನ್ನು ಮಾಡುತ್ತಿದೆ. ಇದರಲ್ಲಿ competition ಗೆ ಅವಕಾಶ ಕೊಟ್ಟಿರುವುದರಿಂದ ಈ ರೀತಿ ಸಣ್ಣ ಪುಟ್ಟ ಕೈಗಾರಿಕೆಗಳು ಹಾಳಾಗುತ್ತಿವೆ. ಈ ರೀತಿ ಆಗಲು ಅವಕಾಶ ಕೊಡದೆ ನಮ್ಮ ಸಂಸ್ಥಾನದಲ್ಲಿ ಉತ್ಪತ್ತಿ ಆಗತಕ್ಕ ಬೆಂಕಿಕಡ್ಡಿ ಇಲ್ಲಿಯೇ ಮಾರಾಟವಾಗಲು ಜೋನ್ ಪದ್ಧತಿಯಂತೆ ಕಲ್ಪಿಸಿಕೊಂಡು ಬೆಂಕಿಕಡ್ಡಿಗೆ ರಕ್ಷಣೆ ಕೊಡುವುದು ಉತ್ತಮ. ಖಾಸಗಿ ಮಾರಾಟದ ವ್ಯವಸ್ಥೆ ಹೋಗಬೇಕು. ಸರ್ಕಾರ ಖರೀದಿ ಮಾಡಬೇಕು. ಈಗ ಸಿಮೆಂಟ್ ಕೈಗಾರಿಕೆಯ ವಿಷಯದಲ್ಲಿ ಹಿಂದುಸ್ಥಾನದಲ್ಲಿ ಇರುವ ಸಂಸ್ಥೆಗಳೆಲ್ಲಾ ಸೇರಿ ಒಂದೇ ವಿಧವಾದ ನೀತಿಯನ್ನು ಅನುಸರಿಸಿ ಉತ್ಪತ್ತಿ ಆಗುವ ಕಡೆ ಮಾರಾಟವಾಗುವಂತೆ ಏರ್ಪಡಿಸಿರುತ್ತಾರೆ. ಹೀಗೆ ಸಂಸ್ಥಾನದಲ್ಲಿ ಉತ್ಪತ್ತಿ ಆಗತಕ್ಕ ಪದಾರ್ಥಗಳಿಗೆ ಸಾಕಾದಷ್ಟು ರಕ್ಷಣೆ ಕೊಡಬೇಕು. ಹಾಸನದ ಇಂಪ್ಲಿಮೆಂಟ್ಸ್ ಫ್ಯಾಕ್ಟರಿಯಲ್ಲಿ ಉತ್ಪತ್ತಿ ಆಗುವ ಸಾಮಾನುಗಳಿಗೆ ಈಗ ಸರಿಯಾದ ಗಿರಾಕಿಯೇ ಇಲ್ಲ. ಸರ್ಕಾರದವರು ತಮ್ಮ ಹತೋಟಿಯಲ್ಲಿರುವ ನಾನಾ ಇಲಾಖೆಗಳಲ್ಲಾದರೂ ಇವುಗಳನ್ನೇ ಉಪಯೋಗಿಸಬೇಕೆಂದು ಆರ್ಡರ್ ಮಾಡದಿದ್ದರೆ ಅವುಗಳಿಗೆ ಉತ್ತೇಜನ ಹೇಗೆ ತಾನೇ ದೊರಕುತ್ತದೆ? ನಮ್ಮ ಸಂಸ್ಥಾನದಲ್ಲಿ ಕೈಗಾರಿಕೆಗಳಿಗೆ ಒದಗಿಸುವ Raw Materials ಗೇ ವಿಪರೀತವಾಗಿ ಖರ್ಚುಮಾಡುತ್ತಿದೆ. ಬೇರೆ ಕಾರ್ಖಾನೆಗಳಲ್ಲಿ ಇಷ್ಟು ಖರ್ಚು ಆಗುತ್ತಿಲ್ಲ. ಭದ್ರಾವತಿ ಉಕ್ಕಿನ ಮತ್ತು ಕಬ್ಬಿಣದ ಕಾರ್ಖಾನೆಗೆ

(ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.)

ಸಂಬಂಧಿಸಿದ ಹಾಗೆ ಸುಮಾರು 19 ಜನ ಪ್ರೊಬೇಷನರು ಶಿಕ್ಷಣ ಪಡೆಯಲು ಪರದೇಶಕ್ಕೆ ಹೋಗಿ ಬಂದು ಅನುಭವ ಪಡೆದು ಕೆಲಸಮಾಡುತ್ತಿರುವರು. ಆದರೆ ಈ ರೀತಿ ಅನುಭವ ಮತ್ತು ಅರ್ಹತೆ ಪಡೆದಿರುವವರನ್ನು ಸರಿಯಾಗಿ ಉಪಯೋಗಿಸುತ್ತಿಲ್ಲ. Mechanical Engineering ನಲ್ಲಿ ಅರ್ಹತೆ ಪಡೆದು ಬಂದಿರುವವರನ್ನು ಸಿವಿಲ್ ಇಂಜಿನಿಯರಿಂಗ್ ಕೆಲಸಕ್ಕೂ, ಇನ್ನೊಂದು ಭಾಗದಲ್ಲಿ ಅರ್ಹತೆ ಪಡೆದು ಬಂದವರನ್ನು ಬೇರೊಂದು ಶಾಖೆಯ ಕೆಲಸ ನೋಡಿಕೊಳ್ಳುವಂತೆಯೂ ನೇಮಿಸುವುದು, ಅನಂತರ ಕೆಲಸ ಸಮರ್ಪಕವಾಗಿ ನಡೆದಿಲ್ಲವೆಂದು ದೋಷ ಹೊರಿಸುವುದು ಈ ರೀತಿಯ ಮನೋಭಾವನೆ ಪ್ರಗತಿಯುತವಾದುದಲ್ಲ. ಇದರಿಂದ ಆ ಅಧಿಕಾರಿಯಲ್ಲಿ ದಕ್ಷತೆ ಕಡಿಮೆಯಾಗಿದೆ, ಆ ಸಂಬಂಧದ ಕೆಲಸ ತೃಪ್ತಿಕರವಾಗಿ ನಡೆಯುತ್ತಿಲ್ಲ ಎಂದು ಆಪಾದಿಸಲು ಅವಕಾಶವಾಗುತ್ತದೆಯೇ ಹೊರತು, ಆತನು ಯಾವುದರಲ್ಲಿ ಹೆಚ್ಚಿನ ಅರ್ಹತೆ ಮತ್ತು ಅನುಭವಪಡೆದಿರುತ್ತಾನೆಯೋ ಆ ಕೆಲಸಕ್ಕೆ ಅವನನ್ನು ನೇಮಿಸಿ ಆ ಕೈಗಾರಿಕೆಯನ್ನು ಉನ್ನತ ಮಟ್ಟಕ್ಕೆ ತರಬೇಕೆಂಬ ಧ್ಯೇಯ ಕಂಡುಬರುತ್ತಿಲ್ಲ. ಕಬ್ಬಿಣದ ಕಾರ್ಖಾನೆಯ ಕೆಲಸ ತೃಪ್ತಿಕರವಾಗಿ ನಡೆಯುತ್ತಿಲ್ಲವೆಂಬುದು ಅಲ್ಲಿನ ಅಂಕಿಅಂಶಗಳಿಂದ ನಾವು ನೋಡಬಹುದಾಗಿದೆ. ಕಬ್ಬಿಣದ ಕಾರ್ಖಾನೆಯಲ್ಲಿ ನಷ್ಟ ಸಂಭವಿಸುತ್ತದೆ ಎಂದು ಕಂಡುಬಂದರೆ ಕಬ್ಬಿಣದ ಅದುರಿನ ಬೆಲೆ ಹೆಚ್ಚಿಸಿ ಒಂದು ಅಥವಾ ಅರ್ಧ ಬೆಲೆ ಹಾಕಿ ಸರಿತೂಗಿಸಿ ಲೆಕ್ಕದಲ್ಲಿ ತೋರಿಸಿರುತ್ತಾರೆ. ಇದನ್ನು ಗಮನಿಸಿದುದೇ ಆದರೆ ಸರಿಯಾದ ರೀತಿಯಲ್ಲಿ ಲೆಕ್ಕಗಳನ್ನು ಇಡುತ್ತಿಲ್ಲವೆಂದು ತೋರುತ್ತದೆ. ವಿದ್ಯುಚ್ಛಕ್ತಿಗಾಗಿ 38 ಲಕ್ಷ 85 ಸಾವಿರ ರೂಪಾಯಿಗಳಷ್ಟು ಖರ್ಚು ಹಾಕಿದ್ದಾರೆ, ವಿದ್ಯುಚ್ಛಕ್ತಿ ಇಲಾಖೆಯವರು 20,98,000 ಜಮಾ ತೋರಿಸಿದ್ದರೆ ಕಾರ್ಖಾನೆಯ ಲೆಕ್ಕಕ್ಕೂ ವಿದ್ಯುತ್ ಇಲಾಖೆಗೂ ಸುಮಾರು 18 ಲಕ್ಷ ಅಥವ ಸ್ವಲ್ಪ ಹೆಚ್ಚು ಕಮ್ಮಿ ವ್ಯತ್ಯಾಸ ಕಂಡುಬರುವುದಕ್ಕೆ ಕಾರಣವೇನು ಎಂದು Auditor ಕಂಡುಹಿಡಿಯುವುದಿಲ್ಲವೆ? ಇನ್ನು ಇಲ್ಲಿ ಉತ್ಪತ್ತಿಯಾಗತಕ್ಕ ಸಾಮಾನುಗಳ ಮಾರಾಟದ ಬಗ್ಗೆ ವ್ಯವಸ್ಥಿತವಾದ ಏರ್ಪಾಡಿಲ್ಲ. ಮೈಸೂರು ಸಂಸ್ಥಾನದಲ್ಲಿ ಉತ್ಪತ್ತಿ ಆಗತಕ್ಕ ಸಾಮಗ್ರಿಗಳಿಗೆಲ್ಲಾ ಮಾರಾಟದ ವ್ಯವಸ್ಥೆ ಮಾಡಬೇಕು. ಉತ್ಪತ್ತಿಗೂ ಮಾರಾಟಕ್ಕೂ ಬೇರೆ ಬೇರೆ ಸಂಸ್ಥೆಗಳಿರಬೇಕು. ಕಡಿಮೆ ಖರ್ಚಿನಲ್ಲಿ ಉತ್ಪತ್ತಿಮಾಡಿ ಪರದೇಶದ ಸರಕಿನೊಡನೆ competition ಗೆ ನಿಲ್ಲಲು ಯೋಗ್ಯತೆ ಸಂಪಾದಿಸಬೇಕು. 3-4 ಕೋಟಿ ರೂಪಾಯಿಗಳಷ್ಟು ಭದ್ರಾವತಿ ಕಾರ್ಖಾನೆಯಲ್ಲಿ ಖರ್ಚು ಇದೆ. ದೊಡ್ಡ ಕೈಗಾರಿಕೆಗೆ ರೂಪಾಯಿಗೆ ಒಂದಾಣೆಗಿಂತ ಮೇಲ್ಪಟ್ಟ ಆಡಳಿತ ವೆಚ್ಚ ಇರಬಾರದು. ವಾಸ್ತವವಾಗಿ ಯಾವ ಕೈಗಾರಿಕೋದ್ಯಮದಲ್ಲಿಯೇ ಆಗಲಿ ಶೇಕಡ $6\frac{1}{4}$ ಗಿಂತಲೂ ಹೆಚ್ಚಾಗಿ ಆಡಳಿತ ವೆಚ್ಚ ಇರಬಾರದು. ಗ್ರಾಮ ಕೈಗಾರಿಕೆಗಳಲ್ಲಾದರೆ ಈ ಬಗ್ಗೆ ವೆಚ್ಚ ಶೇಕಡ $12\frac{1}{2}$ ವರೆಗೂ ಹೋಗಬಹುದು. ಏಕೆಂದರೆ, ಈ ಕೈಗಾರಿಕೆಗಳಲ್ಲಿ ಸಿಬ್ಬಂದಿ ವೆಚ್ಚವೇ ಜಾಸ್ತಿಯಾಗುತ್ತದೆ. ಸರಿಯಾದ ರೀತಿಯಲ್ಲಿ ನಮ್ಮ ಸರ್ಕಾರದ ಕೈಗಾರಿಕೆಗಳನ್ನು ನಡೆಸುವುದಾದರೆ ವರ್ಷಕ್ಕೆ ಒಂದು ಕೋಟಿ ರೂಪಾಯಿಗಳ ಲಾಭ ಸಂಪಾದನೆ ಮಾಡಬಹುದು.

2-30 P.M.

ಈ ಆಡಳಿತದ ಖರ್ಚುಮಾಡುವಾಗ ಸಾಮಾನುಗಳು ಮಾರಾಟಕ್ಕೆ ತಕ್ಕಂತೆ ಉತ್ಪನ್ನವಾಗುತ್ತದೆಯೋ ಇಲ್ಲವೇ ಎಂಬುದನ್ನು ನಾವು ನೋಡಬೇಕಾಗುತ್ತದೆ. ನಾನು ಮೊದಲು ಹೇಳಿದಂತೆ ಖಾಸಗಿಯಾಗಿ ಒಬ್ಬ ಮನುಷ್ಯ ಕೈಗಾರಿಕೆ ನಡೆಸುವಾಗ ಆತನ ಆಡಳಿತದ ಖರ್ಚೇನು, ಯಾವ ರೀತಿ ಎಲ್ಲೆಲ್ಲಿ ಅವನು ತನ್ನ ಸಾಮಾನುಗಳನ್ನು ಮಾರಾಟಮಾಡುತ್ತಾನೆ ಎನ್ನುವುದಕ್ಕೂ ನಮ್ಮ ಕೈಗಾರಿಕಾ ಸಂಸ್ಥೆಗಳಿಗೂ ಹೋಲಿಸಿ ನೋಡಿದರೆ ವಾಸ್ತವವಾಗಿಯೂ ನಮ್ಮ ಕೈಗಾರಿಕಾ ಸಂಸ್ಥೆಗಳು ಬಹಳ ಹಿಂದೆ ಬಿದ್ದಿವೆ ಎಂದು ಕಂಡುಬರುತ್ತದೆ. ಕೇಂದ್ರ ಸರ್ಕಾರದವರು Railway Budget ಪ್ರತ್ಯೇಕವಾಗಿ ಇಡುವಂತೆ ನಮ್ಮ ಕೈಗಾರಿಕೆಗಳಿಗೆ ಪ್ರತ್ಯೇಕ ಬಡ್ಜೆಟ್ ಮಾಡಿಸುವುದು ಉತ್ತಮ. ಅದೇ ರೀತಿ ನೀವೂ ಸಹ ಇಂಡಸ್ಟ್ರಿಯಲ್ ಬಡ್ಜೆಟ್ ಎಂದು ಒಂದು ಪ್ರತ್ಯೇಕವಾಗಿ ತಯಾರು ಮಾಡಿದರೆ ಅದರಿಂದ ಪ್ರತಿಯೊಂದು ಅಂಶವೂ ಗೊತ್ತಾಗುತ್ತದೆ. ಇವೊತ್ತು 20 ಕೋಟಿ ರೂಪಾಯಿಗಳ ಆದಾಯ ವೆಚ್ಚವನ್ನು ಜನತೆಯ ಮುಂದೆ ಇಡುತ್ತಾ ಇದ್ದೇವೆ. ಮೊದಲು 13 ಕೋಟಿ ರೂಪಾಯಿಗಳಿದ್ದದು ಈಗ 20 ಕೋಟಿ ರೂಪಾಯಿಗಳಿಗೆ ಏರಿದೆ. ಕಾರಣ, ಕೈಗಾರಿಕೆಗಳ ಆದಾಯ ವೆಚ್ಚ ಸೇರಿಸಿದ್ದರಿಂದ ಆದಾಯ 20 ಕೋಟಿಗೆ ಏರಿದೆ. ಹೀಗಿರುವಾಗ ಇದರ ಖರ್ಚು ವೆಚ್ಚ ಯಾವ ರೀತಿ ಆಗುತ್ತಾ ಇದೆ ಎಂಬುದು ಜನತೆಗೆ ಅರ್ಥವಾಗುತ್ತಾ ಇಲ್ಲ. ಆದ್ದರಿಂದ ಇಂಡಸ್ಟ್ರಿಯಲ್ ಬಡ್ಜೆಟ್‌ನ್ನು ಜನರಲ್ ಬಡ್ಜೆಟಿನಿಂದ ಪ್ರತ್ಯೇಕಿಸಿ ಪ್ರತಿಯೊಂದು ಕೈಗಾರಿಕಾ ಸಂಸ್ಥೆಗಳವರ ಆದಾಯ ಮತ್ತು ವೆಚ್ಚವನ್ನು ತೋರಿಸತಕ್ಕ ಬ್ಯಾಲೆನ್ಸ್ ಷೀಟನ್ನು ಕೊಡಬೇಕು. ಮತ್ತು ಮಾನ್ಯ ಸದಸ್ಯರೆಲ್ಲರಿಗೂ ಪ್ರತಿಯೊಂದು ಕೈಗಾರಿಕಾ ಸಂಸ್ಥೆಯಲ್ಲೂ ಏನೇನು ಕೆಲಸ ನಡೆಯುತ್ತಾ ಇದೆ ಯಾವಯಾವ ರೀತಿ ಮೆಟೀರಿಯಲ್ಸ್ ಕೊಂಡುಕೊಂಡಿದ್ದಾರೆ, ಅವರ ಬ್ಯಾಲೆನ್ಸ್‌ಷೀಟು ಏನು ಎಂಬುದನ್ನು ನೋಡುವುದಕ್ಕೆ ಅವಕಾಶವಿರಬೇಕು.

Rural Industrialisation Scheme ಎಂದು ಹೇಳಿದ್ದೀರಿ. ಇದನ್ನು ಪ್ರಚಾರ ಮಾಡಬೇಕೆಂಬುದನ್ನು ಒಪ್ಪುತ್ತೇನೆ. ಇದನ್ನು ಮಾಡುವಾಗ ಯಾವ ಹಳ್ಳಿಯಲ್ಲಿ, ಯಾವ ತಾಲ್ಲೂಕಿನಲ್ಲಿ ಎಂತೆಂಥಾ ಸಾಮಾನು ಸಿಕ್ಕುತ್ತವೆಯೋ ಅವಕ್ಕೆ ಅನುಗುಣವಾಗಿ ಅದನ್ನು ಹೊಂದಿಸಿಕೊಂಡು ಹೋಗಬೇಕು. ಮತ್ತು ಎಲ್ಲಿ ಗಾಣ ಇದೆ, ಅಲ್ಲಿಗೆ ಮಿಲ್ ಎಣ್ಣೆ ಬರಲು ಅವಕಾಶ ಕೊಡಬಾರದು. ಎಲ್ಲಿ ಕೊಟ್ಟಣ ಇದೆ ಅಲ್ಲಿ ಮಿಷನ್ ಅಕ್ಕಿ ಮಾರಾಟಮಾಡಬಾರದು. ಗ್ರಾಮ ಕೈಗಾರಿಕೆಗಳಿಗೆ ರಕ್ಷಣೆ ಇರಬೇಕು. ವಾಸ್ತವವಾಗಿಯೂ ಸ್ವಾವಲಂಬಿಗಳಾಗಿ ಆಯಾ ಪ್ರದೇಶದ ಜನರು ಯಾವ ಯಾವ ವಸ್ತುಗಳನ್ನು ತಯಾರುಮಾಡುತ್ತಾರೋ ಆಯಾ ವಸ್ತುಗಳನ್ನು ಅಲ್ಲಿರತಕ್ಕ ಜನರೇ ಉಪಯೋಗಿಸಬೇಕು, ಅನಂತರ ಪಕ್ಕದ ಹಳ್ಳಿಗೆ ಹೋಗಬೇಕು, ಅಲ್ಲಿ ಮಾರಾಟವಾಗಿ ಹೆಚ್ಚಾದದ್ದು ತಾಲ್ಲೂಕಿಗೆ ಹೋಗಬೇಕು, ತಾಲ್ಲೂಕಿನಲ್ಲಿ ಹೆಚ್ಚಾದದ್ದು ಡಿಸ್ಟ್ರಿಕ್ಟಿನಲ್ಲಿ ಮಾರಾಟವಾಗಬೇಕು. ಆ ಡಿಸ್ಟ್ರಿಕ್ಟಿಗೆ ಹೋಗಬೇಕು. ಅಲ್ಲೂ ಹೆಚ್ಚಾದರೆ ಆ ಪ್ರಾಂತ್ಯದಿಂದ ಹೊರಕ್ಕೆ ಕಳುಹಿಸುವ ಏರ್ಪಾಡು ಮಾಡಬೇಕು. ಮತ್ತು ಆಯಾ ಸ್ಥಳಗಳಲ್ಲಿ ತಯಾರಾಗುವ ಪದಾರ್ಥಗಳಿಗೆ ಪೈಪೋಟಿ ನಡೆಸುವಂಥ ಹೊರಗಿನ ಸಾಮಾನುಗಳು ಬರುವುದನ್ನು ನಿಲ್ಲಿಸಬೇಕು. ನಾನು ಮೊದಲೇ ಹೇಳಿದಂತೆ, ಗಾಣ ಹಾಕಿದರೆ ಮಿಲ್ಲಿನ ಎಣ್ಣೆ ಮಾರಾಟ ಮಾಡುವುದಕ್ಕೆ ಅವಕಾಶ ಕೊಡಬಾರದು. ಕುಟ್ಟಿದ ಅಕ್ಕಿ ಉಪಯೋಗಿಸುವ ಕಡೆ ಮಿಷನ್ ಅಕ್ಕಿ ಮಾರಾಟ

ಮಾಡುವುದಕ್ಕೆ ಅವಕಾಶ ಇದ್ದು ಪೈಪೋಟಿ ಬರಬಾರದು. ಯಾವ ಗ್ರಾಮದಲ್ಲಿ ಯಾವ ಕೈಗಾರಿಕೆ ಇದೆಯೋ ಅದಕ್ಕೆ ರಕ್ಷಣೆಕೊಟ್ಟು ಮುಂದುವರಿಯುವಂತೆ ಮಾಡಿದರೆ ಇಂಡಸ್ಟ್ರಿಯಲೈಸೇಷನ್ ಸ್ಕೀಂ ಮುಂದುವರಿಸುವುದಕ್ಕೆ ಸಾಧ್ಯವಾಗುತ್ತದೆಯೇ ವಿನಾ ಇಲ್ಲದೇ ಇದ್ದರೆ ಇದು ಒಂದು ಹೊರೆ ಆಗುತ್ತದೆ. ಆದ್ದರಿಂದ ಗ್ರಾಮಕೈಗಾರಿಕೆಗಳಿಗೆ ಸರ್ಕಾರದವರು ರಕ್ಷಣೆ ಕೊಡಬೇಕಾದದ್ದು ಅತ್ಯಾವಶ್ಯಕ. 1955ನೇ ಇಸವಿಯನಂತರ ಹೊರ ದೇಶದಿಂದ ಸೈಕಲ್ ಸಾಮಾನುಗಳನ್ನು ತರಿಸುವುದಿಲ್ಲವೆಂದು ಕೇಂದ್ರ ಸರ್ಕಾರ ನಿರ್ಧರಿಸಿದೆ. ಈಗ ತಯಾರಾಗುತ್ತಿರುವ ಸೈಕಲ್‌ಗಳು ಸಾಕಾಗುತ್ತಿಲ್ಲ. ಮೈಸೂರು ಸಂಸ್ಥಾನದಲ್ಲಿ ಸೈಕಲ್ ಇಂಡಸ್ಟ್ರಿ ಸ್ಥಾಪನೆಮಾಡಿದರೆ ಒಳ್ಳೆಯ ಲಾಭ ಬರುತ್ತದೆ. ಇಡೀ ಹಿಂದೂಸ್ಥಾನದ ಜನತೆಗೆ ಬೇಕಾಗುವ ಸೈಕಲ್‌ಗಳನ್ನು ಒದಗಿಸುವುದಕ್ಕೆ ಏರ್ಪಾಡು ಆಗಬೇಕು. ಸೈಕಲ್ ತಯಾರಿಕೆಗೆ ಬೇಕಾಗುವ ಅನುಕೂಲತೆಗಳು ನಮ್ಮಲ್ಲಿವೆ. ಆದ್ದರಿಂದ ನಮ್ಮ ದೇಶದಲ್ಲಿರತಕ್ಕ ಕೈಗಾರಿಕೆಗಳನ್ನು ಉತ್ತಮ ಪಡಿಸಿ, ಇರತಕ್ಕ ಲೋಪದೋಷಗಳನ್ನು ನಿವಾರಣೆಮಾಡಲು ನಿಪುಣರನ್ನೊಳಗೊಂಡ ಒಂದು ಸಮಿತಿಯನ್ನು ರಚನೆ ಮಾಡಿ, ನಿರ್ದಿಷ್ಟವಾದ ಯೋಜನೆಯನ್ನು ಹಾಕಿಕೊಂಡು ಕೆಲಸಮಾಡಿದರೆ ಬಹಳ ಅನುಕೂಲವಾಗುತ್ತದೆ ಎಂದು ಹೇಳಿ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ರಾಚಯ್ಯ (ಎಳಂದೂರು—ಅನುಸೂಚಿತ ಜಾತಿಗಳು).—ಸ್ವಾಮಿ, ಈ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನ ವಿಚಾರವಾಗಿ ಮಾತನಾಡುವಾಗ ಒಂದು ಮುಖ್ಯವಾದ ಅಂಶವನ್ನು ತಿಳಿಸಬೇಕಾಗಿದೆ. ಈ ಇಂಡಸ್ಟ್ರೀಸ್ ಸ್ಥಾಪನೆ ಮಾಡತಕ್ಕದ್ದು ಯಾವ ಉದ್ದೇಶದಿಂದ ಎಂಬುದನ್ನು ನಾವು ಆಲೋಚನೆ ಮಾಡಬೇಕಾಗಿದೆ. ಇದರಲ್ಲಿ ಮುಖ್ಯವಾದದ್ದು ಮೊದಲನೆಯದು ದೇಶದ ಸಂಪತ್ತನ್ನು ಹೆಚ್ಚು ಮಾಡತಕ್ಕದ್ದು, ಎರಡನೆಯದು ದೇಶದಲ್ಲಿ ಜನಗಳಿಗೆ ಉದ್ಯೋಗವನ್ನು ಒದಗಿಸುವುದು. ಈ ಎರಡು ಮೂಲ ಉದ್ದೇಶಗಳನ್ನಿಟ್ಟುಕೊಂಡು ಈ ಇಂಡಸ್ಟ್ರೀಸನ್ನು ಸ್ಥಾಪನೆ ಮಾಡುತ್ತೇವೆ. ಈಗ ನಮ್ಮ ದೇಶದಲ್ಲಿ ಪ್ಲಾನಿಂಗ್ ಕಮಿಷನ್ನಿನವರು ಈ ಎರಡು ಉದ್ದೇಶಗಳನ್ನಿಟ್ಟುಕೊಂಡು ಅವರ ಪ್ಲಾನು ತಯಾರು ಮಾಡಿದ್ದಾರೆ. ಅದರಲ್ಲಿ ಇರತಕ್ಕ ಮುಖ್ಯವಾದ ಅಂಶ ಯಾವುದು ಎಂದರೆ ಜನಗಳಿಗೆ ಉದ್ಯೋಗವನ್ನು ಕಲ್ಪಿಸುವುದು. ಉದ್ಯೋಗವನ್ನು ಕಲ್ಪಿಸತಕ್ಕ ವಿಷಯದಲ್ಲಿ ಹೆಚ್ಚು ಗಮನ ಕೊಡಬೇಕು. ಯಾವಯಾವ ಉದ್ಯೋಗವನ್ನು ಯಾವಯಾವ ಜನಗಳಿಗೆ ಯಾವಯಾವ ರೀತಿ ಏರ್ಪಡಿಸಬೇಕೆಂಬ ವಿಷಯವನ್ನು ಆಯಾ ಸಂಸ್ಥಾನಗಳ ಸರ್ಕಾರದವರೇ ಆಲೋಚನೆ ಮಾಡಬೇಕೆಂಬುದಾಗಿ ಸೂಚನೆ ಕೊಟ್ಟಿದ್ದಾರೆ. ತಮಗೆಲ್ಲರಿಗೂ ತಿಳಿದಿರುವಂತೆ ನಿರುದ್ಯೋಗ ಸಮಸ್ಯೆ ಬಹಳ ತೊಡಕಾದ ಸಮಸ್ಯೆ. ಇದು ಬಹಳ ಕಠಿಣವಾದ ಸ್ಥಿತಿಯನ್ನು ತಾಳುತ್ತಾ ಇದೆ. ನಮಗೆ ಸರ್ಕಾರದವರು ಒದಗಿಸಿದ ಒಂದು ಉತ್ತರದಲ್ಲಿ ಹೋದ ವರ್ಷಕ್ಕಿಂತ ಈ ವರ್ಷ ನಿರುದ್ಯೋಗಿಗಳ ಸಂಖ್ಯೆ ಜಾಸ್ತಿಯಾಗಿದೆ. ಸುಮಾರು 10 ಸಾವಿರದಷ್ಟು ಜನರು ಸರ್ಕಾರಿ ನೌಕರಿಗಳಿಗೆ ಅರ್ಜಿ ಹಾಕಿಕೊಂಡಿದ್ದಾರೆ ಎಂದು ತಿಳಿಸಿದರು. ಇದರಿಂದ ಈ ನಿರುದ್ಯೋಗ ಇರತಕ್ಕದ್ದು ಎಷ್ಟು ಪ್ರಮಾಣದಲ್ಲಿ ಏರುತ್ತಾ ಇದೆ ಎಂಬುದನ್ನು ನಾವು ಆಲೋಚನೆ ಮಾಡಬಹುದು. ಈಗ ಸರ್ಕಾರದವರು ಆಹಾರ ಇಲಾಖೆಯಲ್ಲಿ ರೇಷನಿಂಗ್ ವಜಾ ಮಾಡಿದ್ದರಿಂದ ಅನೇಕರನ್ನು ಮನೆಗೆ ಕಳುಹಿಸಬೇಕಾದ ಪ್ರಸಂಗ ಬಂದಿದೆ. ಈಗಾಗಲೇ ಅನೇಕರನ್ನು ಮನೆಗೆ ಕಳುಹಿಸಿದ್ದಾರೆ. ಇಂಥ ವಿಷಯದಲ್ಲಿ ನಾವು ಯಾವ ರೀತಿಯಾಗಿ ಅವರಿಗೆ ಉದ್ಯೋಗವನ್ನು ಕಲ್ಪಿಸಬಹುದೆಂಬುದನ್ನು ಯೋಚನೆ ಮಾಡಬೇಕಾಗಿದೆ. ನಾವು ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಅನೇಕ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಸ್ಥಾಪನೆಮಾಡಿದ್ದೇವೆ. ಆದರೆ ಈಗ ನಾವು ಮಧ್ಯಮ ತರಗತಿಯವರಿಗೆ, ಅವರವರ ವೃತ್ತಿಗೆ ತಕ್ಕಂತೆ, ಅವರವರ ಅರ್ಹತೆಗೆ ತಕ್ಕಂತೆ, ಅವರವರ ಯೋಗ್ಯತೆಗೆ ತಕ್ಕಂತೆ ಹೊಸ ಹೊಸ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕಾಗಿದೆ. ಆ ರೀತಿ ಮನೆಗಳಲ್ಲಿದ್ದುಕೊಂಡು ಯಾವ ಕೈಗಾರಿಕೆಗಳನ್ನು ಮಾಡಬಹುದು ಎಂಬುದನ್ನು ನಾವು ಚೆನ್ನಾಗಿ ಆಲೋಚನೆ ಮಾಡಬೇಕು. ಇವತ್ತಿನ ದಿವಸ ನಾವು ಮಾಡತಕ್ಕ 5 ನಿಮಿಷದ ಭಾಷಣದಲ್ಲಿ ಹೇಗೆ ಆ ಕೆಲಸಗಳನ್ನೆಲ್ಲಾ ಮಾಡಬಹುದು ಎಂಬುದನ್ನು ಹೇಳಬೇಕಾದರೆ ಸಾಧ್ಯವಾಗುವುದಿಲ್ಲ. ಇದು ಅತ್ಯಧಿಕವಾದ ಸಮಸ್ಯೆ ಇದನ್ನು ಸರ್ಕಾರದವರೇ ಆಲೋಚನೆ ಮಾಡಬೇಕು. ಮಧ್ಯಮ ತರಗತಿಯವರ ಸ್ಥಿತಿ ದಿನ ದಿನಕ್ಕೆ ಶೋಚನೀಯ ಸ್ಥಿತಿಗೆ ಬರುತ್ತಾ ಇದೆ. ಅವರ ಮಟ್ಟ ಕೆಳಕ್ಕೆ ಹೋಗುತ್ತಾ ಇದೆ. ಇದನ್ನು ಯಾವ ರೀತಿ ತಪ್ಪಿಸಬೇಕು, ಯಾವ ಯಾವ ಹೊಸ ಉದ್ಯೋಗಗಳನ್ನು ಒದಗಿಸಬೇಕು, ಹೊಸ ಉದ್ಯೋಗಗಳನ್ನು ಅವಲಂಬಿಸಬೇಕಾದರೆ ಅವರಿಗೆ ಯಾವ ಸೌಕರ್ಯಗಳನ್ನು ಒದಗಿಸಬೇಕು ಎಂಬುದನ್ನೆಲ್ಲಾ ಆಲೋಚನೆ ಮಾಡಬೇಕು. ಪ್ಲಾನಿಂಗ್ ಕಮಿಷನ್‌ನವರ ಪುಸ್ತಕ ನನ್ನ ಹತ್ತಿರ ಇಲ್ಲ. ಅದರಲ್ಲಿ ಇದನ್ನೆಲ್ಲಾ ಸೂಚನೆಮಾಡಿದ್ದಾರೆ. ನಿರುದ್ಯೋಗಿಗಳ ಒಂದು ತಃಖ್ತೆ ತಯಾರುಮಾಡಿ ಯಾರುಯಾರಿಗೆ ಯಾವಯಾವ ಉದ್ಯೋಗ ಕಲ್ಪಿಸಬಹುದು, ಎಷ್ಟೆಷ್ಟು ಸಹಾಯ ಮಾಡಬಹುದು ಎಂಬುದನ್ನು ಸರಿಯಾಗಿ ಒಂದು ಶಾಸ್ತ್ರೀಯವಾದ ರೀತಿಯಲ್ಲಿ ಆಲೋಚನೆ ಮಾಡಬೇಕು. ಇದಕ್ಕೆ ಒಂದು ಸಮಿತಿಯನ್ನು ರಚನೆಮಾಡಬೇಕೆಂದು ಹೇಳಿದ್ದಾರೆ. ಈ ರೀತಿ ಮಾಡಬೇಕಾದ ಅಗತ್ಯವಿದೆ ಎಂಬುದಕ್ಕೆ ಕಾರಣ ಹೇಳುತ್ತೇನೆ. ಈಗ ವಿದ್ಯಾವಂತ ನಿರುದ್ಯೋಗಿಗಳ ಸಮಸ್ಯೆಯನ್ನು ಪರಿಹಾರ ಮಾಡಬೇಕಾದರೆ ಆ ರೀತಿ ಎಷ್ಟು ಜನ ಇದ್ದಾರೆ ಎಂಬ ತಃಖ್ತೆ ತಯಾರು ಮಾಡಿ ಉದ್ಯೋಗಗಳನ್ನು ಕಲ್ಪಿಸಿಕೊಳ್ಳಲು ಅವರಿಗೆ ಧನ ಸಹಾಯ ಮಾಡಬೇಕು. ಅವರಿಗೆ ಎಷ್ಟು ಹಣ ಬೇಕಾಗುತ್ತದೆಯೋ ಅಷ್ಟು ಹಣವನ್ನು ಸಾಲದ ರೂಪವಾಗಿ ಕೊಟ್ಟು ಅದನ್ನು ಸುಲಭವಾದ ಕಂತುಗಳಲ್ಲಿ ವಸೂಲುಮಾಡಿಕೊಳ್ಳಬಹುದು. ಈ ಕೆಲಸ ಬಹಳ ತುರ್ತಾಗಿ ಆಗಬೇಕೆಂಬುದಾಗಿ ಅನೇಕರು ಹೇಳಿದ್ದಾರೆ. ಈ ವಿಷಯಕ್ಕೆ ಸರ್ಕಾರದವರು ಗಮನಕೊಡಬೇಕು. ಬೆಂಗಳೂರು ನಗರದಲ್ಲಿ ನಿರುದ್ಯೋಗ ಸಮಸ್ಯೆ ಎಂಬುದು ಬಹಳವಾಗಿ ವಿಷಮಿಸುತ್ತಾ ಇದೆ. ಈಗಾಗಲೇ ಒಂದು ದಿವಸಕ್ಕೆ ಏನಿಲ್ಲಾ ಎಂದರೂ ಹತ್ತು ಇಪ್ಪತ್ತು ಜನ ಹೆಚ್ಚಾಗುತ್ತಾ ಇದ್ದಾರೆ. ಇದನ್ನು ಲೆಕ್ಕಾಚಾರ ಮಾಡಿದರೆ ವರ್ಷಕ್ಕೆ ಎಷ್ಟಾಗುತ್ತದೆ ಎಂಬುದನ್ನು ಗಮನಿಸಬೇಕು. ಆದ್ದರಿಂದ ನಿರುದ್ಯೋಗಕ್ಕೂ ಕೈಗಾರಿಕೆಗಳ ಬೆಳವಣಿಗೆಗೂ ಎಷ್ಟು ನಿಕಟ ಸಂಬಂಧವಿದೆ ಎಂಬುದನ್ನು ಸರ್ಕಾರದವರು ಚೆನ್ನಾಗಿ ಆಲೋಚನೆ ಮಾಡಬೇಕು. ಅದಕ್ಕೆ ಈ ಸಭೆಯಲ್ಲಿರತಕ್ಕ ಅನೇಕ ಮಾನ್ಯ ಸದಸ್ಯರು ಮತ್ತು ಅನುಭವಶಾಲಿಗಳಾಗಿರತಕ್ಕವರನ್ನೊಳಗೊಂಡ ಒಂದು ಸಮಿತಿಯನ್ನು ರಚನೆಮಾಡಿ ತುರ್ತಾಗಿ ಗಮನ ಕೊಡಬೇಕೆಂಬುದಾಗಿ ಪ್ರಾರ್ಥಿಸುತ್ತೇನೆ.

(ಶ್ರೀ ಬಿ. ರಾಚಯ್ಯ.)

ಸ್ವಾಮಿ, ಸರ್ಕಾರದಿಂದ ನೇರವಾಗಿ ನಡೆಸತಕ್ಕಂಥ ಇಂಡಸ್ಟ್ರಿಯಲ್ ಕನ್ಸರ್ನ್‌ಗಳು—ಎಂದರೆ Government-aided Industrial concerns ಗಳು—ಸರ್ಕಾರದವರು ಹೆಚ್ಚಿನ ನಿಗ ತೆಗೆದುಕೊಳ್ಳದೆ ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ. ಸರ್ಕಾರದವರು ಹಾಕಿರುವ ಬಂಡವಾಳದ ಮೇಲೆ ಹೆಚ್ಚಿನ ಉತ್ಪತ್ತಿ ಬರುವ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ನಡೆಸುತ್ತಾ ಇಲ್ಲ ಎಂದು ಹೇಳುವುದಕ್ಕೋಸ್ಕರ ಈಗ ಸಭೆಯ ಮುಂದೆ ನಿಂತಿದ್ದೇನೆ. ಸರ್ಕಾರ ಯಾವ ಯಾವ ಇಂಡಸ್ಟ್ರಿಯಲ್ ಕನ್ಸರ್ನ್ ಮೇಲೆ ಹೆಚ್ಚಿನ ಹಣವನ್ನು ಹಾಕಿದೆಯೋ ಅಂಥ ಕಂಪೆನಿಗಳಲ್ಲಿ ಸರ್ಕಾರದ ಒಬ್ಬರು ಸರ್ಟಿಫೈಡ್ ಆಡಿಟರು ಮತ್ತು ಸರ್ಕಾರದ ಮೇಲ್ವಿಚಾರಕರು ಅಲ್ಲಿದ್ದು ಸರ್ಕಾರದ ಹಣ ಹೆಚ್ಚಿನ ರೀತಿಯಲ್ಲಿ ದುರುಪಯೋಗವಾಗದೇ ಇರುವಂತೆ ನೋಡಿಕೊಳ್ಳಬೇಕಾದದ್ದು ಸರ್ಕಾರದವರ ಕರ್ತವ್ಯವಾಗಿದೆ ಎಂದು ಹೇಳುತ್ತೇನೆ. ಸರ್ಕಾರದವರು 27 ಗವರ್ನ್‌ಮೆಂಟ್ ಏಡೆಡ್ ಇಂಡಸ್ಟ್ರಿಗಳಲ್ಲಿ ಇದುವರೆಗೂ 1,43,52,870 ರೂಪಾಯಿಗಳಷ್ಟು ಷೇರುಗಳನ್ನು ಹಾಕಿದ್ದಾರೆ ಎಂದು ಹೇಳಿ ಈ ವರ್ಷದ ಬಡ್ಜೆಟ್ ಮೆಮೋರ್ಯಾಂಡಂನಲ್ಲಿ ತಿಳಿಸಿದ್ದೀರಿ. ಇದರಲ್ಲಿ ಸರ್ಕಾರದ ಅಸಲು ಮತ್ತು ಅದರ ಮೇಲೆ ಎಷ್ಟು ವಸೂಲಾಗುತ್ತಾ ಇದೆ ಎಂಬ ವಿವರ, ಆಡಿಟ್ ರಿಪೋರ್ಟ್ಸ್, ಬ್ಯಾಲೆನ್ಸ್‌ಷೀಟು ಇವು ಯಾವುವನ್ನೂ ಈ ಸಭೆಯ ಸದಸ್ಯರಿಗೆ ಒದಗಿಸದೇ ಇರುವುದರಿಂದ ಸರ್ಕಾರದ ಹಣ ದುರುಪಯೋಗವಾಗಿದೆಯೋ ಅಥವಾ ಸರಿಯಾದ ರೀತಿಯಲ್ಲಿ ಉಪಯೋಗವಾಗುತ್ತಾ ಇದೆಯೋ ಎಂಬುದು ಅನುಮಾನಾಸ್ಪದವಾಗಿದೆ. ಇದಕ್ಕೆ ಉದಾಹರಣೆ ಹೇಳಬೇಕಾದರೆ ಸಕ್ಕರೆ ಕಂಪೆನಿಯ ಖಾಸಗಿ ಅಧ್ಯಕ್ಷರಾಗಿದ್ದ ಶ್ರೀಮಾನ್ ಬಂದೀಗೌಡರನ್ನು ನಿವೃತ್ತಿ ಮಾಡಿದ್ದೇವೆ ಎಂದು ಸರ್ಕಾರದವರು ಒಂದು ಪ್ರೆಸ್‌ನೋಟ್ ಕೊಟ್ಟು ತಿಳಿಸಿದ್ದಾರೆ. ಆದರೆ ನಾನು ಕೆಲವು ಪತ್ರಿಕೆಗಳಲ್ಲಿ ನೋಡಿದ ಹಾಗೆ ಅವರೇ ಈ ಸಕ್ಕರೆ ಕಂಪೆನಿಯ ಚೇರ್ಮನ್‌ಷಿಪ್‌ಗೆ ರಾಜೀನಾಮೆ ಕೊಟ್ಟಿದ್ದಾರೆ ಎಂದು ಹೇಳಿ ಬಂದಿರುವುದನ್ನು ನೋಡಿದ್ದೇನೆ. ಸರ್ಕಾರ ಈ ವಿಷಯದಲ್ಲಿ ಯಾವ ಒಂದು ನಿಲವು ತೆಗೆದುಕೊಂಡಿದೆ ಎಂಬುದು ನಮಗೆಲ್ಲರಿಗೂ ಅರ್ಥವಾಗದ ರೀತಿಯಲ್ಲಿದೆ. ಸರ್ಕಾರದವರು ಶ್ರೀಮಾನ್ ಬಂದೀಗೌಡರ ಮೇಲೆ ವೈಯಕ್ತಿಕವಾದ ಅಭಿಪ್ರಾಯವನ್ನೇನು ಇಟ್ಟುಕೊಂಡು ಅವರನ್ನು ನಿವೃತ್ತಿಮಾಡಿದರು ?

Mr. CHAIRMAN (Sri R. K. PRASAD).—Mr. Rachaiah, I do not think the Sugar Company is a Government Industrial concern and you cannot discuss on it.

Sri B. RACHAIAH.—Government have taken a number of shares.

Mr. CHAIRMAN.—It is a Joint-Stock Company; it is not a Government concern.

Sri P. R. RAMAIYA (Basavangudi).—On a point of order, Sir. Government has invested capital in the Sugar Company and it has a Chairman. Therefore, it is within the purview of this House to discuss about the Company.

Mr. CHAIRMAN.—I request the Hon'ble Minister to enlighten me about this.

Sri H. SIDDAVEERAPPA.—Sir, it is a Joint-Stock Company no doubt. Government have 51 per cent of the shares in that and have a direct hand in the management of that concern through their Directors. Government has majority of the Directors.

Mr. CHAIRMAN.—Yes; the Hon'ble Member Sri B. Rachaiah can go on.

ಶ್ರೀ ಬಿ. ರಾಚಯ್ಯ.—ಈ ರೀತಿಯಾಗಿ ಸರ್ಕಾರದವರು ಹಣವನ್ನು ಯಾವ ಯಾವ ಕೈಗಾರಿಕಾ ಸಂಸ್ಥೆಗಳ ಮೇಲೆ ಹಾಕಿದ್ದಾರೋ ಆ ಸಂಸ್ಥೆಗಳ ಲೆಕ್ಕಪತ್ರಗಳನ್ನು ಆಡಿಟ್ ಮಾಡಿಸಿದ್ದಾರೆಯೋ, ಅವುಗಳಿಂದ ಲಾಭ ಬಂದಿದೆಯೋ ಅಥವಾ ನಷ್ಟವಾಗಿದೆಯೋ ಎಂಬುದನ್ನು ಸಹ ಈ ಸಭೆಯ ಗಮನಕ್ಕೆ ತರಲಿಲ್ಲ. ಆದಕಾರಣ ನಾನು ಈ ಒಂದು ಉದಾಹರಣೆಯನ್ನು ಹೇಳಬೇಕಾಯಿತು. ಈ ವಿಚಾರದಲ್ಲಿ ಮಾನ್ಯ ಸಚಿವರನ್ನು ಕೇಳುವುದಿಷ್ಟೆ. ಈ ವಿಷಯದಲ್ಲಿ ಸರ್ಕಾರವೇನು ಕಾರ್ಯಕ್ರಮ ಕೈಗೊಂಡಿದೆಯೆಂಬುದಕ್ಕೆ ಒಂದು ಸ್ಟೇಟ್‌ಮೆಂಟ್ ಕೊಡಬೇಕು. ಈ ರೀತಿಯಾಗಿ ಸರ್ಕಾರದ ಹಣದ ಪೈಕಿ 6 ಕೋಟಿ ರೂಪಾಯಿಗಳನ್ನು ಸಾಲದ ರೂಪದಲ್ಲಿ ಅನೇಕ ಕೈಗಾರಿಕೆಗಳಿಗೆ ಕೊಟ್ಟಿದ್ದಾರೆ. ಅದನ್ನು ಸರಿಯಾದ ರೀತಿಯಲ್ಲಿ ವಸೂಲು ಮಾಡಿದ್ದರೆ, ಸರಿಯಾದ ರೀತಿಯಲ್ಲಿ ಆ ಹಣವನ್ನು ಉಪಯೋಗಿಸಿದ್ದರೆ ಈ ವರ್ಷ ಹೊಸ ತೆರಿಗೆಯನ್ನು ಹಾಕಬೇಕಾದ ಅಗತ್ಯವೇ ಇರಲಿಲ್ಲ. ಈ ರೀತಿಯಾಗಿ ಸರ್ಕಾರ ಒಂದು ಕಂಪೆನಿಯ ಷೇರನ್ನು ತೆಗೆದುಕೊಳ್ಳುವಾಗ ಅಥವಾ ಹೊಸ ಕೈಗಾರಿಕೆ ಸ್ಥಾಪನೆ ಮಾಡುವಾಗ ಅದರಿಂದ ಹೆಚ್ಚಾಗಿ ಲಾಭ ಬರುತ್ತದೆಯೆ ಅಥವಾ ಇಲ್ಲವೆ ಎಂದು ವಿವೇಚನೆ ಮಾಡಿ ನೋಡದೆ ಕೈಹಾಕಿ ಸರ್ಕಾರದ ಹಣ ದುರುಪಯೋಗ ಮಾಡುತ್ತಿರುವುದು ಸಾರ್ವಜನಿಕರೆಲ್ಲರ ಮೇಲೂ ಹೊರೆಯಾಗಿದೆ. ಇದರ ಫಲಿತಾಂಶವು ಸಾರ್ವಜನಿಕರೆಲ್ಲರಿಗೂ ತೆರಿಗೆಯ ರೂಪದಲ್ಲಿ ಹೆಚ್ಚಿನ ಹೊರೆಯಾಗಿದೆ ಎಂದು ಕಾಣುತ್ತಿರುವುದರಿಂದ ಈ ಡಿಮ್ಯಾಂಡ್ ಮನವಿಯನ್ನು ವಿರೋಧಿಸುತ್ತೇನೆ.

Sri M. LINGANNA (Nanjangud).—Sir, I do not take much of the time of this House as I only confine my remarks with regard to two items, namely, cottage industry like the coir industry and the khadi industry. Sir, in the Budget Memorandum the Government have allotted only four lakhs of rupees towards cottage industries and in the details that have been given to us in Volume No. I at page 150 the Government have provided for Badanval Spinning Centre only Rs. 1,21,500.

Sir, these two small industries, more especially the khadi industry, to a certain extent reveal the policy of Government which they pursue with regard to

these industries. Khadi industry, I need not tell you, is one which is being fostered in the State of Mysore from nearly fifty years. It has acquired a national character in the sense that Mahatma Gandhi, when he became the Leader of our country, laid down more emphasis on this cottage industry because he thought and rightly thought that the economic condition of the rural mass would be raised through this cottage industry. Sir, it is a known fact that most of the agriculturists who engage themselves in cultivation for nearly six months in the year resort to spinning and out of this they eke out a little for their livelihood. Everyone of us knows, Sir, that the *per capita* of the national income being only Rs. 265, it is quite essential that the little income of the rural folk should be augmented by such industries like the Khadi and other cottage industries. Sir, there are several khadi centres in Kolar and Chitaldrug Districts. I confine my remarks only to the Badanval Centre. Sir, the state of affairs in Badanval Centre is not hopeful. I visited this Centre two months ago and found that stock is being accumulated and the properties that were acquired in the form of spinning wheels and other equipments are almost in a state of decay. The condition of the building is most deplorable. I saw about six to seven cracks on the eastern side and western side of the building. This is the state of affairs in the Badanval Centre. The Government, I believe, is very much interested in sponsoring and in the furtherance of this particular industry which not merely gives a little extra income to the rural folk but which has also been accepted as an emblem of the ruling party in the land. That apart, Sir, the most economic aspect of the industry is that it helps not merely the village folk but also women who take up this spinning work. During times of leisure this is the only industry from which they can earn a little more income. So, Sir, from these points of view Government should take more care and invest more money in these cottage industries. If this cottage industry had been looked after carefully by Government, I am sure they could have had more percentage of income and also provided sufficient work to the rural folk and thus helped them to raise their economic conditions.

With regard to coir industry, Government have thought it fit to run a coir industry at Nanjangud on an experimental basis. Sir, this industry which should have brought a lot of income to the coffers of the State is not yielding much at all. Why is it so? The Government must look into and set right the defects. I lay emphasis on this because, probably Government of India are going to give us a grant or loan towards the furtherance of this industry. Sir, Mysore State occupies the second or third place in growing cocoanut. From this point of view Government should take more care about this coir industry that is now run on an experimental basis so that it may be run on a profitable basis, giving large scope to labourers. Sir, the position of the coir industry at Nanjangud is like this. The coir industry is run in a building which is rented by Government and they are paying heavy rent. The monthly maintenance charges for this industry are very meagre. At every stage the person in charge of this centre is probably hampered because of the stringency of money that is put at his disposal. The gentleman who is put in charge of this concern is so enthusiastic and he is an expert in the line and a person who comes from Travancore, with a lot of experience in this industry. Therefore, Sir, I suggest that this particular state of affairs of our coir industry is to be looked into and set right immediately. In view of the fact that we are going to get a lot of loans from the Central Government to improve and expand the coir industry, I request the Government to pay particular attention to this industry and not only expand it at Nanjangud but also start many more such industries at Tumkur or at places where they grow more cocoanuts. Sir, if these two industries are developed properly, I believe, they not merely augment the income of the rural folk but at the

(SRI M. LINGANNA.)

same time they give an impetus to the other small cottage industries that are in the rural parts. So, from these two points of view I submit to Government and most earnestly urge that they should give special care, more care than they are bestowing at present and pursue a new path of being more generous and being more progressive in character with regard to these cottage industries.

ಶ್ರೀ ಟಿ. ಹನುಮಯ್ಯ (ಹಿರಿಯೂರು-ಅನುಸೂಚಿತ ಜಾತಿಗಳು).—ಸ್ವಾಮಿ, ಸಾಧಾರಣವಾಗಿ ಕೈಗಾರಿಕೋದ್ಯಮಗಳು ಮುಂದುವರಿಯಬೇಕಾದರೆ ಸಣ್ಣ ಸಣ್ಣ ಕೈಗಾರಿಕೆಗಳನ್ನು ಹೆಚ್ಚಾಗಿ ಸ್ಥಾಪನೆಮಾಡಬೇಕು. ಮುಖ್ಯವಾಗಿ ಪ್ರಜಾಪ್ರಭುತ್ವ ಸ್ಥಾಪನೆಯಾಗುವುದಕ್ಕೆ ಮುಂಚೆ ಖಾದಿ ಕೈಗಾರಿಕೆ ಎಷ್ಟಿತ್ತೋ ಈಗಅಷ್ಟಿಲ್ಲವೆಂದು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳಬೇಕಾಗಿದೆ. ಕಾರಣವೇನೆಂದರೆ ಪ್ರತಿವರ್ಷವೂ ಕೂಡ ಸುಮಾರು 10 ಲಕ್ಷ ರೂಪಾಯಿಗಳನ್ನಾದರೂ ಖಾದಿ ಕೈಗಾರಿಕೆಗೆ ಹಾಕಿ ಕೆಲಸ ಮಾಡದೆ ಹೋದುದು ಎಂದು ಹೇಳಬೇಕಾಗಿದೆ. ಏಕೆಂದರೆ ಹಳ್ಳಿ ಹಳ್ಳಿಗಳಲ್ಲೂ ನಿರುದ್ಯೋಗ ಸಮಸ್ಯೆ ಹೆಚ್ಚಾಗಿದೆ. ನಮ್ಮ ದೇಶದಲ್ಲಿ ವ್ಯವಸಾಯಗಾರರು ಬಹಳ ಹೆಚ್ಚಾಗಿದ್ದಾರೆ; ವರ್ಷದಲ್ಲಿ ಆರೇಳು ತಿಂಗಳು ವ್ಯಥಾ ಕಾಲಹರಣ ಮಾಡುತ್ತಾರೆ. ನನಗೆ ತಿಳಿದಹಾಗೆ ಚಿತ್ರದುರ್ಗ ಜಿಲ್ಲೆಯಲ್ಲಿ 1945ರಲ್ಲಿ ಕ್ಷಾಮ ಬಂದಾಗ ಲಕ್ಷಾಂತರ ರೈತರು ಖಾದಿ ಕೈಗಾರಿಕೆಯನ್ನವಲಂಬಿಸಿ ಖಾದಿ ತಯಾರಿಸಿ, ಹಳ್ಳಿಗಾಡಿನಲ್ಲಿರುವವರು ನೂಲುವುದರಲ್ಲಿ, ನೇಯುವುದರಲ್ಲಿ ತೊಡಗಿ ಜೀವನ ಜರುಗಿಸಿದ್ದಾರೆ. ಈಗ ಪ್ರತಿಯೊಂದು ವಿಷಯದಲ್ಲೂ ಕೂಡ ದೇಶಾಭಿಮಾನ ಇದೆಯೆಂದು ಕೊನೆಯಲ್ಲಿ ಹೇಳುತ್ತಾರೆ. ಈ ವಿಷಯದಲ್ಲಿ ಮಾನ್ಯ ಕೈಗಾರಿಕಾ ಮಂತ್ರಿಗಳಿಗೆ ಒಂದು ವಿಚಾರ ಹೇಳುವುದು ಅವಶ್ಯಕ. ಪಾಶ್ಚಾತ್ಯ ದೇಶಗಳಲ್ಲಿ ದೇಶಾಭಿಮಾನ ಹೆಚ್ಚಾಗಿರುವುದರಿಂದ ಅಲ್ಲಿನ ಪ್ರಜೆಗಳು ಹೇಗೆ ವರ್ತಿಸುತ್ತಿದ್ದಾರೆಂಬುದನ್ನು ನಾನು ಹೇಳಬೇಕಾದ ಅವಶ್ಯಕತೆಯಿಲ್ಲ. ಅಲ್ಲಿ ತಮ್ಮ ದೇಶದಲ್ಲಿ ಉತ್ಪತ್ತಿಯಾಗುವ ಸಾಮಾನು, ಬಟ್ಟೆಬರೆ ಮುಂತಾದುವನ್ನೇ ಜನರು ಉಪಯೋಗಿಸುವರೇ ಹೊರತು ಇತರ ದೇಶಗಳ ಮಾಲುಗಳನ್ನು ಕೊಳ್ಳಲು ಯಾರೂ ಹೋಗುವುದಿಲ್ಲ. ಅದೇ ನಮ್ಮ ದೇಶದಲ್ಲಾದರೋ ಸರ್ಕಾರಿ ನೌಕರರಲ್ಲಿ 1-2 ಸಾವಿರ ರೂಪಾಯಿಗಳ ಸಂಬಳ ಬರುವವರು ಕೂಡ ಪಾಶ್ಚಾತ್ಯ ದೇಶಗಳಲ್ಲಿ ತಯಾರಾಗುವ ಬಟ್ಟೆಗಳನ್ನು ಹಾಕುತ್ತಾರೆಯೇ ಹೊರತು ನಮ್ಮ ದೇಶದಲ್ಲಿ ತಯಾರಾಗುವ ಖಾದಿಗೆ ಪ್ರೋತ್ಸಾಹ ಕೊಡುವುದಿಲ್ಲ. ಇಲ್ಲಿ ಮಾನ್ಯ ಮಂತ್ರಿಗಳು ಖಾದಿ ಹಾಕುವಾಗ ಉಳಿದವರೂ ಸಹ ದೇಶಾದ್ಯಂತ ಖಾದಿಯನ್ನೇ ಹಾಕಬೇಕಾದುದು ಅಗತ್ಯವೆಂದು ನಾನು ಸರ್ಕಾರದಲ್ಲಿ ಮನವಿ ಮಾಡುತ್ತೇನೆ. ಮುಖ್ಯವಾಗಿ ಎಲ್ಲಾ ಕಡೆಯೂ ಈ

3 P.M.

ಖಾದೀ ತಯಾರಿಕೆಯ ಉದ್ಯಮವನ್ನು ಹೆಚ್ಚಾಗಿ ಅಭಿವೃದ್ಧಿಗೊಳಿಸಿದರೆ ಗ್ರಾಮಾಂತರ ಪ್ರದೇಶಗಳಲ್ಲಿ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲು ಬಹುಮಟ್ಟಿಗೆ ಅನುಕೂಲವಾಗುತ್ತದೆ ಎಂದು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳಬೇಕಾಗಿದೆ.

ಚರ್ಮದ ಕೈಗಾರಿಕೆ ನಮ್ಮ ದೇಶಕ್ಕೆ ಅತ್ಯಗತ್ಯವಾದ ಮತ್ತು ಉಪಯುಕ್ತವಾದ ಕೈಗಾರಿಕೆಯಾಗಿ ಪರಿಣಮಿಸಿದೆ. ಇದಕ್ಕಾಗಿ ಕೋಟ್ಯಾಂತರ ರೂಪಾಯಿಗಳ raw materials tan ಆಗಿರತಕ್ಕ ಮಾಲುಗಳನ್ನು ನಮ್ಮ ದೇಶದ ಉಪಯೋಗಕ್ಕೆ ಹೊರಗಿನಿಂದ ತರಿಸಿಕೊಳ್ಳುತ್ತಿದ್ದಾರೆ. ನಮ್ಮ ಸಂಸ್ಥಾನದಲ್ಲಿಯೇ ಈ ಕೆಲಸವನ್ನು ಅರಿತು ನುರಿತವರು ಸಾವಿರಗಟ್ಲೆ ಜನರಿರುತ್ತಾರೆ. ಇವರನ್ನೆಲ್ಲಾ ಒಟ್ಟುಗೂಡಿಸಿ ಇವರ ಕೈಲಿ ಸರ್ಕಾರದವರು ಈ ಕೆಲಸವನ್ನು ಮಾಡಿಸಿದರೆ ಕೋಟ್ಯಾಂತರ ರೂಪಾಯಿಗಳನ್ನು ವ್ಯಯಮಾಡಿ ಹೊರಗಿನಿಂದ ತರಿಸಿ ಕೊಳ್ಳುವ ಮಾಲನ್ನು ತಡೆಗಟ್ಟಬಹುದು. ನಮ್ಮ ಜನರಿಗೂ ಸರ್ಕಾರದವರು ಉದ್ಯೋಗವನ್ನು ಒದಗಿಸಿ ಕೊಟ್ಟಹಾಗಾಗುತ್ತದೆ. ಚರ್ಮಹದ ಮಾಡುವ ಕೆಲಸವನ್ನು (Tanning) ಸರ್ಕಾರದವರು ನಮ್ಮ ದೇಶದಲ್ಲಿಯೇ ಅದರಲ್ಲಿ ನೈಪುಣ್ಯ ಪಡೆದ (technical experience) ಜನರಿಂದ ಮಾಡಿಸಿದರೆ ಬಹುಮಟ್ಟಿಗೆ ಈ ಕೈಗಾರಿಕೆಯಿಂದಲೂ ಸಹ ನಮ್ಮ ಸಂಸ್ಥಾನದ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದು.

ಇನ್ನೊಂದು, ಡಿಪ್ರೆಸ್ಟ್ ಕ್ಲಾಸ್‌ನವರು ಮುತುವರ್ಜಿಯಿಂದ ನಮ್ಮ ದೇಶದಲ್ಲಿ ನಡೆಸಿಕೊಂಡು ಬರುತ್ತಿರುವ ಚಕ್ಕ ಕೈಗಾರಿಕೆಯ ವಿಚಾರ. ಸಾಧಾರಣವಾಗಿ ಇದು ಮದ್ರಾಸಿನಿಂದಲೂ, ಇತರ ಭಾಗಗಳಿಂದಲೂ ಪಾಶ್ಚಿಮಾತ್ಯ ದೇಶಗಳಿಗೂ ಹೋಗುತ್ತಿದೆ. ಸರ್ಕಾರದವರು ದೊಡ್ಡಮನಸ್ಸುಮಾಡಿ ಈ ಬಗ್ಗೆ ಕಂಟ್ರಾಕ್ಟನ್ನು ಚಿತ್ರದುರ್ಗ ಡಿಸ್ಟ್ರಿಕ್ಟನಲ್ಲಿ ಹರಿಜನರಿಗೇ ಕೊಟ್ಟಿರುವುದರಿಂದ ಅವರಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ಮುಂದೆಯೂ ಸಹ ಈ ಕೈಗಾರಿಕೆ ಇನ್ನಷ್ಟು ಅಭಿವೃದ್ಧಿಗೊಳ್ಳುವುದಕ್ಕಾಗಿ ಸಹಕಾರ ತತ್ವದ ಮನೋಭಾವನೆಯ ಮೇಲೆ ಸರ್ಕಾರದವರು ಮುಂದುವರಿಯಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಕೊನೆಯದಾಗಿ, ತೆಂಗಿನ ನಾರಿನ ತಯಾರಿಕೆ ಹಿರಿಯೂರಿನಲ್ಲಿ ಜಾಸ್ತಿಯಾಗಿದೆ. ಇದರಿಂದ ಒಳ್ಳೆಯ ಹುರಿ, ಹಗ್ಗ ಇವುಗಳನ್ನು ಮಾಡಲು ಅನುಕೂಲವಾಗುತ್ತದೆ. ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಯಥೇಚ್ಛವಾಗಿ ಮ್ಯಾಂಗನೀಸ್ ದೊರಕುತ್ತದೆಂಬ ವದಂತಿ ಇದೆ. ಈ ಬಗ್ಗೆ ಸರ್ಕಾರದವರು ಆಲಸ್ಯ ಮನೋಭಾವವನ್ನು ತಾಳದೆ ಇದರ ಬಗ್ಗೆ ಪರಿಶೋಧನೆ ನಡೆಸಿ, ಒಂದು ಖಾಸಗೀ ಕಂಪೆನಿಯ ಮೂಲಕವಾಗಲಿ ಅಥವಾ ಸರ್ಕಾರದ ಮೂಲಕವಾಗಲಿ ಈ ಉದ್ಯಮವನ್ನು ಕೈಗೊಂಡು ಇದನ್ನು ಅಭಿವೃದ್ಧಿಗೊಳಿಸಿದರೆ ಜನರಿಗೂ ಅನುಕೂಲವಾಗುವುದಲ್ಲದೆ ತನ್ಮೂಲಕ ಸರ್ಕಾರದವರಿಗೂ ಅನುಕೂಲ ಲಭಿಸುತ್ತದೆಂದು ತಿಳಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. CHAIRMAN.—Now the House will rise for lunch and meet again at 3-30 P.M.

The House adjourned for Lunch at Five Minutes past Three of the Clock and reassembled at Thirty-five Minutes past Three of the Clock.

[Mr. SPEAKER in the Chair]

Sri S. SRINIVASA IYENGAR (T.-Narsipur).—I oppose the demand

under 'Industries and Supplies.' In 'Industries and Supplies' for the last five years we are having not only a drop in sales but also reduced profits. In 1952-53 the Government have registered a drop in sales to the extent of Rs. 77.29 lakhs and in 1953-54 Rs. 77.79 lakhs. The drop in sales or reduction in profits in the various industrial concerns is as follows :—

The Government Porcelain Factory: it earned a profit of 1.44 lakhs in 1950-51 and in 1952-53 it earned Rs. 57,000 only.

The Government Soap Factory about which the Government take credit, earned Rs. 2.85 lakhs in 1950-51 and in 1952-53 Rs. 2.55 lakhs only.

The Sandal Oil Factory got a profit of Rs. 8 to 9 lakhs in 1950-51 and in 1952-53 its profit was Rs. 6.44 lakhs. There was a reduction of Rs. 3 lakhs in profit.

The Government Silk Weaving Factory earned Rs. 90,000 in 1950-51 and in 1952-53 only Rs. 19,000.

The Dichromate Factory, the Government Silk Filatures and the Mysore Implements Factory, all these three industries had registered increased loss for the last 3 to 4 years. While the capital outlay on the industrial concerns has increased from the year 1949-50, the profits had consistently been reduced. The capital outlay on the industrial concerns in the year 1949-50 was of the order of Rs. 6.59 crores, and in 1952-53 it increased to Rs. 10.10 crores. I would like to submit that the investment on these industrial concerns is met out of the borrowings. For the money that we borrow we pay interest. But, even though we pay interest, our returns are very small, and the general revenues are operated upon for the payment of interest on these industrial concerns. I submit that this drop in sales and the reduced profits are due to two reasons. One is, either we cannot face competition of the world or our sales organisation is defective. I submit that at present the sales organisation for the products of the industrial concerns is highly defective. It is true that we have a Trade Agent in London to sell our sandal oil. What I wish to submit is this. Unless the Government of Mysore organises a regular sales organisation throughout India and in places where our goods are badly wanted, they cannot improve their production in these industries nor can they earn good profits. We can really manufacture very good things and that too we can reach a record production. But the only thing necessary is to market them. We have to compete with the competitive world. There are several firms with similar organisation and we must be able to sell our goods at competitive prices. Unless we do so, we are sure to lose further year after year and our products will not be so good as those of other countries. So far as the sales organisation is concerned, I have studied this problem a little. In certain places the Silk Filature products manufactured in the Silk Weaving Factory are sold through merchants. The commission that we give to the wholesaler is small. Our organisation is not flexible ; our costing is not on commercial lines, so much so what happens is, these merchants to whom you have entrusted the sale of our products—the products of the Mysore Silk Weaving Factory—would rather see that they sell goods belonging to some others who give them more percentage of commission. Many times when we visit these shops, they would rather induce us to buy products of some other concerns than these of the Government of Mysore, because the Government of Mysore gives a particular percentage of commission and that does not work out the commission they get elsewhere and so they would rather induce the buyers to buy products of some other concern rather than the products of the Silk Factory. Similarly, in respect of our sandal oil we pay commission. Our oil is marketed almost in many places in the world.—Bombay, Kanuj, Calcutta, Madras, Japan, Singapore, etc. These are the best market places. Even in the U.S.A. our sandal oil is in demand. So also in Siam and China. I would very much request the Government to improve the sales organisation, so that a good production budget for industrial concerns may be prepared.

(Sri S. SRINIVASA IYENGAR.)

In fact the industrial concerns do not know how much they can produce, because they are not quite sure of the market. They must be in a position to know what types of goods are necessary and in what market. They should try to manufacture these types and see that during the year they dispose of the goods manufactured. I can very safely say that our industrial concerns have got nearly Rs. 18 lakhs worth of goods in stock. There are 19 concerns; except the Iron and Steel Works, other concerns are not working properly. The Iron and Steel Works no doubt give us profits. But in the other concerns, the profits are low. They are holding huge stocks at the end of the year. On all of them we have sunk money. Therefore I would urge that these concerns manufacture as much products as are necessary for the market and improve their sales organisations. The Trade Agent's office, the Hon'ble Minister was pleased to say, has done well; they have done a lot of service in securing us markets and such other things. I entirely acknowledge it and in fact I have also said so. That is quite true. But they must have a wider sphere. They must secure more orders for our sandal oil and some of our other products. Facilities have been given to them. In spite of it, how is it that there are no tangible profits? It is entirely due to want of proper plan. We must have a trade plan. That is absolutely necessary. You are having in your industrial concerns a turnover of nearly Rs. 4 crores a year. Can you not make a decent profit out of this turnover? We can really do it. But the only thing is, it must be done according to plan. You must suit your sales organisation to the changing world. You must adjust yourselves to the changing world. For example, for our sandal oil Kanuj has a great demand. There was demand for the manufactured drugs,—pharmaceutical products. But that market is not availed of. There is competition. We must survive that competition. My submission is, having all facilities, why should we not be always alert and see that we really mean business in our industrial concerns? That is my sole object and I believe that Government are well impressed about this.

Then about our silk industry. The Silk Filature in T. Narasipur is a good industry. It was started at a time when we wanted silk......

Mr. SPEAKER.—Some reasonable time must be given to the Minister to reply.

Sri S. SRINIVASA IYENGAR.—Government have already invested Rs. 7.55 lakhs on this industry and have further invested Rs. 45,000 on its shares. But the shares are selling at rockbottom prices. They have their own man as the Managing Director. I would urge the Government to see that greater efforts are made to improve this industry and allow the factory to work and produce enough goods not only to pay back the loans with the interest but also feed two lakhs of families that are dependent on this industry.

Sri V. M. MASCARENHAS (St. John's Hill).—Of course the first thing is that our industries and the Industries Department need a thorough reorganisation as repeated on the floor of this House at least according to me, for the last five years. Let it not be said that I am repeating the same old story. The only sources of revenue that we could now get, having lost the more elastic ones, are industries, electricity and sales-tax. So, it is very necessary that the Government bestows its attention to see that these three departments work to the utmost satisfaction if the State has to succeed and if it has to exist.

Another thing that I want to bring to the notice of the Government is: I have read that they have decided to include in the Second Five-Year Plan a textile mill at Bellary. In my Budget speech, I pointed out that the textile industry has not only reached self-sufficiency but has a surplus of 25 per cent which it is finding very difficult to market. I do not understand which great brainwave was responsible for sponsoring a textile mill at Bellary when India has not been able to market

its 25 per cent extra production. Is the Government of Mysore going to invest on a mill of this kind Rs. 40 lakhs which is borrowed money and is this textile mill going to succeed, is all that I ask of the Hon'ble Minister ?

The third thing I would like to say is considering this important problem as I said, in my Budget speech and as my friend Sri Pattabhi Raman also said, it is perhaps necessary to constitute a committee to enquire into the working of the Government industrial concerns and to take a survey as to how we can develop our cottage and home industries in our State. Thank you, Sir.

ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಈ ಕೈಗಾರಿಕೆಗಳಿಗೆ ಸಂಬಂಧಪಟ್ಟ ಹಾಗೆ ನಮ್ಮ ಸಂಸ್ಥಾನದಲ್ಲಿ ಸುಮಾರು 6 ಕೋಟಿ ರೂಪಾಯಿಗಳ ಬಂಡವಾಳವನ್ನು ಹಾಕಿ ಕೈಗಾರಿಕೆಗಳನ್ನು ನೇರವಾಗಿ ಸರ್ಕಾರದವರೇ ನಡೆಸುತ್ತಾ ಇರುವುದರಿಂದ ಕೂಲಿಗಾರರ ಕನಿಷ್ಠ ಸಂಬಳವನ್ನು ಗೊತ್ತು ಮಾಡುವ ಬಗ್ಗೆ ನೇಮಿಸಿರತಕ್ಕ ಸಮಿತಿ ಏನು ವರದಿ ಕೊಟ್ಟಿದೆ ಎಂಬುದು ಇನ್ನೂ ತಿಳಿದುಬಂದಿಲ್ಲ. ಅಲ್ಲದೆ ಅದಕ್ಕೆ ಸಂಬಂಧಪಟ್ಟಹಾಗೆ ಕಾನೂನು ಕಾಯಿದೆಗಳನ್ನು ಸರ್ಕಾರದವರು ಇನ್ನೂ ತಯಾರುಮಾಡಿಲ್ಲ. ಆದ್ದರಿಂದ ಈ ಕನಿಷ್ಠ ಕೂಲಿಯನ್ನು ನಿರ್ಧರಮಾಡಬೇಕಾದದ್ದು ಅತ್ಯಂತ ಅಗತ್ಯ. ಇದಕ್ಕೆ ಕೇಂದ್ರದಲ್ಲಿ ಕಾನೂನು ಕೂಡ ಆಗಿತ್ತು. ಅದನ್ನು ಸರ್ಕಾರದವರು ಜಾರಿಗೆ ಕೊಡಬೇಕೆಂದು ಹೇಳುತ್ತೇನೆ.

Mr. SPEAKER.—The difficulty is there will be no time for reply by the Minister. It will not be doing any justice if you cannot get a satisfactory reply from the Hon'ble Minister. If you do not want a reply, you can go on till 4. You have raised a point now; at least it requires five minutes for him to explain.

Sri H. SIDDAVEERAPPA (Minister for Industries).—Sir, several points have been raised by several Hon'ble Members, some of them giving very useful suggestions for the re-modelling of the Industries Department. Some criticisms also were levelled against the working of some of the industrial concerns and also of some joint-stock companies where Government have invested some money. The Hon'ble Member just opposite to me, Sri Rachaiah, raised the point and referred to a joint-stock company where Government have majority of shares, with regard to whose ex-chairman there were so many points of view and that Government had not cleared the position. In order to set at rest any kind of feeling of doubt in his mind, I would like to make this statement.

Anonymous petitions containing serious allegations against the work and conduct of Sri A. G. Bandi Gowda, Ex-Chairman and Managing Director, Mysore Sugar Co., Ltd., were received by the Government in December 1952, and he was called upon to furnish his report on the same. The reply received from him was not to the point and in certain respects evasive. In view of the Government investment of 55 per cent of capital in this Company and other issues involved, it was felt necessary to exercise the powers vested under Article 159 of the Memorandum and Articles of Association of the Company empowering the Government to appoint an Auditor to audit the accounts of the Company. This appointment of the Government Auditor was made in September 1953 and he was requested to forward his report as early as possible. The Government Auditor sent a preliminary report in December 1953 bringing to the notice of the Government serious irregularities observed by him during audit. He further said that he had already requested Sri A. G. Bandi Gowda to give his clarifications in respect of the various irregularities observed during audit, and he has sent his final report after obtaining the same. The Government Auditor submitted his final report in February 1954 pointing out how Sri Bandi Gowda has gone on evading the request for clarification made to him in November 1953, questioning the appointment of the Government Auditor itself as illegal, unconstitutional and irregular. Government regret very much that Sri Bandi Gowda should have adopted this attitude towards the Government Auditor appointed under clear and specific provisions of the Articles of Association of the Company. The Auditor's report revealed the serious and grossly irregular and reckless transactions carried out by him in the conduct of operations of the Company and led to the conclusion that he has acted in a manner seriously detrimental to its

(SRI H. SIDDAVEERAPPA.)

interests. He was appointed by Government as Government Director and Government looked into the report of the Auditor and after examining all the material available had no alternative except to remove Sri Bandi Gowda from the office of Government Director. The order dated 25th February 1954 removing Sri Bandi Gowda from the office of Government Director on the Board of Directors of the Mysore Sugar Company with immediate effect was communicated to him. After the removal from the office as Director on the Board of Directors, he could not function any longer either as Chairman or the Government Director. He is reported to have sent a letter of resignation on 1st March 1954 resigning his office of Chairman and Managing Director which he naturally could not have held on account of removal from the Government Directorship itself.

The Government wish to take this opportunity of assuring Hon'ble Members that they have been compelled to take the abovesaid action solely with a view to maintain the purity and integrity of the administration in Government-controlled industrial concerns.

Sri J. MOHAMED IMAM (Jagalur).—Can that Audit report be made available to the House ?

Sri H. SIDDAVEERAPPA.—With regard to the point raised by the Hon'ble Member for Shimoga Sri S. R. Nagappa Setty—he raised certain important issues about the management of our Bhadravathi Iron and Steel Works and he has brought to my notice some points. I wish to state that what he said with regard to the preparation of the Balance Sheet is not correct.

Regarding the rural industrialisation scheme, the Hon'ble Member is aware of the Committee recently constituted by the Government to go into the matter and I assure him that the Government have taken very active steps to see that all the small scale industries are put on a firm footing.

Regarding the points raised by the Hon'ble Member Sri Pattabhi Raman about unemployment as to how our industries must come to the aid of solving the problem of unemployment,—it is a very big problem. That is a problem that will have to be tackled on a larger ground and on a larger plan and I am sure the Government of India are interested in solving this problem. So far as the Mysore Government are concerned, they are always ready to aid any scheme that is sponsored by the Government of India to solve the problem of unemployment.

My Hon'ble friend Sri M. Linganna made his modest observation about two industries which are dear and near to him. I may assure him that I will bear in mind the suggestion made by the Hon'ble Member.

The Hon'ble Member from Chitaldrug, Sri T. Hanumaiya, suggested improvements that will have to be made. In particular he referred to one small industry, namely, the bark industry. Last year Government have as an experiment given this work to Harijans. I am very happy to say that they have worked to the satisfaction of the Government. That is the surest way of helping our poor Harijans in their economic improvement. On the same lines as was done last year, Government will consider sympathetically that case. That is the assurance which I can give at the moment.

My friend Sri Srinivasa Iyengar, when he speaks, he speaks with an array of facts and figures. I am sure there is much force in what he has said, especially regarding our sales organisation. His weighty remarks deserve to be considered and they will receive my utmost consideration.

With regard to the point raised by Sri Gopala Gowda about the Minimum Wages—I think that is the point he raised—I can only say that that is a point I will look into. So far as Government industrial concerns are concerned, I am sure on this point my friend will agree that Government are always sympathetic towards labour.

Mr. SPEAKER.—The question is:

"That a sum not exceeding Rs. 6,48,20,100 be granted to the Government to defray the charges

which will come in course of payment during the year ending 31st day of March 1955, in respect of 'Industries and Supplies (Except Sericulture)'."

The motion was adopted.

DEMAND No. 27—SERICULTURE.

43. INDUSTRIES AND SUPPLIES—SERICULTURE.

Mr. SPEAKER.—Motion moved :

"That a sum not exceeding Rs. 11,18,200 be granted to the Government to defray the charges which will come in course of payment during the year ending 31st day of March 1955, in respect of 'Sericulture'."

4 P.M.

ಶ್ರೀ ಜಿ. ಪಾಪಣ್ಣ (ಶಿಡ್ಲಘಟ್ಟ—ಚಿಕ್ಕಬಳ್ಳಾಪುರ).—ಮಾನ್ಯ ಅಧ್ಯಕ್ಷರೇ, ಈ ಡಿಮ್ಯಾಂಡ್ ಮನವಿ ಈ ಸಭೆಯ ಮುಂದೆ ಬರುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೆ. ಈ ಬಡ್ಜೆಟ್ ಎಸ್ಟಿಮೇಟ್ ತಯಾರಾಗುವುದಕ್ಕಿಂತ ಮೊದಲೇ ಮಾನ್ಯ ಮಂತ್ರಿಗಳಿಗೆ ಪತ್ರ ಬರೆದು ಈ ಇಲಾಖೆಯಿಂದ ಅನುಕೂಲವಿಲ್ಲ, ಇದನ್ನು ಮುಚ್ಚಿ, ಇದಕ್ಕಾಗುವ ವೆಚ್ಚವನ್ನು ಬೇರೆ ಕಡೆಗೆ ವಿನಿಯೋಗಿಸಿ ಸದುಪಯೋಗ ಮಾಡಿ ಎಂದು ಮನವಿ ಮಾಡಿದ್ದೆ. ಈ ಇಲಾಖೆಯನ್ನು ಕಳೆದ ಅನೇಕ ವರ್ಷಗಳಿಂದ ನೋಡುತ್ತಿದ್ದೆ. ಅದರಲ್ಲೂ ಎರಡು ವರ್ಷಗಳಿಂದ ಯಾವ ರೀತಿ ಈ ಇಲಾಖೆ ಕೆಲಸ ಮಾಡುತ್ತಿದೆ, ಸರ್ಕಾರ ಇದಕ್ಕೆ ಎಷ್ಟು ತನ್ನ ಕಾಲವನ್ನು ಕೊಡುತ್ತಿದೆ, ಎಷ್ಟು ಆಸಕ್ತಿ ವಹಿಸುತ್ತಿದೆ ಎಂದು ನೋಡಿ ಬಹಳ ವಿಷಾದದಿಂದ ಮತ್ತು ವಿನಯಪೂರ್ವಕವಾಗಿ ಈ ಇಲಾಖೆಯನ್ನೇ ಮುಚ್ಚಿ ಇದಕ್ಕಾಗುವ ವೆಚ್ಚ ನಿಲ್ಲಿಸಿ ಎಂದು ತಿಳಿಸಿದೆ. ಆದರೆ ಹಾಗೆ ಮಾಡಲಿಲ್ಲ. ಈ ರೀತಿಯ ಡಿಮ್ಯಾಂಡ್ ಮನವಿ ನಮ್ಮ ಸಭೆಯ ಮುಂದೆ ಬಾರದಿದ್ದರೆ ಬಹಳ ಸಂತೋಷಪಡುತ್ತಿದ್ದೆ.

ಮೈಸೂರ ರೇಷ್ಮೆ ಬೆಳೆಯುವುದಕ್ಕೆ ಬಹಳ ಪ್ರಸಿದ್ಧಿಯಾಗಿದೆ, ಬಹಳ ಹೆಸರುವಾಸಿಯಾಗಿದೆ. ಈ ದೇಶದಲ್ಲಿ ಇದು ದೊಡ್ಡ ಕೈಗಾರಿಕೆ. ಇದರ ವ್ಯವಸಾಯ ಇಲ್ಲಿ ಹೆಚ್ಚಾಗಿದೆ. ಶ್ರೀ ಶ್ರೀನಿವಾಸಯ್ಯಂಗಾರ್ ರವರು ಹೇಳಿದ ಹಾಗೆ ಲಕ್ಷಾಂತರ ಸಂಸಾರಗಳವರು ರೇಷ್ಮೆ ಕೈಗಾರಿಕೆಯಿಂದ ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುತ್ತಿದ್ದರು. ಆದರೆ ಇಂಥ ಕೈಗಾರಿಕೆಯನ್ನು ಅಭಿವೃದ್ಧಿ ಪಡಿಸಲು ಈಗಿನ ಸರ್ಕಾರ ಎಷ್ಟು ಮಟ್ಟಿಗೆ ಆಸಕ್ತಿ ವಹಿಸಿದೆಯೆಂದು ನೋಡಿ ಅದನ್ನು ವ್ಯಕ್ತಪಡಿಸಲು ಒಬ್ಬ ರೇಷ್ಮೆ ವ್ಯವಸಾಯಗಾರನಾಗಿ ನಾನಂತೂ ಬಹಳ ನಾಚಿಕೊಂಡಿದ್ದೇನೆ. ಈ ಕೈಗಾರಿಕೆಯನ್ನು ಉದ್ಧಾರ ಮಾಡಬೇಕೆಂದು ಎಷ್ಟು ಹೇಳಿದರೂ ಸರ್ಕಾರ ಸಾಕಷ್ಟು ಗಮನಕೊಡುತ್ತಿಲ್ಲ. ಆದ್ದರಿಂದ ಈ ಇಲಾಖೆಯನ್ನು ಅಭಿವೃದ್ಧಿ ಮಾಡುವರೆಂಬ ನಂಬಿಕೆ ರೈತರಿಗೇನಿತ್ತೋ ಅದೆಲ್ಲಾ ನಶಿಸಿ ಹೋಗುತ್ತಾ ಬಂತು. ಮಾನ್ಯ ಮಂತ್ರಿಗಳಿಗೆ 2 ವರ್ಷಗಳಿಂದ ಅನೇಕ ಬಾರಿ ನಾನು ವಿನಯಪೂರ್ವಕವಾಗಿ ಈ ವಿಚಾರ ಹೇಳುತ್ತಿದ್ದೇನೆ. ಆದರೆ ಒಂದು ಅಂಗುಲ ಕೂಡ ಮುಂದುವರಿಯದೆ ಹಿಂದಕ್ಕೆ ಹೋಗುತ್ತಿದೆ. ಇದಕ್ಕೆ ಅನೇಕ ನಿದರ್ಶನಗಳನ್ನು ಕೊಡಬಹುದು. ಎರಡು ವರ್ಷಗಳ ಹಿಂದೆ ಇದೇ ಬಡ್ಜೆಟ್ ಅಧಿವೇಶನದಲ್ಲಿ ಬಿತ್ತನೆ ಮಸೂದೆಯು ಕೇವಲ 15 ನಿಮಿಷಗಳಲ್ಲಿ ಅಂಗೀಕಾರ ಮಾಡಲ್ಪಟ್ಟಿತು. ಅದನ್ನು ಕಾರ್ಯರೂಪಕ್ಕೆ ತನ್ನಿ ಎಂದು ಎರಡು ವರ್ಷಗಳಿಂದ ಒತ್ತಾಯ ಮಾಡಿದರೂ ಈ ತಿಂಗಳು, ನಾಳೆ ತಿಂಗಳು ಎಂದು ಒಂದೇ ಸಮನಾಗಿ ಮುಂದುವರಿಸುತ್ತಿದ್ದಾರೆ. ನಮ್ಮ ಕಾಲದಲ್ಲಿ ಆಗುತ್ತೋ ಇಲ್ಲವೋ ಎಂದು ನನಗೆ ಅನುಮಾನವಾಗಿದೆ. ವೆಚ್ಚ ಮಾಡುತ್ತಿರುವ ಹಣ ನೋಡಿದರೂ ಕೂಡ ಬಡ್ಜೆಟ್ಟಿನಲ್ಲಿ ಹಣ ಒದಗಿಸಿದರೂ ಸಹ ಅರ್ಧ ಭಾಗವೂ ಕೂಡ ಈ ಇಲಾಖೆಗೆ ಖರ್ಚಾಗುತ್ತಿಲ್ಲ. 1951-52ನೆಯ ಸಾಲಿನಲ್ಲಿ 6 ಲಕ್ಷ ರೂಪಾಯಿಗಳ ಪೈಕಿ ಹೆಚ್ಚು ಹಣ ಈ ಇಲಾಖೆಗೆ ಖರ್ಚಾಗಿಲ್ಲ. ಅಭಿವೃದ್ಧಿ ಕಾರ್ಯಗಳಿಗಾಗಿ ಕೇವಲ 11 ಸಾವಿರ ಮಾತ್ರ ಖರ್ಚಾಗಿದೆ ; 1953-54 ರಲ್ಲಿ 3,29,000 ರೂಪಾಯಿಗಳನ್ನೊದಗಿಸಿ ಕೇವಲ 90 ಸಾವಿರ ರೂಪಾಯಿಗಳಿಗೆ ರಿವೈಜ್ಡ್ ಎಸ್ಟಿಮೇಟ್ ಮಾಡಲಾಗಿದೆ, ಅರ್ಧ ಕೂಡ ಖರ್ಚಾಗಿಲ್ಲ. ಈ ಸಾರಿ 3,36,000 ರೂಪಾಯಿಗಳನ್ನೊದಗಿಸಿದ್ದಾರೆ. ಆದರೆ ಎಷ್ಟು ಖರ್ಚು ಏತಕ್ಕಾಗುತ್ತದೋ ಗೊತ್ತಿಲ್ಲ. ಈ ಸಾಲಿನಲ್ಲಿ 3,36,000 ರೂಪಾಯಿಗಳನ್ನು ಒದಗಿಸಿರುವುದನ್ನು ಯಾವ ರೀತಿ ವೆಚ್ಚ ಮಾಡುತ್ತಾರೆಂಬುದಕ್ಕೆ ವಿವರ ಕೊಟ್ಟಿಲ್ಲ, ಆದ್ದರಿಂದ ಅನುಮಾನವಾಗಿದೆ. ಈಗ ಈ ಕೈಗಾರಿಕೆ ಇತರ ಕೈಗಾರಿಕೆಗಳಂತೆ ಸ್ವತಂತ್ರವಾಗಿ ನಡೆಯುವ ಹಾಗಿಲ್ಲ. ಏಕೆಂದರೆ ರೇಷ್ಮೆ ಬಿಚ್ಚು ಮಿಶ್ರಜಾತಿ ಗೂಡು ಬೇಕು. ಅದಾಗಬೇಕಾದರೆ ಜಪಾನ್ ದೇಶದ ಗಂಡು ಹುಳು ನಮ್ಮ ದೇಶದ ಹೆಣ್ಣು ಹುಳು ಆವಶ್ಯಕ. ಜಪಾನ್ ದೇಶದ ಹುಳು ಸಾಧಾರಣ ವಾತಾವರಣದಲ್ಲಿ ಬೆಳೆಯುವುದಿಲ್ಲ. ಅದನ್ನು ಬಿಳಿಗಿರಿರಂಗನ ಬೆಟ್ಟ ಮತ್ತು ಕೆಮ್ಮಣ್ಣುಗುಂಡಿ ಬೆಟ್ಟಗಳ ಮೇಲೆ ಬೆಳೆಸುವುದಕ್ಕೆ ಅವಕಾಶವಿದೆ. ಆದರೆ ಈ ವಿಚಾರ ಶೋಚನೀಯ ಸ್ಥಿತಿಯಲ್ಲಿದೆ. ರೈತರಿಗೆ ಬೇಕಾದ ಗೂಡು, ಹುಳು ಸಕಾಲದಲ್ಲಿ ಸರಿಯಾದ್ದು ಸಿಕ್ಕುವುದಿಲ್ಲ. ಅನೇಕ ಸಲ ಬೆಲೆ ಸಾವಿರ ಒಂದಕ್ಕೆ 30 ರೂಪಾಯಿಗಳವರೆಗೂ ಏರುತ್ತದೆ. ಮೈಸೂರು ಗೂಡು ರೈತರಿಗೆ ಸಕಾಲದಲ್ಲಿ ಸಿಕ್ಕದೆ ಅನೇಕ ಸಲ ತೊಂದರೆಯಾಗಿದೆ. ಬಿತ್ತನೆ ಕೇಂದ್ರಗಳಲ್ಲಿ ರೈತರ ಸ್ಥಿತಿ ಶೋಚನೀಯವಾಗಿದೆ. ಹೀಗಿರುವಾಗ ರೈತರು ಯಾವ ರೀತಿ ಬೆಳೆಯುತ್ತಾರೆ, ಯಾವ ರೀತಿ ಈ ಕೈಗಾರಿಕೆ ಉದ್ಧಾರವಾಗುತ್ತದೆ ಎಂದು ನೋಡಿದರೆ ಮುಂದೆ ಇದಕ್ಕೆ ಸರಿಯಾದ ಸ್ಥಾನ ಸಿಕ್ಕಲಾರದೆಂದು ಕಾಣುತ್ತದೆ. ಇದಕ್ಕೆ ಒಂದು ದೊಡ್ಡ ಕಾರಣ ಸುಮಾರು 3 ಜಿಲ್ಲೆಗಳಲ್ಲಿ ರೇಷ್ಮೆ ಬೆಳೆಯುತ್ತಿದ್ದಾರೆ. ಆ ಪ್ರಾಂತಗಳ ಅನೇಕ ಮಹನೀಯರು ಈ ಸಭೆಗೆ ಬಂದಿದ್ದಾರೆ. ನಾನು ನೋಡಿದ್ದರಲ್ಲಿ ಅವರಲ್ಲಿ ಬಹಳ ಜನ ಸದಸ್ಯರು ಈ ವೃತ್ತಿಯನ್ನವಲಂಬಿಸಿ ತಮ್ಮ ಸಂಪಾದನೆ ಮಾಡಿಕೊಳ್ಳುತ್ತಿಲ್ಲ. ಈ ಒಂದು ಕೈಗಾರಿಕೆ ತೀರ ಬಡವರ ಕೈಲಿ, ಸಾಧಾರಣ ಜನರ ಕೈಲಿ ಇದೆಯೇ ವಿನಾ ವಿದ್ಯಾವಂತರ ಕೈಲಿ ಅಥವಾ ಹಣವಂತರ ಕೈಲಿ ಇಲ್ಲ. ಈ ಒಂದು ದೃಷ್ಟಿಯಿಂದ ಇದರ ವಿಚಾರವನ್ನು ಒತ್ತಾಯ ಮಾಡುವುದಕ್ಕಾಗಲಿ, ಇದರ ಮೇಲೆ ಪ್ರಭಾವ ಬೀರುವುದಕ್ಕಾಗಲಿ ಅವಕಾಶವಿಲ್ಲದೆ ಈ ಕೈಗಾರಿಕೆಯನ್ನು ಸರ್ಕಾರ ಹೀನಸ್ಥಿತಿಗೆ ತಂದಿದೆ.

(ಶ್ರೀ ಜಿ. ಪಾಪಣ್ಣ.)

ಇದೂ ಅಲ್ಲದೆ ಸರ್ಕಾರ ಇದಕ್ಕೆ ಸಾಕಾದಷ್ಟು ಹಣ ಒದಗಿಸಿಲ್ಲ. ಕಾನಕಾನಹಳ್ಳಿ ಫಿಲೇಚರ್‌ಗೂ, ಮೈಸೂರು ಫಿಲೇಚರ್‌ಗೂ ಬೇಕಾದಷ್ಟು ಹಣ ಕೊಟ್ಟಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಒಂದು ಸಣ್ಣ ಫಿಲೇಚರ್ ಇದೆ. ಕೊಳ್ಳೇಗಾಲದಲ್ಲಿ ಒಂದು ಫಿಲೇಚರ್ ಇದೆ. ಅದನ್ನು ಮದ್ರಾಸು ಸರ್ಕಾರ ನಡೆಸುತ್ತಿದೆ; ಅದರಿಂದ ಲಾಭವಿದೆ. ಅದೇ ವಾತಾವರಣದಲ್ಲಿರುವ ಸರ್ಕಾರಿ ಫಿಲೇಚರ್ ಮತ್ತು ಮೈಸೂರಿನ ಚಿಕ್ಕ ಫಿಲೇಚರ್‌ಗೆ ಕೂಡ ಲಕ್ಷಾಂತರ ರೂಪಾಯಿಗಳ ನಷ್ಟವಾಗಿದೆ. ಮೈಸೂರು ಫಿಲೇಚರಿಗೆ ಸಾಲವಾಗಿ ಕೊಟ್ಟಿರುವ ಎಷ್ಟೋ ಹಣ ಹಿಂದಕ್ಕೆ ಬರುತ್ತದೆಯೆ ಎಂಬುದು ಅನುಮಾನವಾಗಿದೆ. ಅದಕ್ಕೆ ಕಾರಣ ಸರ್ಕಾರ ಇದನ್ನು ಕಡೆಗಣ್ಣಿನಿಂದ ನೋಡುವುದೇ ಆಗಿದೆ. ಅನೇಕ ಸಾರಿ ಮಾನ್ಯ ಮಂತ್ರಿಗಳೇ ಹೇಳಿದಂತೆ ಅನೇಕ ಕಾರಣಗಳಿವೆ, ಕಷ್ಟವಿದೆ, ನಿಜ. ಆದರೆ ನಮ್ಮ ಮುಂದೆ ಹೇಳಿದರೆ ಅದನ್ನು ಪರಿಹಾರ ಮಾಡುವುದು ಹೇಗೆ ! ಸರ್ವಶಕ್ತಿಯಿರುವ ಸರ್ಕಾರವೇ ಅದನ್ನು ಬಗೆಹರಿಸಿ ಸರಿಪಡಿಸಲು ಸಂದೇಹ ಪಡುತ್ತಾ, ತಯಾರಾಗಿಲ್ಲದೆ ಇರುವಾಗ ಈ ಸಮಸ್ಯೆಯನ್ನು ಪರಿಹಾರ ಮಾಡುವವರು ಯಾರು ? ಬರೀ ಕಷ್ಟವನ್ನು ನಮ್ಮ ಮುಂದೆ ಹೇಳಿದರೆ ಪ್ರಯೋಜನವೇನು ? ಇದೇ ರೀತಿಯಲ್ಲಿ ಮುಂದುವರಿಸುವುದಾದರೆ ಖಂಡಿತ ಈ ಇಲಾಖೆಯನ್ನು ಮುಚ್ಚಿ ಇದಕ್ಕಾಗಿ ಉಪಯೋಗಿಸುವ ಹಣವನ್ನು ಬೇರೆ ಕೆಲಸಗಳಿಗೆ ಒದಗಿಸಬೇಕೆಂದು ಪ್ರಾರ್ಥನೆಮಾಡುತ್ತೇನೆ.

Sri M. RAJASEKHARA MURTHY (Yelandur).—Sir, as all of us know, sericulture is a cottage industry which is subsidiary to agriculture. Directly or indirectly this industry is giving occupation to the extent of nearly two lakhs of families in our State. If we look into the figures the importance of the industry can be surely understood. The total production of silk in India is 1·838 million pounds ; in Mysore alone it is 1·289 million pounds. 75 per cent of the total production of silk is produced in Mysore and the balance of 25 per cent is produced in the rest of India. Unfortunately, the sericulture industry is now passing through a crisis. We have now to look into its condition. The reasons are not far to seek. Firstly, we are producing a very low quality of silk at a high cost. Secondly, there is a constant and sudden fluctuation in the silk market owing to the unregulated import policy followed by the Central Government. Thirdly, there is conflicting interest in the same trade between weavers and reelers. Lastly, there is competition from among the factories which are now producing artificial silk. In Bombay and Hyderabad, factories are producing artificial silk. Sir, it is desirable to suggest some remedies for the improvement of this industry.

In the first instance, we must give our primary attention to the development of mulberry plantation. How can this be done ? We must have a nursery garden in our State and supply to the sericulturists so as to produce great quantities of mulberry leaves in order to lessen the cost of production of cocoon. In Mysore the production per acre is 4,000 lbs. of mulberry leaves. In Japan it is 17,000 lbs. If we take into consideration the quality of the cocoon, we can come to the conclusion that the quality of cocoon produced in our country is very low. To produce one pound of silk in Japan the cocoon required is only 8 pounds ; in Mysore 17 pounds of cocoon are required to produce one pound of silk. Thus it is clear that the quality of cocoon produced in our country is very low.

Further, the reeling machinery that we are now using in our industries is of a very old type. Therefore we have to use only the improved method of machinery which is now being used in Japan. For all these developments, I think, a Research Section is of paramount importance. This research station provides a rock-bed to base our industry on a very firm foundation. The Government of Mysore are not at all taking any interest with regard to the development of this Research Institute. The Government of India have sanctioned Rs. 1,54,000 for the development of Research Institute for Mysore ; Madras Rs. 1,90,000 ; Assam Rs. 6,000 ; West Bengal Rs. 42,000. We must make use of this opportunity, Sir ; our budget reveals that the Government are not earnest to develop this Research Institute. In the year 1950-51 the provision in the budget was to the extent of four lakhs but the amount actually spent over this was about Rs. 29,432. In the year 1951-52 the amount provided in the budget was Rs. 2,12,206, amount spent was Rs. 26,457; in 1952-53 amount provided was Rs. 1,58,780 and the amount spent

was Rs. 26,178. These figures reveal that the Government are not taking effective steps to develop the Research Institute. Even the Research Institute that has now been started by Government at Channapatna is not at all doing any satisfactory work. Therefore, I request Government to take effective steps. Government should recommend to the Central Government that the import of silk must be on the account of the Central Silk Board. The Central Silk Board must purchase all the silk imported from Japan and then the Board must allot the required silk to all States. The price of the imported silk must be one or two rupees above the indigenous silk so that we may have a secured market for the indigenous silk. The profit made by the Board would be instituted for the development of silk industry. The Tariff Commission which has submitted its report to the Central Government has made a few recommendations. One of the recommendations says: "Research, particularly in respect of mulberry cultivation and breed of silkworms, is of vital importance to the development of the Sericulture Industry. The Central Silk Board should therefore go ahead with its proposed scheme of setting up regional research stations with emphasis on the above two aspects and implement it as early as possible. For co-ordinating research activities of these regional stations a Central Research Station should also be established at a convenient place." Also, the Commission have observed in their report that in spite of protection granted by the Central Government, this industry is not making any headway. I request that Government should take effective steps in order to improve this industry.

(*Several Members rose.*)

Mr. SPEAKER.—We have not got enough time. So, it is better we hear the Hon'ble Minister in view of the criticism made, particularly by Sri Papanna.

ಶ್ರೀ ಎಚ್. ಸಿದ್ದವೀರಪ್ಪ.—ಶ್ರೀ ಪಾಪಣ್ಣನವರು ಕೈಗಾರಿಕೆ ಮತ್ತು ವ್ಯವಸಾಯ ನಮ್ಮ ದೇಶದಲ್ಲಿ ಎಷ್ಟು ತ್ವರಿತವಾಗಿ ಮುಂದುವರಿಯಬೇಕು ಮತ್ತು ಉದ್ಧಾರವಾಗಬೇಕು ಎಂಬ ಆಶೆಯನ್ನಿಟ್ಟುಕೊಂಡಿರುತ್ತಾರೆಯೋ ಅಷ್ಟು ಮಟ್ಟಿಗೆ ಮುಂದುವರಿಯದೇ ಇರುವುದರಿಂದ ಅವರ ಮನಸ್ಸಿನಲ್ಲಿದ್ದ ಅಭಿಪ್ರಾಯವನ್ನು ಸ್ಪಷ್ಟಪಡಿಸಿದ್ದಾರೆ. ಅವರು ಕೈಗಾರಿಕೆಯ ವಿಚಾರದಲ್ಲಿ ಪೂರ್ಣ ಅನುಭವವನ್ನೇನೋ ಪಡೆದಿದ್ದಾರೆ. ವ್ಯವಸಾಯವನ್ನೇ ಅವಲಂಬಿಸಿಕೊಂಡಿರತಕ್ಕ ರೈತರು ಕೈಗಾರಿಕೆಯಲ್ಲಿ ಹೇಗೆ ಮುಂದುವರಿಯಬೇಕೆಂಬ ವಿಚಾರದಲ್ಲಿ ಉಪಯುಕ್ತ ಸಲಹೆಗಳನ್ನು ಕೊಟ್ಟಿರುತ್ತಾರೆ. ಖಾಸಗೀ ಜನರು ಕೈಗಾರಿಕೋದ್ಯಮದಲ್ಲಿ ತೊಡಗಬೇಕು, ಅದರಲ್ಲಿ ಎಡರುತೊಡರುಗಳು ಬಂದರೆ ಸರ್ಕಾರದವರು ಅದಕ್ಕೆ ನೆರವಾಗಬೇಕು ಎಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದರು. ಕೈಗಾರಿಕಾ ಪ್ರಗತಿಯನ್ನು ಮೈಸೂರು ಸಂಸ್ಥಾನಕ್ಕಾಗಿ ಬೇರೆಯಾಗಿ isolate ಮಾಡಿ ಇಡಲು ಸಾಧ್ಯವಾಗುವುದಿಲ್ಲ. ಈ ಪ್ರಗತಿ ಇಡೀ ಪ್ರಪಂಚದ ರೀತಿ ನೀತಿಯ ಮೇಲೆ ಅವಲಂಬಿಸಿದೆ ಎಂಬುದನ್ನೂ, ಕೈಗಾರಿಕಾ ಪ್ರಗತಿಗೂ moral force ಗೂ ನಿಕಟ ಸಂಬಂಧವಿದೆಯೆಂಬುದನ್ನೂ ನಾನು ಆ ಮಾನ್ಯ ಸದಸ್ಯರಿಗೆ ಒತ್ತಿ ಹೇಳಬೇಕಾಗಿಲ್ಲ. ಇದು ಹೇಗೆ moral force ಮೇಲೆ ಅವಲಂಬನವಾಗಿದೆಯೆಂಬುದನ್ನು ನಾನು ಇಟಲಿಗೆ ಹೋಗಿದ್ದಾಗ ಅಲ್ಲಿ ನೋಡಿದೆ. ಇಟಲಿ ದೇಶ Sericulture ವಿಚಾರದಲ್ಲಿ ಬಹಳ ಮುಂದುವರಿದಿದೆ. ಅಲ್ಲಿ 600 ಲೂಮುಗಳು ಕೆಲಸಮಾಡುತ್ತಿರುವ ಒಂದು ಫ್ಯಾಕ್ಟರಿಯನ್ನು ನೋಡಿದೆ. ಅದು ಕೆಲಸ ಮಾಡದೆ ಮುಚ್ಚಲ್ಪಟ್ಟಿದ್ದು ಅದನ್ನು ಬೇರೊಂದು ಫ್ಯಾಕ್ಟರಿಯನ್ನಾಗಿ ಪರಿವರ್ತನೆ ಗೊಳಿಸುವ ಕಾರ್ಯ ನಡೆಯುತ್ತಿತ್ತು. ಏಕೆ ಹೀಗಾಯಿತೆಂದು ನಾನು ಅವರನ್ನು ಪ್ರಶ್ನಿಸಿದಾಗ ಅವರು ಹೇಳಿದರು, ಪ್ರಪಂಚದಲ್ಲಿಯೇ ಇದಕ್ಕೆ slump ಬಂದಿರುವುದರಿಂದ, ಈ ಕೈಗಾರಿಕೆಗೆ ತೊಂದರೆ ಬಂದಿರುವುದರಿಂದ, ಮೊದಲು ಇಂಡಿಯಾಕ್ಕೆ export ಮಾಡುತ್ತಿದ್ದುದು ಈಗ ನಿಂತುಹೋಗಿರುವುದರಿಂದ ಹೀಗಾಗಿ ಇದನ್ನು ಮುಚ್ಚಿದೆಯೆಂದು. ಈ ಕೈಗಾರಿಕೆಯ ಪ್ರಗತಿಗೆ ಬಂದಿರುವ ಕಷ್ಟವೇನೆಂದರೆ, ಆರ್ಟಿಫಿಷಿಯಲ್ ಸಿಲ್ಕ್, ರೇಯಾನ್ ಸಿಲ್ಕ್ ಎಂಬುದು ಬಂದು, ಇದು ಜನರ ಕಣ್ಣಿಗೆ ಥಳಕ್ಕಾಗಿ ಕಾಣುವುದರಿಂದ, ಅಗ್ಗವಾಗಿ ಸಿಕ್ಕುವುದರಿಂದ ರೇಷ್ಮೆ ಕೈಗಾರಿಕೆಯಲ್ಲಿ ನಿರತರಾಗಿರುವ ಮಧ್ಯಮ ತರಗತಿಯವರಿಗೆ ತೊಂದರೆಯುಂಟಾಗಿದೆ ; ಹೀಗಾಗಿ ಇದು ಖರ್ಚಾಗದೆ ನಿಂತಿದೆ. ಸೆಂಟ್ರಲ್ ಸಿಲ್ಕ್ ಬೋರ್ಡ್‌ನ ಪ್ರತಿಯೊಂದು ಮೀಟಿಂಗಿನಲ್ಲಿಯೂ ಸದಸ್ಯರು ಈ ಸಮಸ್ಯೆಯನ್ನು ಹೇಗೆ ಬಿಡಿಸಬೇಕೆಂಬುದನ್ನು ಯೋಚಿಸುತ್ತಿದ್ದಾರೆ. ಇಂಡಿಯಾ ದೇಶದಲ್ಲಿ ಈ ಆರ್ಟಿಫಿಷಿಯಲ್ ಸಿಲ್ಕ್ ತಯಾರುಮಾಡತಕ್ಕ ಅನೇಕ ಕಂಪೆನಿಗಳು ಸ್ಥಾಪಿತವಾಗಿವೆ. ಈ ವಿಚಾರದಲ್ಲಿ ಇಂಡಿಯಾ ಸರ್ಕಾರದವರು ಮತ್ತು ಟ್ಯಾರಿಫ್ ಬೋರ್ಡಿನವರು ಮುಂದೆ ಯಾವ ರೀತಿ ಮಾಡಬೇಕೆಂಬ ಬಗ್ಗೆ ಯೋಚಿಸುತ್ತಿದ್ದಾರೆ. ಅಲ್ಲದೆ ಈ ಕೈಗಾರಿಕೆ ಮತ್ತು ವಾಣಿಜ್ಯ ವಿಚಾರವನ್ನು ಚೆನ್ನಾಗಿ ಅರಿತಿರುವ ಶ್ರೀ ಕರ್ಮರ್‌ಕರ್‌ರವರ ಸಾಹಸದಿಂದ ಏನೇ ಎಡರುತೊಡರುಗಳು ಬಂದರೂ ಈ ಉದ್ಯಮ ಇನ್ನೂ ತಲೆಯೆತ್ತಿಕೊಂಡಿದೆ ಎಂಬುದನ್ನು ಯಾರೂ ಮರೆಯಬಾರದು.

ಈ ವಿಚಾರದಲ್ಲಿ ಅಂದರೆ ಈ ಕೈಗಾರಿಕಾಭಿವೃದ್ಧಿ ವಿಚಾರದಲ್ಲಿ ಇದು ಕೇಂದ್ರ ಸರ್ಕಾರದ ಸಹಾಯದಿಂದಲೇ ನಡೆಯಬೇಕೆಂಬುದನ್ನು ನಾವೆಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕು.

ಒಬ್ಬ ಸದಸ್ಯರು.—ಈಗೆ ಎರಡು ವರ್ಷಗಳಿಂದ ಈ ಉದ್ಯಮದ ಪ್ರಗತಸಾಧನೆಗೆ ನಮ್ಮ ಸರ್ಕಾರ ಏನು ಮಾಡಿದೆ ?

ಶ್ರೀ ಎಚ್. ಸಿದ್ದವೀರಪ್ಪ.—ಹೇಳುತ್ತೇನೆ. ನಮ್ಮ ಸರ್ಕಾರದವರು ಈ ವಿಚಾರದಲ್ಲಿ ಎರಡು ವರ್ಷಗಳ ಕಾಲದಿಂದ research ವಿಚಾರದಲ್ಲಿ ಮುಂದುವರಿದಿದ್ದಾರೆ. ಅಲ್ಲದೆ ಬಿಳಿಗಿರಿ ರಂಗನ ಬೆಟ್ಟದ ಹತ್ತಿರ ಕೃಷ್ಣರಾಜೇಂದ್ರ ಮಿಲ್‌ನಲ್ಲಿ ಈ ಬಗ್ಗೆ ಕೆಲಸ ಎಷ್ಟು ಮಟ್ಟಿಗೆ ನಡೆದಿದೆ ಯೆಂಬುದು ತಮಗೆಲ್ಲಾ ವೇದ್ಯವಾಗಿದೆ. ದೇಶದಲ್ಲಿ mulberry cultivation ಹೆಚ್ಚಿಸಲು ಸರ್ಕಾರದವರು ಈ ಎರಡು ವರ್ಷಗಳಿಂದ ಎಷ್ಟೊಂದು ಕಾರ್ಯಕ್ರಮವನ್ನು ಕೈಗೊಂಡಿದ್ದಾರೆಂಬುದನ್ನು ಬಡ್ಜೆಟ್ಟನ್ನು ಪರಾಂಬರಿಸಿದರೆ ಕಾರ್ಯವಾಗಿದೆಯೋ ಅಥವಾ ಇಲ್ಲವೇ ಎಂಬುದು ಗೊತ್ತಾಗುತ್ತದೆ. ಇದರ ಪ್ರಕಾರ mulberry cultivation ಗಾಗಿ 1950-51 ರಲ್ಲಿ 90,500, 1951-52 ರಲ್ಲಿ 1,05,000 ಎಕರೆಗಳು, 1952-53 ರಲ್ಲಿ 1,05,000 ಎಕರೆಗಳು ಮತ್ತು 1953-54 ರಲ್ಲಿ 1,05,000 ಎಕರೆಗಳು ಹೀಗಿರುವುದು ನೋಡಿದರೆ progress ಆಗದೆ ಇದ್ದರೂ ಈಗಿರುವ slump ನಲ್ಲಿ ಸಹ retard ಆಗದೇ ಇರುವುದು ಒಂದು ವಿಧದಲ್ಲಿ progress ಆಗಿದೆಯೆಂದೇ ತಿಳಿಯಬಹುದಾಗಿದೆ. ಅಲ್ಲದೆ ರೇಷ್ಮೆ ಉತ್ಪನ್ನದಲ್ಲಿಯೂ ಸಹ 1950–51 ರಲ್ಲಿ 14 ಲಕ್ಷಪೌಂಡುಗಳಷ್ಟಿದ್ದದ್ದು, 1952-53ರಲ್ಲಿ 15 ಲಕ್ಷ ಪೌಂಡುಗಳಷ್ಟಾಗಿದೆ.

ಶ್ರೀ ಎಂ. ರಾಜಶೇಖರ ಮೂರ್ತಿ.—ಹಿಲ್ ಸ್ಟೇಷನ್ ಮೇಲೆ ಬಿಲ್ಡಿಂಗ್ ಆಗಿದೆಯೇ ? ಈ ವಿಚಾರ ಹತ್ತಾರು ವರ್ಷಗಳಿಂದ ಹಾಗೆಯೇ ಇದೆ.

ಶ್ರೀ ಎಚ್. ಸಿದ್ದವೀರಪ್ಪ.—ಈ ವಿಚಾರದಲ್ಲಿ ಸ್ವಲ್ಪ ಮಟ್ಟಿಗೆ ನಿಧಾನವಾಗಿದೆಯೆಂಬುದನ್ನು ಒಪ್ಪಿಕೊಳ್ಳುವುದರಲ್ಲಿ ತಪ್ಪಿಲ್ಲ. In some cases there is avoidable delay ಎಂಬುದು ಸರ್ಕಾರದ ಗಮನಕ್ಕೆ ಬಂದು ಈ ವಿಚಾರದಲ್ಲಿ ಶೀಘ್ರವಾದ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿರುತ್ತೇನೆ.

Sri M. RAJASEKHARA MURTHY.—Just now you were pleased to state that the production of raw silk in 1952-53 was 14 lakhs of pounds. But I have certain figures with me. The filature silk production is 84,300 lbs. and the charka silk production is about 12 lakhs 5,674 lbs. and the total is 12 lakhs, 89,947 lbs. It is reduced in 1952-53.

Mr. SPEAKER.—For 1952-53 he gave the figures.

Sri H. SIDDAVEERAPPA.—For 1953-54 I have not got the figures with me. Anyhow I will examine it and if I am wrong, I am prepared to correct it.

Mr. SPEAKER.—From 14 lakhs of pounds it has gone up to 15 lakhs of pounds, that is what you say?

Sri H. SIDDAVEERAPPA.—Yes. ಹಿಲ್ ಸ್ಟೇಷನ್ನಲ್ಲಿ ಮನೆಗಳು ಆಗಿವೆಯೋ, ಇಲ್ಲವೋ ಎಂಬ ವಿಚಾರದಲ್ಲಿ ಮಾನ್ಯ ಮಿತ್ರರು ಪ್ರಸ್ತಾಪಿಸಿದರು. ಬಿಳಿಗಿರಿರಂಗನ ಬೆಟ್ಟದಮೇಲೆ ಈ ಬಗ್ಗೆ ಕಾರ್ಯಕ್ರಮವನ್ನು ಪೂರ್ತಿಯಾಗಿ ಕೈಕೊಂಡಿದೆ. K.R. ಹಿಲ್ಸ್‌ನಲ್ಲಿ sanction ಆಗಿ, ಆ ಬಗ್ಗೆ ಕಾರ್ಯಕ್ರಮ ತ್ವರಿತವಾಗಿ ನಡೆಯುತ್ತಿದೆ. ಆದಷ್ಟು ಜಾಗ್ರತೆ ಪೂರ್ತಿ ಮಾಡಬೇಕೆಂದಿದೆ. ಇನ್ನೊಂದು ಜಾಗವಿದೆ. ಅದು ಮೊದಲು ಹಾರ್ಟಿಕಲ್ಚರಲ್ ಇಲಾಖೆಗೆ ಸೇರಿತ್ತು. ಈಗ ಆ ಬಿಲ್ಡಿಂಗ್ ಆಗುವವರೆಗೆ ಈ ಹಾರ್ಟಿಕಲ್ಚರ್ ಇಲಾಖೆಗೆ ಸೇರಿದುದು ಉಪಯುಕ್ತವಾದ ಬಿಲ್ಡಿಂಗು, ಅದನ್ನು ತೆಗೆದುಕೊಳ್ಳಬೇಕೆಂದು ತಿಳಿಸಿರುತ್ತೇನೆ.

ಇನ್ನು Loans ಎಷ್ಟು ಇದೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ಪರಿಶೀಲಿಸಿದುದೇ ಆದರೆ, 1950-51 ರಲ್ಲಿ 25 ಸಾವಿರ ಇದ್ದುದು ಪ್ರಕೃತ ಸಾಲನಲ್ಲಿ 50 ಸಾವಿರದವರೆಗೆ ಏರಿದೆ. ಇವುಗಳನ್ನೆಲ್ಲಾ ಗಣನೆಗೆ ತೆಗೆದುಕೊಂಡರೆ ಶೇಕಡ 40ರಷ್ಟು total demand ಮಾತ್ರ meet ಮಾಡಲು ಸಾಧ್ಯವಾಗಿದೆ. ಈ ಅಂಶವನ್ನು ಹೇಳುವಾಗ ತಮ್ಮೆಲ್ಲರ ಮನಸ್ಸಿನಲ್ಲಿ ಒಂದು ಶಂಕೆ ಬಂದಿರಬಹುದೆಂದು ನನಗೆ ತೋರುತ್ತದೆ: ಇದೇನು ಈ ಬಗ್ಗೆ legislation ಇನ್ನೂ ಜಾರಿಗೆ ಬಂದಿಲ್ಲವಲ್ಲಾ, ಇದಕ್ಕೇನು ಕಾರಣ ಎಂದು. ನಾನು ತಮಗೆ ಡೀಟೇಲ್‌ವಾರಾಗಿ ಈ ಬಗ್ಗೆ ಯಾವ ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿದೆಯೆಂಬುದನ್ನು ಇದಕ್ಕೆ ಸಂಬಂಧಿಸಿದ legislation pass ಆದಮೇಲೆ ಹೇಳುತ್ತೇನೆ. ಇದಕ್ಕೆ ಸಂಬಂಧಪಟ್ಟ ಇಲಾಖೆಯಲ್ಲಿ ಎಲ್ಲಿ ನಿಧಾನವಾಗಿದೆಯೆಂದು ಕಂಡುಬಂದಿದೆಯೋ ಅಲ್ಲಿ ಇದನ್ನು ತ್ವರಿತಗೊಳಿಸಿ, ನೋಟಿಫಿಕೇಷನ್ ಸಹ issue ಮಾಡಿ, ಪುನಃ ಇದು ಸೆಲೆಕ್ಟ್ ಕಮಿಟಿ ಪರಿಶೀಲನೆಗೆ ಹೋಗಿ ಅಲ್ಲಿಗೆ ನಿಂತಿದೆ. ಈ ಸ್ಟೇಜ್‌ನಲ್ಲಿದೆಯೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ವಿಚಾರದಲ್ಲಿ ತಡವಾಗಿದೆಯೆಂಬು ಒಪ್ಪಿಕೊಳ್ಳುವುದರಲ್ಲಿ ಅಭ್ಯಂತರವಿಲ್ಲ. ಆದರೆ ಇನ್ನೂ ಈ ರೀತಿ ತಡವಾಗುವುದಕ್ಕೆ ಅವಕಾಶ ಕೊಡದೆ ಆದಷ್ಟು ಜಾಗ್ರತೆ ಈ ವಿಚಾರದಲ್ಲಿ ಕಾರ್ಯಕ್ರಮ ಕೈಗೊಳ್ಳುತ್ತೇನೆಂದು ತಮಗೆ ಈ ಸಮಯದಲ್ಲಿ ಭರವಸೆ ಕೊಡುತ್ತೇನೆ.

ಶ್ರೀ ಪಾಪಣ್ಣನವರಿಗೆ ಅರಿಕೆ ಮಾಡುವುದು ಇಷ್ಟು: ಡಿಪಾರ್ಟ್‌ಮೆಂಟಿನವರು ಈ ವಿಚಾರದಲ್ಲಿ ಮನಃಪೂರ್ವಕವಾಗಿ ಕೆಲಸ ಮಾಡಬೇಕೆಂಬ ಅಭಿಪ್ರಾಯವುಳ್ಳವರಾಗಿದ್ದಾರೆ, ಸರ್ಕಾರದವರಿಗೂ ಈ ವಿಚಾರದಲ್ಲಿ ನಿರ್ಲಕ್ಷ್ಯವಿಲ್ಲ, ಅವರಿಗೆ ಅಲಕ್ಷ್ಯ ಮಾಡಬೇಕೆಂಬ ಮನೋಭಾವ ಖಂಡಿತವಾಗಿಯೂ ಇಲ್ಲ ಎಂಬುದನ್ನು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ರಾಜಶೇಖರ ಮೂರ್ತಿಯವರು ರೇಷ್ಮೆ ಗೂಡಿನ ಧಾರಣೆ ಹೆಚ್ಚು ಹೆಚ್ಚಾಗುತ್ತಾ ಇರುವ ವಿಚಾರವನ್ನು ತಿಳಿಸಿದರು. ಇದನ್ನು ವಿಚಾರಿಸಿದ್ದೇನೆ. ಬಹುಶಃ demand and supply ಮೇಲೆ ನಿರೀಕ್ಷಣೆಗಿಂತ ಹೆಚ್ಚಾಗಿ ಬಂದಿರುವುದರಿಂದ ಹೀಗಾಗಿದೆ. ಇದನ್ನು ಸರಿಪಡಿಸಬೇಕು, ಈ ರೀತಿ unregulated ಆಗಿ ಬಿಡುವುದು ಸರಿಯಲ್ಲ ಎಂಬ ಅಂಶವನ್ನು ಸಂಬಂಧಪಟ್ಟ ಇಲಾಖೆಗೆ ತಿಳಿಸಿದ್ದೇನೆ. ಬಹುಶಃ ಈ ಸಂಬಂಧದ legislation ಬರುವ ವೇಳೆಗೆ ಇದು ಸರಿಹೋಗಬಹುದು.

ಶ್ರೀ ಬಿ. ಪಿ. ನಾಗರಾಜಮೂರ್ತಿಯವರು Regulated Market ವಿಚಾರ ಪ್ರಸ್ತಾಪಿಸಿದರು. ಈ ವಿಚಾರದಲ್ಲಿ cost of production ಆದಷ್ಟು ಕಡಿಮೆಮಾಡಿಕೊಳ್ಳುವುದಕ್ಕೆ ಏನು ಕಾರ್ಯಕ್ರಮ ಕೈಗೊಳ್ಳಬೇಕೆಂಬ ಬಗ್ಗೆ expert committee ಯೊಂದು ನೇಮಕವಾಗಿದೆ. ಅವರ ಸಲಹೆಗಳನ್ನು ಸರ್ಕಾರದವರು ಪರಿಶೀಲಿಸಿ, ಭಾರತದ ಇತರ ಭಾಗಗಳಲ್ಲಿ ಈ ಬಗ್ಗೆ ಯಾವ ರೀತಿಯ ವ್ಯವಸ್ಥೆಯಿದೆ ಎಂಬುದನ್ನು ಪರಿಶೀಲನೆಗೆ ತೆಗೆದುಕೊಂಡು ತೀರ್ಮಾನಕ್ಕೆ ಬರುತ್ತಾರೆ. ಈ ಬಗ್ಗೆ ಜಪಾನಿನಿಂದ ಮೋಟಾರು ತರಿಸಿ ಟಿ.-ನರಸೀಪುರದಲ್ಲಿ ಸ್ಥಾಪಿಸಿದರೆ ಅನುಕೂಲವಾಗುತ್ತದೆ ಎಂಬ ಅಭಿಪ್ರಾಯಕೂಡ

ಸರ್ಕಾರದ ಗಮನಕ್ಕೆ ಬಂದಿದೆ. ಇಷ್ಟೇ ಅಲ್ಲದೆ Research Station ಬಲಪಡಿಸಬೇಕು. ಇಲ್ಲಿಯು ಕೆಲಸ ಕಾರ್ಯಗಳನ್ನು ಮತ್ತಷ್ಟು ಹುರುಪುಗೊಳಿಸಲು ಸೆಂಟ್ರಲ್ ಸಿಲ್ಕ್ ಬೋರ್ಡಿನಿಂದ ಫಂಡ್ ಕೇಳಿರುತ್ತೇವೆ. ಬಹುಶಃ ಬರುವ ವರ್ಷ ಈ ಬಗ್ಗೆ ಹೆಚ್ಚಿನ ಕಾರ್ಯ ಸಾಧನೆ ಆಗಿರುತ್ತದೆಂದು ಹೇಳಿದರೆ ತಮ್ಮೆಲ್ಲರ ಮನಸ್ಸಿಗೆ ಒಪ್ಪಿಗೆ ಆದೀತು ಎಂದು ನಿರೀಕ್ಷಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

4-30 P.M.

Mr. SPEAKER.—The question is:

"That a sum not exceeding Rs. 11,18,200 be granted to the Government to defray the charges which will come in course of payment during the year ending 31st day of March 1955 in respect of 'Sericulture'."

The motion was adopted.

DEMAND No. 41—INDUSTRIAL DEVELOPMENT.

72. CAPITAL OUTLAY ON INDUSTRIAL DEVELOPMENT.

Mr. SPEAKER.—Motion moved:

"That a sum not exceeding Rs. 1,81,30,000 be granted to the Government to defray the charges which will come in course of payment during the year ending 31st day of March 1955 in respect of 'Capital Outlay on Industrial Development'."

Sri M. PALANIYAPPAN (Ulsoor).—Sir, during the last Budget speech, I referred to the question of nationalisation of the Bangalore Transport Co. and I said so for more than one reason. The B. T. C. in Bangalore has been started in the year 1940. Since that year no private buses are allowed to operate in Bangalore City and entire monopoly has been given to this one company in order to cater to the needs of traffic in Bangalore City. Sir, since 1940 till today the City has grown by leaps and bounds and the population has increased many-fold ; and in spite of that we see that this transport organisation has not improved in any manner. Everyday we see that the citizens are put to hardship by being made to wait hours together at every bus-stand. If anybody wants to go from one place to the other in Bangalore City there is no proper facility and no other conveyance is available. If at all, the citizen is forced to hire a taxi which is so costly for the poor man. It is the duty of the Government to provide for better travel facilities to the citizens of Bangalore and I suggest that it is high time that the Government come to the aid of the poor citizens by nationalising this concern. Sir, apart from providing facilities for the people . . . .

Mr. SPEAKER.—You will not be given more than five minutes. At the rate of five minutes to each, only four Hon'ble Members can be given chances. You can mention only points. You cannot make a detailed speech.

Sri M. PALANIYAPPAN.—Sir, if the B. T. C. is taken over by Government, it would not only help the poor citizens, but incidentally it would also bring in a revenue of more than 20 lakhs per year to the Government. In respect of Government Road Transport, this morning answers were furnished by Government that in spite of heavy depreciation on 193 buses, they are still able to get a little profit, a return of 10 per cent on their capital. I sincerely feel that the B. T. C. if nationalised would add to the exchequer. I am glad to note that the Government have made a token grant of one lakh towards this in the Budget. I only hope that the Government will boldly go ahead with this nationalisation scheme without yielding to influences of big business magnates who are interested in the B. T. C. With these few words, I trust, Sir, that the Government will take up the issue of nationalisation immediately and relieve the hardship of the people living in this City.

Sri R. ANANTARAMAN (Chamarajapet).—Sir, I really thank my friend Sri Palaniyappan for having elicited more information about the B. T. C. The gross revenue for the Government during 1953 was 26,79,644 and the net profit was 1,10,862. Sir, I was informed by the Hon'ble Minister the other day that 75 per cent of the money is kept apart for depreciation

(SRI R. ANANTARAMAN.)

fund; and I asked one official of the B.T.C. and he told me that since Government are not likely to extend the monopoly, they are not willing to have more buses and that is why they have kept money ready at their disposal. That is the explanation given by some of the officials of that concern. Now the Bangalore Road Transport System is known to good many Hon'ble members to be very bad and it is not possible to get a seat in the bus; everyday it is full. There are only about 120 buses plying in the city for a population of nearly nine lakhs. This B. T. C. has of late been running buses to Kengeri and Yelahanka and other places. It is clear that the needs of the City are growing and in order to cater to these needs the B.T.C. must put more buses on the road and for that, they must take out money from their depreciation fund and buy more buses. The B.T.C. is not going to do this unless it is sure of getting their monopoly extended for a further term, because they know that the question of nationalisation is pending with Government. This is putting the public at large in great trouble and difficulty. It is therefore better that the Government takes a quick decision on this question.

Another point is, now the Government are trying to monopolise certain routes outside Bangalore City. I would tell them, Sir, it is better they concentrate their attention in Bangalore City because they are having the General Manager here and the roads are in very good condition. They are tarred and most of them are cemented also. This means that wear and tear will also be reduced to the minimum and it will be very easy for them to run buses in the City. I can even say that if only they nationalise, the Government can even get twice the income. So instead of thinking of having some other routes monopolised, it is better Government concentrate their attention on the city traffic, nationalise B.T.C. and employ more persons and give relief to the travelling public of Bangalore. In fact one of the complaints that people coming from outside the State make is about the City transport and it is really in a bad condition as against what is obtaining in Madras or Bombay.

With these few words, I recommend to the Government that the B.T.C. may be nationalised as early as possible.

ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ—ಅನುಸೂಚಿತ ಜಾತಿಗಳು).—ಸ್ವಾಮಿ, ನಾನು ಈ ಬಿ.ಟಿ.ಸಿ. ಬಸ್ಸಿನಲ್ಲಿ ದಿನವಹಿ ತಿರುಗಾಡತಕ್ಕವನು. ಈ ಬಿ.ಟಿ.ಸಿ. ಬಸ್ಸುಗಳು ಎಷ್ಟು ಅವ್ಯವಸ್ಥಿತವಾಗಿವೆ ಎಂದರೆ ಅದನ್ನು ಬಾಯಿಂದ ಹೇಳುವುದಕ್ಕೆ ಸಾಧ್ಯವಿಲ್ಲ. ಅದರಲ್ಲಿ ಓಡಾಡುವವರಿಗೇ ಅದರ ಕಷ್ಟಸುಖ ಗೊತ್ತು. ಆದ್ದರಿಂದ ಅವುಗಳನ್ನೆಲ್ಲಾ ಮೊದಲೇ ಮನಾಪಲಿ ಮಾಡಿಕೊಂಡು ರಾಷ್ಟ್ರೀಕರಣ ಮಾಡಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಈ ಖಾಸಗೀ ಬಸ್ ಮಾಲೀಕರೇನಿದ್ದಾರೋ ಅವರಿಗಾಗಬಹುದಾಗಿದ್ದ ಅನ್ಯಾಯವನ್ನು ಸಹ ಆದಷ್ಟು ಕಡಿಮೆಮಾಡಬಹುದಾಗಿತ್ತು. ಈಗಲಾದರೂ ಸರ್ಕಾರ ತ್ವರಿತವಾಗಿ ಬಿ.ಟಿ.ಸಿ. ಬಸ್ಸುಗಳ ರಾಷ್ಟ್ರೀಕರಣಮಾಡಬೇಕಾದದ್ದು ಅತ್ಯಗತ್ಯ. ಅದರಲ್ಲೂ ಮುಖ್ಯವಾಗಿ ಈ ಬಸ್ಸುಗಳಲ್ಲಿರುವ ಕಂಡಕ್ಟರುಗಳು ಮತ್ತು ಇನ್ಸ್‌ಪೆಕ್ಟರುಗಳು ಪ್ರಯಾಣಿಕರಿಗೆ ಬಹಳ ಅನಾನುಕೂಲಮಾಡುತ್ತಾರೆ. ಆದ್ದರಿಂದ ಈ ಕಂಪನಿಯನ್ನು ಆದಷ್ಟು ಜಾಗ್ರತೆ ಸರ್ಕಾರ ರಾಷ್ಟ್ರೀಕರಣಮಾಡಬೇಕು.

ಎರಡನೆಯದಾಗಿ ಸರ್ಕಾರ ಮೈಸೂರು ಸಂಸ್ಥಾನದ ಅನೇಕ ರಸ್ತೆಗಳನ್ನು ಮನಾಪಲಿ ಮಾಡಿಕೊಂಡಿರುವುದು ಒಪ್ಪತಕ್ಕ ನೀತಿ. ಆದರೆ ದೂರ ಹೋಗುವ ಬಸ್ಸುಗಳಲ್ಲಿ ಜನರಿಗೆ ಆದಷ್ಟು ಸೌಕರ್ಯ ಮಾಡಿಕೊಡುತ್ತಿಲ್ಲ. ಒಂದು ಉದಾಹರಣೆ ಕೊಡಬೇಕಾದರೆ, ಕೃಷ್ಣರಾಜಪುರದಿಂದ ಬೆಂಗಳೂರಿಗೆ ಒಂದು ಸರ್ಕಾರದ ಬಸ್ಸಿದೆ. ಈ ಬಸ್ಸು ಬಹಳ ಹಳೆಯದು, ಅನೇಕವೇಳೆ ಮಧ್ಯೆ ನಿಲ್ಲುತ್ತದೆ. ಹೀಗೆ ಸತತವಾಗಿ ಮನಾಪಲಿ ಪದ್ಧತಿಯಿಂದ ಎಲ್ಲಿ ಅನಾನುಕೂಲವಾಗಿದೆಯೋ ಅಂಥ ಕಡೆಯಿರುವ ಬಸ್ಸು ಲೈನುಗಳನ್ನು ಖಾಸಗಿಯ ಬಸ್ಸು ಮಾಲೀಕರಿಗೆ ಕೊಡುವುದು ಒಳ್ಳೆಯದು.

Sri H. K. SHIVARUDRAPPA (Gundlupet—Heggadadevankote).—I raise a point of order. How is it relevant, Sir?

Sri B. T. KEMPARAJ.—It is regarding Road Transport.

Mr. SPEAKER.—Yes, it has some bearing.

ಶ್ರೀ ಬಿ. ಟಿ. ಕೆಂಪರಾಜ್.—ಆದ್ದರಿಂದ ಬೆಂಗಳೂರು ಸಿಟಿ ಹತ್ತಿರವಿರುವ ಹಳ್ಳಿಗಳಿಗೆ ಬಿ.ಟಿ.ಸಿ ಕಂಪನಿ ಮನಾಪಲಿಮಾಡಿ ಸರ್ಕಾರದಿಂದ ಬಸ್ಸನ್ನು ಓಡಿಸುವುದು ಒಳ್ಳೆಯದೆಂದು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ.

ಶ್ರೀ ಬಿ. ರಾಚಯ್ಯ (ಎಳಂದೂರು—ಅನುಸೂಚಿತ ಜಾತಿಗಳು).—ಸ್ವಾಮಿ, ಮೈಸೂರು ಡಿಸ್ಟ್ರಿಕ್ಟಿನ ತಲಕಾಡು ಬಹಳ ಹೆಸರುವಾಸಿಯಾದ ಸ್ಥಳವಾಗಿದೆ ಮತ್ತು ಚರಿತ್ರಾರ್ಹವಾದ ಸ್ಥಳವೂ ಆಗಿದೆ. ಅಲ್ಲಿ ಯಥೇಚ್ಛವಾಗಿ ಮರಳುಗುಡ್ಡೆ ಕಾಣಬರುವುದನ್ನು ನಾವೆಲ್ಲರೂ ನೋಡಿದ್ದೇವೆ. ಆ ತಲಕಾಡಿನಲ್ಲಿ ಗ್ಲಾಸ್ ಫ್ಯಾಕ್ಟರಿಯನ್ನು ಸ್ಥಾಪಿಸಲು ಏನೇನು ಸೌಲಭ್ಯ ಬೇಕೋ ಅದೆಲ್ಲವೂ ಕೂಡ ಸಿಕ್ಕುತ್ತದೆ. ಮತ್ತು ಅಲ್ಲಿ ಸಿಕ್ಕುವ ಮರಳು ಬಹಳ ದೃಢ

ವಾಗಿಯೂ ಒಳ್ಳೆಯ ದರ್ಜೆಯದಾಗಿಯೂ ಇದೆ. ಈ ವಿಷಯದಲ್ಲಿ ಹಿಂದೆ ಒಂದು ಸಲ ಇನ್‌ವೆಸ್ಟಿಗೇಷನ್ ಆಗಿತ್ತೆಂದು ಶ್ರೀ ಶ್ರೀನಿವಾಸಯ್ಯಂಗಾರ್‌ರವರು ಹೇಳುತ್ತಾರೆ. ಆದ್ದರಿಂದ ಈಗ ಮೈಸೂರು ಡಿಸ್ಟ್ರಿಕ್ಟಿನ ತಲಕಾಡು ಪ್ರದೇಶದಲ್ಲಿ ಒಂದು ಗ್ಲಾಸ್ ಇನ್‌ಡಸ್ಟ್ರಿ ತೆರೆಯುವುದು ಅಲ್ಲಿನ ಜನರಿಗೆ ಹೆಚ್ಚಿನ ಕೆಲಸ ಒದಗಿಸುವುದಕ್ಕೂ ಅನುಕೂಲವಾಗುತ್ತದೆ ಮತ್ತು ತಯಾರಾಗತಕ್ಕಂಥ ಗ್ಲಾಸೂ ಸಹ ಒಳ್ಳೆಯ ಉತ್ತಮದರ್ಜೆಯ ಗ್ಲಾಸಾಗಿರುತ್ತದೆ. ಇಲ್ಲಿ ಆದಷ್ಟು ಬೇಗ ಈ ಇನ್‌ಡಸ್ಟ್ರಿಯನ್ನು ತೆರೆಯಲು ಸರ್ಕಾರ ಬೇಗ ಕಾರ್ಯಕ್ರಮ ಕೈಗೊಳ್ಳಬೇಕೆಂದು ಈ ಡಿಮ್ಯಾಂಡ್ ಮನವಿಯ ಮೇಲೆ ಮಾತನಾಡುತ್ತಾ ಹೇಳುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).— ಸ್ವಾಮಿ, ದೇಶ ಮುಂದುವರಿಯಬೇಕಾದ ಕೈಗಾರಿಕಾ ಪಾಠಶಾಲೆಗಳು ಜಾಸ್ತಿಯಾಗಬೇಕು, ಕೈಗಾರಿಕೋದ್ಯಮ ಜಾಸ್ತಿಯಾಗಬೇಕು. ಇಂಡಿಯಾ ದೇಶದಲ್ಲಿ ನೋಡಿದರೆ ವರ್ಷಕ್ಕೆ 10 ಲಕ್ಷ ಸೈಕಲುಗಳು ಭಾರತಕ್ಕೆ ಬೇಕೆಂದು ಹೇಳುತ್ತಾರೆ. ಈಗ ಇಂಡಿಯಾದಲ್ಲಿರುವ ಕೈಗಾರಿಕೆ ಸಂಸ್ಥೆಗಳಲ್ಲಿ 5 ಲಕ್ಷ ಸೈಕಲುಗಳು ಮಾತ್ರ ತಯಾರಾಗುತ್ತಿವೆಯೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿರುವುದನ್ನು ನೋಡಿದಂತೆ ಜ್ಞಾಪಕವಿದೆ. ಆದ್ದರಿಂದ ಒಂದುವೇಳೆ ಹೊಸ ಕಾರ್ಖಾನೆಯನ್ನು ಈ ಸಂದರ್ಭದಲ್ಲಿ ಸ್ಥಾಪನೆಮಾಡುವುದಾದರೆ ಅದನ್ನು ಮೈಸೂರು ದೇಶದಲ್ಲೇ ಮಾಡುವಂತೆ ಸರ್ಕಾರ ಏರ್ಪಾಡು ಮಾಡಬೇಕೆಂದು ಮನವಿಮಾಡುತ್ತೇನೆ.

ಈಗ ಒಂದು ಉದಾಹರಣೆ ತೆಗೆದುಕೊಂಡರೆ, ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮತ್ತು ತುಮಕೂರು ಜಿಲ್ಲೆಯಲ್ಲಿ ಕಾಯಿಕೊಬ್ಬರಿ ಹೆಚ್ಚಾಗಿದೆ. ಅಲ್ಲಿ ಒಂದು ಕಾರ್ಖಾನೆಯಾಗಬೇಕೆಂದು ಹಿಂದೆಯೇ ಮನವಿ ಮಾಡಿದ್ದೇವೆ. ಮೈಸೂರು ದೇಶದಲ್ಲಿ ಹೆಚ್ಚಾಗಿ ತೆಂಗಿನ ಕಾಯಿ ಉತ್ಪತ್ತಿಯಾಗುವ ಕಡೆ ನಾರು ಸಿಕ್ಕುತ್ತದೆ. ತುಮಕೂರು, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆಯ ಕೆಲವುಭಾಗ, ಹಾಸನ ಜಿಲ್ಲೆಯ ಒಂದುಭಾಗ, ಅರಸೀಕೆರೆ ತಾಲ್ಲೂಕು ಇಂಥಕಡೆ ಕಾಯಿರ್ ನಾರಿನ ಇಂಡಸ್ಟ್ರಿ ತೆರೆಯಬೇಕು. ಇಲ್ಲೆಲ್ಲಾ ಈ ಕೈಗಾರಿಕೆಗೆ ಬೇಕಾದ ನಾರು ಸಿಕ್ಕುತ್ತದೆ. ಅದರಿಂದ ಬೇಸಾಯಕ್ಕೆ ಬೇಕಾದ ಸಾಮಾನುಗಳನ್ನು ತಯಾರಿಸಬಹುದು. ಈ ನಾರಿನಿಂದ ಹಗ್ಗ, ಹುರಿ ಮುಂತಾದುವನ್ನು ತಯಾರಿಸಬಹುದು. ಈ ಪ್ರದೇಶದಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳನ್ನು ಮಾಡಿದರೆ ಅದಕ್ಕೆ ಬೇಕಾದ ನಾರು, ಹುರಿ ವಗೈರೆ ಜನರು ಒದಗಿಸುತ್ತಾರೆ. ಇದಲ್ಲದೆ ನಿರುದ್ಯೋಗಸಮಸ್ಯೆ ಬಗೆಹರಿಯಬೇಕಾದರೆ ಈ ಮೂರು ಜಿಲ್ಲೆಗಳಲ್ಲಿ ಯಾವುದಾದರೂ ಒಂದು ಜಾಗದಲ್ಲಿ ನಾರಿನ ಕೈಗಾರಿಕೆಯನ್ನು ಏರ್ಪಾಡು ಮಾಡಬೇಕು.

ಬಡ್ಜೆಟ್ಟಿನಲ್ಲಿ ಹೋದಸಲ ಚಿಕ್ಕಮಗಳೂರು ಜಿಲ್ಲೆಯಲ್ಲಿ ಆಕ್ಯುಪೇಷನಲ್ ಇನ್‌ಸ್ಟಿಟ್ಯೂಟನ್ನು ತೆರೆಯಬೇಕೆಂದು ಹಣ ಒದಗಿಸಬೇಕೆಂದು ಮನವಿಮಾಡಿತ್ತು. ಜಿಲ್ಲಾ ಬೋರ್ಡ್ ಸಹ ಇದಕ್ಕೆ ಹಣ ಕೊಡಲು ಒಪ್ಪಿದೆ. ಬೀರೂರು ಮುನಿಸಿಪಾಲಿಟಿಯವರೂ ಸಹ ಸಹಾಯ ಮಾಡುವುದಾಗಿ ಅನೇಕಸಲ ಹೇಳಿದ್ದರೂ ಸರ್ಕಾರ ಬೆಂಗಳೂರು ಮೈಸೂರು ನಗರಗಳಿಗೇ, ಹೆಚ್ಚು ಜನ ಸಂಖ್ಯೆಯಿರುವ ಜಾಗಗಳಿಗೇ ಗಮನಕೊಡುತ್ತಾ ಇದ್ದಾರೆಯೇ ಹೊರತು ಇತರಕಡೆಗಳಿಗೆ ಗಮನ ಸಾಕಷ್ಟು ಕೊಡುತ್ತಿಲ್ಲ. ಈಗಲಾದರೂ ಮಲೆನಾಡು ಜಿಲ್ಲೆಗೆ ಸಹಾಯ ನೀಡಲು ಮುಂದೆಬರಬೇಕು. ಆದಷ್ಟುಮಟ್ಟಿಗೆ ಮಲೆನಾಡಿನ ಜಿಲ್ಲೆಗಳಿಗೂ ಮತ್ತು ನಮ್ಮ ತಾಲ್ಲೂಕಿಗೂ ಹೆಚ್ಚು ಗಮನಕೊಡಬೇಕು. ನಮ್ಮ ಕಡೆಯ ಮಂತ್ರಿಗಳು ಕೂಡ ಇಲ್ಲ. ಆದ್ದರಿಂದ ಆಕಡೆ ಗಮನಕೂಡ ಕಡಮೆಯಾಗಿದೆ. ಈಗಲಾದರೂ ಮಾನ್ಯ ಮಂತ್ರಿಗಳು ನಮ್ಮ ಜಿಲ್ಲೆಯಮೇಲೆ ಅಭಿಮಾನವಿಟ್ಟು ನಮ್ಮ ಮಲೆನಾಡು ಜಿಲ್ಲೆಗಳಿಗೆ ಉದ್ಯೋಗ ಕಲ್ಪಿಸಲು ಆವಶ್ಯಕವಾದ ನಾರು ಮತ್ತು ಹಗ್ಗ ತಯಾರಿಸುವ ಕಾರ್ಖಾನೆಗಳನ್ನು ಅಲ್ಲಿ ತೆರೆಯಬೇಕಾಗಿ ಕೋರುತ್ತೇನೆ.

ಶ್ರೀ ಪಿ. ಆರ್. ನಾಯ್ಡು (ಮಲ್ಲೇಶ್ವರ).— ಬಿ.ಟಿ.ಸಿ. ರಾಷ್ಟ್ರೀಕರಣಮಾಡುವ ವಿಷಯದಲ್ಲಿ ಮಾನ್ಯ ಮಿತ್ರರು ಬಹಳ ದೀರ್ಘವಾಗಿ ಮಾತನಾಡಿದ್ದಾರೆ. ಆ ಕಂಪನಿಯಲ್ಲಿ ದಕ್ಷತೆಯಿಂದ ಕೆಲಸ ನಡೆಯುತ್ತಿದೆ, ಶ್ರೀ ಕೆ. ಆರ್. ಮಾಧವರಾಯರ ನೇತೃತ್ವದಲ್ಲಿ ಅಲ್ಲಿ ಕೆಲಸ ಸಮರ್ಪಕವಾಗಿ ನಡೆಯುತ್ತಿದೆ ಎಂಬುದು ಎಲ್ಲರೂ ಒಪ್ಪಿಕೊಳ್ಳುವ ವಿಷಯವೇ ಆಗಿದೆ. ಹಿಂದಿದ್ದುದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಅದು ನಡೆಯುತ್ತಿದೆಯೆಂಬುದನ್ನು ಬರೀ ಅಂಕಿಅಂಶಗಳಿಂದಲೂ ತಿಳಿಯಬಹುದು. ಅದರ ಮ್ಯಾನೇಜ್‌ಮೆಂಟ್ ಕೂಡ ಬಹಳ ಉತ್ತಮವಾಗಿದೆ.

ಎರಡನೆಯದು, ಈಗ ದರ ಬಹಳ ಜಾಸ್ತಿಯಾಗಿದೆ. ಬೊಂಬಾಯಿ, ಕಲ್ಕತ್ತ, ಡೆಲ್ಲಿ ಇಂಥಕಡೆ ಎರಡಾಣೆ ಕೊಟ್ಟರೆ 14 ಮೈಲಿಗಳ ಪ್ರಯಾಣಮಾಡಬಹುದು. ಅದೇ ಸೌಲಭ್ಯ ಬೆಂಗಳೂರಿಗೂ ದೊರೆಯಬೇಕು. ಈಗಿರುವ ಕಾಂಗ್ರೆಸ್ ಸರ್ಕಾರದವರು ಆಡಳಿತವನ್ನು ಒಂದು ಒಳ್ಳೆಯ ತತ್ವದ ಆಧಾರದ ಮೇಲೆ ದೇಶದ ಕಷ್ಟಸುಖ ತಿಳಿದು ಸರಿಯಾಗಿ ನಡೆಸುತ್ತಿದ್ದಾರೆ. ಆದ್ದರಿಂದ ರಾಷ್ಟ್ರೀಕರಣಮಾಡಬೇಕಾದ್ದು ಅಗತ್ಯ. ದೇಶದಲ್ಲಿ ಟ್ರಾನ್ಸ್‌ಪೋರ್ಟ್ ಸೌಕರ್ಯ ಬಡಜನರಿಗೆ ಅಗತ್ಯವಾಗಿದೆ. ಅದನ್ನು ಸರಿಯಾಗಿ ನಡೆಸಬೇಕೆಂದು ಸೂಚಿಸಿ ಈಗಿರುವ ಮ್ಯಾನೇಜ್‌ಮೆಂಟಿನವರನ್ನು ಬಹಳವಾಗಿ ವಂದಿಸುತ್ತೇನೆ.

Sri M. V. RAMA RAO (Tumkur).— Sir, I have only one observation to make with respect to the provision that is made for the investment on the Bellara Gold Mine in Tumkur District. A provision of two lakhs of rupees has been made for the coming year. I find that a provision of four lakhs had been made for the year 53-54 in which a sum of Rs. 2,76,000 has been actually estimated in the revised estimate as being necessary for expenditure during the current year. What I should like to urge upon the Hon'ble Minister is that any investment on this Bellara Gold Mine is certainly worthwhile and I hope that Government will make up its mind to actually spend the money that was provided in the previous year and also make up its mind to invest the amount that is provided in the coming year's budget.

While I am referring to the Bellara Gold Mine, I should also invite the attention of the Hon'ble Minister to the fact that practically unlimited

(SRI M. V. RAMA RAO.)

quantities of manganese ore are being mined in Chiknaikanhalli Taluk near the area where the Bellara Gold Mine is situated. I would like the Hon'ble Minister to interest himself to the extent of having the question of mining manganese ore at the instance of Government examined in all its implications and to consider the feasibility of undertaking manganese mining as a Government enterprise. The information furnished by Government in reply to an interpellation during the course of this session indicated that quite a huge quantity of manganese ore has been actually mined and exported and that the increase in the quantity exported was of the order of 300 per cent compared to the previous period. Having regard to all these factors I suggest that Government should examine the feasibility of undertaking manganese ore mining in Tumkur District.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ನಮ್ಮ ದೇಶದಲ್ಲಿ ಕೈಗಾರಿಕೆಗಳನ್ನು 10—20 ವರ್ಷಗಳಿಂದ ಸರ್ಕಾರದವರು ನಡೆಸುತ್ತಿದ್ದಾರೆ. ಆದರೂ ಸಹ ಕೆಲವು ಕೈಗಾರಿಕೆಗಳು ವ್ಯಾಪಾರದ ದೃಷ್ಟಿಯಿಂದ ಸಮರ್ಪಕವಾಗಿ ನಡೆಯುತ್ತಿಲ್ಲ, ಸರ್ಕಾರಿ ಅಧಿಕಾರಿಗಳ ಮನೋಭಾವನೆಯನ್ನು ಅವಲಂಬಿಸಿ ನಡೆಯುತ್ತಿವೆಯೆಂಬುದನ್ನು ವ್ಯಸನಪೂರ್ವಕವಾಗಿ ಹೇಳಬೇಕಾಗಿದೆ.

ಸರ್ಕಾರದವರು ಸಹ ವಿಶೇಷವಾಗಿ ಬಂಡವಾಳವನ್ನು ಹಿಂದೂಸ್ಥಾನ್ ಏರ್‌ಕ್ರ್ಯಾಫ್ಟ್ ಕಂಪೆನಿಯಲ್ಲಿ, ಇಂಡಿಯನ್ ಟೆಲಿಫೋನ್ ಇಂಡಸ್ಟ್ರಿಯಲ್ಲಿ, Radio and Electrical ಕಂಪೆನಿಯಲ್ಲಿ ಹಾಕಿರುತ್ತಾರೆ. ಆದರೆ ಇವುಗಳಿಂದ ಸರ್ಕಾರಕ್ಕೆ ಬರುತ್ತಿರುವ ಲಾಭವಾದರೂ ಅತ್ಯಲ್ಪ. ಇನ್ನು ಸರ್ಕಾರದ ಕೈವಾಡವಿರುವ ಎಲೆಕ್ಟ್ರಿಕ್ ಫ್ಯಾಕ್ಟರಿ, ಪೋರ್ಸಿಲೇನ್ ಫ್ಯಾಕ್ಟರಿಗಳನ್ನು ತೆಗೆದುಕೊಂಡರೆ ಅವುಗಳ ಅವ್ಯವಸ್ಥೆಯನ್ನು ಹೇಳತೀರದು. ಅಲ್ಲಿ ಸರಿಯಾಗಿ ಕೆಲಸ ಮಾಡುವವರಿಲ್ಲ, ಆಡಳಿತವನ್ನು ಸಹ ಸರಿಯಾಗಿ ನಡೆಸುವವರಿಲ್ಲ. ಇನ್ನು ಕೆಲವು ಕಾರ್ಖಾನೆಗಳಲ್ಲಂತೂ ಆಡಳಿತ ಪಕ್ಷದ ಮುಂದಾಳುಗಳನ್ನು ಸೇರಿಸಿ ಅವರ ಕೈಗೆ ಅಧಿಕಾರ ವಹಿಸಿರುತ್ತಾರೆ ಇಂತಹ ಕಡೆಗಳಲ್ಲಿ ಅನ್ಯಾಯವಾಗುವುದು ಗೋಚರವಾಗುತ್ತಿಲ್ಲ. ಭದ್ರಾವತಿ ಕಬ್ಬಿಣದ ಕಾರ್ಖಾನೆಯ ವಿಚಾರದಲ್ಲಿ . . . .

Sri H. SIDDAVEERAPPA.—All these have been exhaustively dealt with.

Mr. SPEAKER.—No, no. If you mention all these, he will have to reply and that takes away the time.

ಶ್ರೀ ಬಿ. ಹುಚ್ಚೇಗೌಡ.—ಇಲ್ಲಿ ನೌಕರಿಗಳನ್ನು ಕೊಡಬೇಕಾದರೆ ಹೆಚ್ಚಾಗಿ ಶಿಫಾರಸಿನಮೇಲೆ ಕಾರ್ಯಕ್ರಮ ನಡೆಯುತ್ತಿದೆ. ಅರ್ಹತೆ, ದಕ್ಷತೆ, ಜವಾಬ್ದಾರಿ ವಹಿಸಲು ಯೋಗ್ಯರು ಯಾರು ಎಂಬ ವಿಚಾರಗಳಿಗೆ ನಿಗಾ ಕೊಡುತ್ತಿಲ್ಲ.

Sri H. SIDDAVEERAPPA.—I have already said that I will look into that matter.

ಶ್ರೀ ಬಿ. ಹುಚ್ಚೇಗೌಡ.—ಅದರಂತೆಯೇ Sugar Factory ಯಲ್ಲಿಯೂ ಅವ್ಯವಸ್ಥೆಯಾಗಿದೆಯೆಂದು ಕೇಳಿದೆ. ಇಂಥ ಉದ್ಯಮದ ಕೆಲಸವನ್ನು non-officials ನಿರ್ವಹಿಸಿಕೊಳ್ಳಲು ಸಾಧ್ಯವಾಗದಿದ್ದರೆ ದಕ್ಷರಾದ ಅಧಿಕಾರಿಯೊಬ್ಬರನ್ನು, ಈ ಉದ್ಯಮದಲ್ಲಿ ಅರಿತು ನುರಿತ ಅಧಿಕಾರಿಯೊಬ್ಬರನ್ನು ಇದರ ಮೇಲ್ವಿಚಾರಣೆಗೆ ಹಾಕುವುದು ಉತ್ತಮವೆಂದು ಸಲಹೆ ಮಾಡುತ್ತೇನೆ. ಇಂಥ ಕಾರ್ಖಾನೆಗಳಲ್ಲಿ ಬಹಳ ಅನ್ಯಾಯವಾಗುತ್ತಿದೆ. ಇವುಗಳಲ್ಲಿ ಸಮರ್ಪಕವಾದ ಆಡಿಟ್ ವ್ಯವಸ್ಥೆ ಇಲ್ಲ. Supervision ಸರಿಯಾಗಿಲ್ಲ. ಇವೆಲ್ಲವನ್ನೂ ಕೂಲಂಕಷವಾಗಿ ಪರಿಶೀಲಿಸಿ ಈ ಬಗ್ಗೆ ಒಂದು ವ್ಯವಸ್ಥಿತ ಏರ್ಪಾಡನ್ನು ಮಾಡಲು ಸಮಿತಿಯೊಂದನ್ನು ರಚಿಸಿ ಸರಿಪಡಿಸಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಶ್ರೀಮಾನ್ ಬಿ. ಹುಚ್ಚೇಗೌಡರು ಹಿಂದೂಸ್ಥಾನ್ ಏರ್‌ಕ್ರ್ಯಾಫ್ಟ್ ಮತ್ತು ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್‌ನಿಂದ ಸರ್ಕಾರಕ್ಕೆ ಫಾಯಿದೆಯೇನೂ ಆಗುತ್ತಿಲ್ಲವೆಂದು ಹೇಳಿದರು. ಒಂದು ಸಾರಿ ಈ ಹಿಂದೂಸ್ಥಾನ್ ಏರ್‌ಕ್ರ್ಯಾಫ್ಟ್‌ನಿಂದ ಯಥೇಚ್ಛವಾಗಿ ಲಾಭ ಸರ್ಕಾರಕ್ಕೆ ಬಂದಿದೆ. ಇತ್ತೀಚೆಗೆ ಇದನ್ನು capitalise ಮಾಡುತ್ತಿದ್ದಾರೆ. ನಾವು ಇಂಡಿಯಾ ಸರ್ಕಾರದವರಿಗೆ ನಮ್ಮ ದುಡ್ಡು ಬಹಳ ಇದೆ, ಆದುದರಿಂದ ಇದರ ಲಾಭದಲ್ಲಿ ನಮಗೊಂದು ಭಾಗಕೊಡಬೇಕೆಂದೂ, ನಮಗೆ preferential treatment ಕೊಡಬೇಕೆಂದೂ ಕೇಳಿದ್ದೇವೆ. ಬಹುಶಃ ಇಂಡಿಯಾ ಸರ್ಕಾರದವರು ಇದಕ್ಕೆ ಮನ್ನಣೆ ಕೊಟ್ಟಾರು ಎಂಬ ಭರವಸೆ ಇದೆ.

ಶ್ರೀಮಾನ್ ಎಂ. ವಿ. ರಾಮರಾಯರು ಬೆಳ್ಳಾರ ಬಂಗಾರದ ಗಣಿ ವಿಚಾರದಲ್ಲಿ ಹೆಚ್ಚಿನ ಹಣವನ್ನು ಖರ್ಚು ಮಾಡುವ ಅಂಶವನ್ನು ವ್ಯಕ್ತಪಡಿಸಿದರು. ಇದು remunerative ಆಗಿದೆಯೇ ಅಥವಾ unremunerative ಆಗಿದೆಯೇ ಎಂಬ ವಿಚಾರದಲ್ಲಿ ಸಂದೇಹ ಬಂದು, ಈ ಬಗ್ಗೆ expert committee ಒಂದನ್ನು ಏರ್ಪಡಿಸಿದ್ದು, ಅವರು ಈ ಉದ್ಯಮವನ್ನು ಕೈಗೊಳ್ಳಬಹುದು ಎಂಬುದಾಗಿ ಸಲಹೆ ಇತ್ತಿದ್ದಾರೆ. ಇನ್ನುಮೇಲೆ ಈ ಬಗ್ಗೆ ಮುಂದಿನ ಕಾರ್ಯಕ್ರಮವನ್ನು ಮುಂದುವರಿಸಬೇಕಾಗಿದೆ. ಈ ಕೆಲಸದ ಬಗ್ಗೆ ಕಾರ್ಯ ಪ್ರಾರಂಭಿಸಿದಾಗಿನಿಂದ ನಷ್ಟವಾಗುತ್ತಿದೆ.

Sri M. V. RAMA RAO.—Probably there was no equipment and hence the loss.

ಶ್ರೀ ಎಚ್. ಸಿದ್ದವೀರಪ್ಪ.—ಇದಕ್ಕೂ ಸರ್ಕಾರದವರು ತಯಾರಾಗಿದ್ದಾರೆ. ಇನ್ನು ಈ Mine ಬಗ್ಗೆ ಕಾರ್ಯಕ್ರಮ ಕೈಗೊಳ್ಳಲು ಸಮಿತಿಯೊಂದನ್ನು ರಚಿಸಿ, ಆ ಸಮಿತಿಯ ವರದಿ ಬಂದಮೇಲೆ ಮುಂದಿನ ಕಾರ್ಯ ಚಟುವಟಿಕೆಗೆ ಕೈ ಹಾಕಬೇಕಾಗುತ್ತದೆ. ಇನ್ನು 2—3 ದಿನಗಳಲ್ಲಿ ಈ ಸಮಿತಿಯೊಂದನ್ನು announce ಮಾಡಿ ಆದಷ್ಟು ಜಾಗ್ರತೆ, ವರದಿ ಬಂದ

ಮೇಲೆ, ಕ್ರಮ ಕೈಗೊಳ್ಳುತ್ತೇವೆ. ಇಂಥ ಉದ್ಯಮಗಳನ್ನೆಲ್ಲಾ ಸರ್ಕಾರದವರೇ ಕೈಗೊಳ್ಳುವುದೆಂದರೆ ಅಸಾಧ್ಯವಾದ ಕೆಲಸ. ಖಾಸಗೀ ಮಹನೀಯರುಗಳು ಸೇರಿ ಕಂಪೆನಿಯೊಂದನ್ನು ಸ್ಥಾಪನೆ ಮಾಡಿಕೊಂಡು ಮುಂದೆ ಬಂದರೆ ಸರ್ಕಾರದವರು ತಮ್ಮ ಕೈಲಾದ ಸಹಾಯವನ್ನು ನೀಡಬಹುದು. ಇನ್ನು ಕೈಗಾರಿಕೆಗಳನ್ನು ರಾಷ್ಟ್ರೀಕರಣ ಮಾಡುವ ವಿಚಾರದಲ್ಲಿ ಹಲವು ಉಪಯುಕ್ತ ಸಲಹೆಗಳು ಬಂದಿವೆ. ಇವನ್ನೆಲ್ಲಾ ಕೂಲಂಕಷವಾಗಿ ಆಲೋಚನೆಮಾಡಿ ಸರ್ಕಾರದವರು ಸೂಕ್ತಕಾರ್ಯಕ್ರಮವನ್ನು ಕೈಗೊಳ್ಳುತ್ತಾರೆ.

ಶ್ರೀ ಎಸ್. ಗೋಪಾಲ ಗೌಡ (ಸಾಗರ—ಹೊಸನಗರ).—ಕೈಗಾರಿಕೆಗಳ ಬಗ್ಗೆ ಒಂದು High Power Directorate ಒಂದನ್ನು ರಚನೆ ಮಾಡಬೇಕೆಂಬ ಸಲಹೆ ಇತ್ತಿದೆ. ಆ ಬಗ್ಗೆ ಏನು ಕಾರ್ಯಕ್ರಮ ಕೈಗೊಳ್ಳುತ್ತೀರಿ ? ಆಮೇಲೆ ಈಗಿರತಕ್ಕ ಕೈಗಾರಿಕೆಗಳು ಯಾವ ರೀತಿ ನಡೆಯುತ್ತಿವೆಯೆಂಬುದನ್ನು ಸೂಕ್ಷ್ಮವಾಗಿ ವಿಚಾರ ಮಾಡುವುದಕ್ಕೆ ಒಂದು ಸಮಿತಿಯನ್ನು ರಚಿಸಬೇಕೆಂದು ಸರ್ಕಾರದವರನ್ನು ಕೋರುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಹೈ ಪವರ್ ಕಮಿಟಿಯೊಂದನ್ನು ರಚನೆ ಮಾಡುವ ವಿಚಾರ ಇನ್ನೂ ಸರ್ಕಾರದ ಪರಿಶೀಲನೆಯಲ್ಲಿದೆ. ಈ ಬಗ್ಗೆ ಸರ್ಕಾರದವರು ಯಾವ ತೀರ್ಮಾನಕ್ಕೂ ಬಂದಿಲ್ಲ. ಇನ್ನು ಈಗ ಸರ್ಕಾರದವರಿಗೆ ಯಾವಯಾವ ಕೈಗಾರಿಕೆ ಯಾವ ರೀತಿ ಕೆಲಸ ಮಾಡುತ್ತಿದೆಯೆಂಬ ಬಗ್ಗೆ ಅರಿವು ಉಂಟಾಗಿದೆ. ಇವುಗಳು ಮುಂದುವರಿಯುವುದಕ್ಕೆ ಈಗಾಗಲೇ ಕೆಲವು ಕಾರ್ಯಕ್ರಮ ಕೈಗೊಂಡಿದೆ. ಇದೂ ವಿಫಲವಾದರೆ ಆಗ ತಮ್ಮ ಸಲಹೆಯಂತೆ ಹೊಸದೊಂದು ಸಮಿತಿಯನ್ನು ರಚನೆ ಮಾಡುವುದಕ್ಕೆ ಸರ್ಕಾರದ ಅಭ್ಯಂತರವಿಲ್ಲ.

ಶ್ರೀ ಎಂ. ವಿ. ರಾಮರಾವ್.—ಗಣಿ ಸಮಿತಿಯು ಖಾಸಗೀ ಸಮಿತಿಯೋ ಅಥವಾ expert ಸಮಿತಿಯೊ ?

ಶ್ರೀ ಎಚ್. ಸಿದ್ದವೀರಪ್ಪ.—ಆ ಸಮಿತಿಯಲ್ಲಿ experts ಇರುತ್ತಾರೆ ಮತ್ತು ಖಾಸಗಿಯವರೂ ಇರುತ್ತಾರೆ.

Mr. SPEAKER.—The question is :

"That a sum not exceeding Rs. 1,81,30,000 be granted to the Government to defray the charges which will come in course of payment during the year ending 31st day of March 1955 in respect of 'Capital Outlay on Industrial Development'."

The motion was adopted.

Mr. SPEAKER.—The House will now rise for the day and meet tomorrow at 8-30 A.M.

The House adjourned for the day at Five of the Clock to meet again at Thirty Minutes past Eight of the Clock on Saturday, the 27th March 1954.

WD 1581—GPB—550—20-7-54